# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 22 ಭಾನುವಾರ 2024

₹4

ಸಂಪುಟ: 45 | ಸಂಚಿಕೆ: 245 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23


ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com

ಜಾಹೀರಾತು: ad@mysurumithra.com, website: www.mysurumithra.com



## “ಜವಾಬ್ದಾರಿಯುತ ಪ್ರಚಾರವು ಸೂಕ್ತ ಪರಿಶೀಲನೆಯಿಂದ ಪ್ರಾರಂಭವಾಗುತ್ತದೆ.”

– ತನಿಕೆಲ್ಲಾ ಭರಣಿ

ಫ್ರೀಡಂ ಸನ್‌ಫ್ಲವರ್ ಆಯಿಲ್‌ನ ಇತ್ತೀಚಿನ ಟಿವಿ ಜಾಹಿರಾತಿನಲ್ಲಿ ನ್ಯಾಯಾಧೀಶರಾಗಿ ನಟಿಸಿರುವ ಶ್ರೀ ಭರಣಿ ಅವರು ಶುದ್ಧತೆ ಮತ್ತು ರುಚಿಯ ವಿಷಯಕ್ಕೆ ಬಂದಾಗ ಭಾರತದ ನಂ.1* ಮಾರಾಟದ ಫ್ರೀಡಂ ಸನ್‌ಫ್ಲವರ್ ಆಯಿಲ್ ಖಂಡಿತವಾಗಿಯೂ ವಿಜೇತವಾಗಿದೆ ಎಂದು ತೀರ್ಪು ನೀಡಿದ್ದಾರೆ. ಆದರೆ ಜವಾಬ್ದಾರಿಯುತ ಸೆಲೆಬ್ರಿಟಿಯಾಗಿ, ಭರಣಿ ಅವರು ವ್ಯವಹಾರಿಕ ಜಾಗೃತಿಯಾಚೆಗೆ ಹೋಗಲು ತೀರ್ಮಾನಿಸಿದರು ಮತ್ತು ಬ್ರ್ಯಾಂಡ್ ಅದರ ಭರವಸೆಗಳನ್ನು ಸಕ್ರಿಯವಾಗಿ ನಿಭಾಯಿಸುತ್ತಿದೆಯೆಂಬುದನ್ನು ಖಚಿತಪಡಿಸಿಕೊಳ್ಳಲು ಅಗತ್ಯವಾದ ಸೂಕ್ತ ಪರಿಶೀಲನೆ ನಡೆಸಿದರು.

*ಸನ್‌ಫ್ಲವರ್ ಆಯಿಲ್ ವಿಭಾಗ, ರಿಫೈಂಡ್ ಆಯಿಲ್ ಕನ್ಸ್ಯೂಮರ್ ಪ್ಯಾಕ್ (ROCP) ಕೆಟಗರಿಯಲ್ಲಿ ಆಲ್ ಇಂಡಿಯಾ (U+R) ಮಾರುಕಟ್ಟೆಗೆ MAT ಫೆಬ್ರವರಿ 24 ರ ಆಧಾರ NIQ ರಿಟೈಲ್ ಇಂಡೆಕ್ಸ್ ಡೇಟಾ ಪ್ರಕಾರ ಜೆಮಿನಿ ಎಡಿಬಲ್ಸ್ ಮತ್ತು ಫ್ಯಾಟ್ಸ್ ಇಂಡಿಯಾ ಲಿಮಿಟೆಡ್ ಕ್ಲೈಮ್ ಅನ್ನು ಹೊಂದಿದೆ.

- **ಶ್ರೀ ಭರಣಿ, ಕಾಕಿನಾಡಾದಲ್ಲಿರುವ ಫ್ರೀಡಂ ಸನ್‌ಫ್ಲವರ್ ಆಯಿಲ್ ಫ್ಯಾಕ್ಟರಿಗೆ ಭೇಟಿ ನೀಡಲು ನಿಮಗೆ ಪ್ರೇರಣೆಯಾಗಿದ್ದು ಯಾವುದು?**

ಶ್ರೀ ಭರಣಿ : "ಜವಾಬ್ದಾರಿಯುತ ಪ್ರಚಾರವು ಸೂಕ್ತ ಪರಿಶೀಲನೆಯಿಂದ ಪ್ರಾರಂಭವಾಗುತ್ತದೆ ಎಂಬುದನ್ನು ನಾನು ದೃಢವಾಗಿ ನಂಬುತ್ತೇನೆ. ಕಾಕಿನಾಡದಲ್ಲಿರುವ ಫ್ಯಾಕ್ಟರಿಗೆ ಭೇಟಿ ನೀಡಬೇಕೆಂದು ನಿರ್ಣಯಿಸಿದೆ. ತೈಲವನ್ನು ಹೇಗೆ ತಯಾರು ಮಾಡುತ್ತಾರೆ ಎಂಬುದನ್ನು ಪ್ರತ್ಯಕ್ಷವಾಗಿ ನೋಡಲು ನಾನು ಭಾವಿಸಿದೆ. ಹಾಗೆಯೇ ಫ್ರೀಡಂ ವಾಗ್ದಾನ ಮಾಡಿದ ಉನ್ನತ ಗುಣಮಟ್ಟಕ್ಕೆ ಆ ತೈಲವು ಅನುಗುಣವಾಗಿದೆಯೇ ಎಂದು ನೋಡಲು ಬಯಸಿದೆ."

- **ಫ್ಯಾಕ್ಟರಿಯ ಬಗ್ಗೆ ನಿಮಗೆ ಮೊದಲ ಪ್ರಭಾವವೇನು?**

ಶ್ರೀ ಭರಣಿ : "ನನ್ನನ್ನು ಮೊದಲು ಆಕರ್ಷಿಸಿದ ವಿಷಯವೆಂದರೆ ಕಾರ್ಯಾಚರಣೆಯ ಸಂಪೂರ್ಣ ವ್ಯಾಪ್ತಿ ಘಟಕವು ಬಹಳ ವಿಸ್ತಾರವಾಗಿತ್ತು, ಯಂತ್ರೋಪಕರಣಗಳು ಅತ್ಯಾಧುನಿಕವಾಗಿದ್ದವು, ಮತ್ತು ನೈರ್ಮಲ್ಯ ಪ್ರಥಮ ಸ್ಥಾನದಲ್ಲಿತ್ತು. ಪ್ರಾರಂಭದಿಂದಲೇ ಫ್ರೀಡಂನ ಗುಣಮಟ್ಟದ ಬದ್ಧತೆಯು ನನಗೆ ಸ್ಪಷ್ಟವಾಗಿತ್ತು."

- **ನೀವು ತಯಾರಿಕಾ ಪ್ರಕ್ರಿಯೆಯ ಬಗ್ಗೆ ಏನನ್ನು ಕಲಿತಿರಿ?**

ಶ್ರೀ ಭರಣಿ : "ಇಡೀ ಪ್ರಕ್ರಿಯೆಯನ್ನು ಕಂಪ್ಯೂಟರ್‌ಗಳು ಕೇಂದ್ರೀಯವಾಗಿ ನಿಯಂತ್ರಿಸುತ್ತವೆ. ಇದು ಸ್ವಯಂಚಾಲಿತವಾಗಿದೆ – ಭರ್ತಿ ಮಾಡುವುದು ಮತ್ತು ಕ್ಯಾಪಿಂಗ್ ಮಾಡುವುದರಿಂದ ಹಿಡಿದು ಲೇಬಲಿಂಗ್ ಮತ್ತು ಪ್ಯಾಕಿಂಗ್‌ವರೆಗೆ ರೋಬೋಟ್‌ಗಳು ಮತ್ತು ಯಂತ್ರಗಳು ಎಲ್ಲವನ್ನೂ ನಿರ್ವಹಿಸುತ್ತವೆ. ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರ (FSSAI) ದ ಮಾನದಂಡಗಳ ಪ್ರಕಾರ ಸ್ಥಿರ ಮತ್ತು ಅತ್ಯುನ್ನತ ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು ಅವರು ಸಂಸ್ಕರಣಾ ಪ್ರಕ್ರಿಯೆಯಲ್ಲಿ ಅತ್ಯಾಧುನಿಕ ನ್ಯಾನೋ ಟೆಕ್ನಾಲಜಿಯನ್ನು ಸಹ ಬಳಸುತ್ತಾರೆ."

- **ಉತ್ಪನ್ನದ ಗುಣಮಟ್ಟದ ಮೇಲೆ ಆಟೋಮೇಷನ್ ಹೇಗೆ ಪರಿಣಾಮ ಬೀರುತ್ತದೆ?**

ಶ್ರೀ ಭರಣಿ : "ಹ್ಯಾಂಡ್ಸ್–ಫ್ರೀ, ಆಟೋಮೇಟೆಡ್ ಪ್ರಕ್ರಿಯೆಯು ಯಾವುದೇ ಹಂತದಲ್ಲಿ ಕಲುಷಿತಗೊಳ್ಳುವ ಅವಕಾಶವಿಲ್ಲ ಎಂಬುದನ್ನು ಖಚಿತಪಡಿಸುತ್ತದೆ. ಅದರ ಜೊತೆಗೆ ಅವರು 101 ಕ್ವಾಲಿಟಿ ಚೆಕ್ಸ್ ಅನ್ನು ನಿರ್ವಹಿಸುವ ಹೈ–ಟೆಕ್ ಗುಣಮಟ್ಟದ ಪ್ರಯೋಗಾಲಯವನ್ನು ಸಹ ಹೊಂದಿದ್ದಾರೆ."

- **ಭೇಟಿಯಿಂದ ನಿಮ್ಮ ಅಂತಿಮ ತೀರ್ಮಾನವೇನು ?**

ಶ್ರೀ ಭರಣಿ : "ಫ್ರೀಡಂ ತನ್ನ ಗ್ರಾಹಕರಿಗೆ ನೀಡುವ ಗುಣಮಟ್ಟದ ಬಗ್ಗೆ ನಿಜವಾಗಿಯೂ ಕಾಳಜಿ ವಹಿಸುತ್ತದೆ ಎಂದು ಹೇಳಲು ನನಗೆ ಸಂತೋಷವಾಗಿದೆ. ಅವರ ಬದ್ಧತೆಯು ಪ್ರಭಾವಶಾಲಿಯಾಗಿದೆ, ಆದ್ದರಿಂದಲೇ ಅವರು ಭಾರತದ ನಂ.1* ಸನ್‌ಫ್ಲವರ್ ಆಯಿಲ್ ಮಾರಾಟ ಮಾಡುವ ಬ್ರ್ಯಾಂಡ್ ಆಗಿದ್ದಾರೆ."

Promotional Feature





# ವಿಜಯನಗರ ಉಪವಿಭಾಗದ ಠಾಣಾ ವ್ಯಾಪ್ತಿಯ ರೌಡಿಗಳಿಗೆ ಪೊಲೀಸರ ಎಚ್ಚರಿಕೆ ಪಾಠ



ಹೆಬ್ಬಾಳು ಪೊಲೀಸ್ ಠಾಣೆಯಲ್ಲಿ ಡಿಸಿಪಿ ಮುತ್ತುರಾಜ್ ವಿಜಯನಗರ ಉಪವಿಭಾಗದ ರೌಡಿಗಳಿಗೆ ಪರೇಡ್ ನಡೆಸಿದರು.

## ಹೆಬ್ಬಾಳು ಠಾಣೆಯಲ್ಲಿ ರೌಡಿ ಪರೇಡ್

ಮೈಸೂರು, ಡಿ.21(ಆರ್‌ಕೆ)– ಮೈಸೂರಿನ ಹೆಬ್ಬಾಳು ಪೊಲೀಸ್ ಠಾಣೆಯಲ್ಲಿ ಇಂದು ಬೆಳಗ್ಗೆ ವಿಜಯನಗರ ಉಪ ವಿಭಾಗದ 4 ಠಾಣೆಗಳ ವ್ಯಾಪ್ತಿಯ 101 ರೌಡಿಗಳಿಗೆ ಪೊಲೀಸ್ ಅಧಿಕಾರಿಗಳು ಖಡಕ್ ಎಚ್ಚರಿಕೆ ಪಾಠ ಮಾಡಿದರು.

ಹೆಬ್ಬಾಳು, ವಿಜಯನಗರ, ಮೇಟಗಳ್ಳಿ ಹಾಗೂ ಸರಸ್ವತಿಪುರಂ ಠಾಣೆಗಳ ವ್ಯಾಪ್ತಿಯ ರೌಡಿಶೀಟರ್‌ಗಳ ಕರೆಸಿ ಪರೇಡ್ ಮಾಡಿದ ಡಿಸಿಪಿ ಎಂ.ಮುತ್ತುರಾಜ್ ಅವರು, ರಿಯಲ್ ಎಸ್ಟೇಟ್, ಹಣಕಾಸು ಲೇವಾದೇವಿ, ಚೀಟಿ ವ್ಯವಹಾರ, ಬಡ್ಡಿ ವಸೂಲಿ, ನಿವೇಶನ, ಆಸ್ತಿ ವಿವಾದಗಳಲ್ಲಿ ಮಧ್ಯಸ್ಥಿಕೆ ವಹಿಸುವುದು, ಅಮಾಯಕರಿಂದ ಹಣ ಸುಲಿಗೆಯಂತಹ ಕೃತ್ಯಗಳಲ್ಲಿ ತೊಡಗಿ ಅಶಾಂತಿ ಉಂಟು ಮಾಡಿದರೆ ಪ್ರಕರಣ ದಾಖಲಿಸಿ ಶಾಶ್ವತವಾಗಿ ಜೈಲಿಗೆ ಕಳುಹಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಸಮಾಜಘಾತುಕ ಕೃತ್ಯಗಳು, ಗುಂಪು ಘರ್ಷಣೆ, ಬಾರ್‌ನಲ್ಲಿ ಗಲಾಟೆ, ತಡರಾತ್ರಿ ಅನಗತ್ಯ ಓಡಾಟ, ಮಾರಕಾಸ್ತ್ರಗಳಿಡಿದು ಬೆದರಿಸುವುದು ಕಂಡುಬಂದರೆ ಮುಲಾಜಿಲ್ಲದೆ ಕಾನೂನು ರೀತಿಯ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದ ಅವರು, ಯಾವುದಾದರೊಂದು ವೃತ್ತಿಯಲ್ಲಿ ತೊಡಗಿಸಿಕೊಂಡು ಎಲ್ಲರಂತೆ ಗೌರವಯುತವಾಗಿ ಜೀವನ ನಡೆಸಿ ಅವಲಂಬಿತರಿಗೆ ಆಶ್ರಯವಾಗುವಂತೆಯೂ ಸಲಹೆ ನೀಡಿದರು.

ಹೆತ್ತು-ಹೊತ್ತು, ಸಾಕಿ-ಸಲುಹಿದ ತಂದೆ-ತಾಯಿ, ಬಂಧು-ಬಳಗದವರಿಗೆ ಗೌರವ ನೀಡಿ, ನೆರೆ-ಹೊರೆಯ ಅಥವಾ ಸಮಾಜದೊಂದಿಗೆ ಸೌಜನ್ಯದಿಂದ ನಡೆದುಕೊಂಡು ಸನ್ನಡತೆ ಬೆಳೆಸಿಕೊಂಡರೆ ಕಾನೂನಿನ ವ್ಯಾಪ್ತಿಯಲ್ಲಿ ಸಹಾಯ ಮಾಡಬಹುದು. ಶಾಂತಿಯುತವಾಗಿ ಬೇರೆಯವರಿಗೆ ತೊಂದರೆಯಾಗದಂತೆ ನಿಮ್ಮ ನಡತೆ ಇರಬೇಕು ಎಂದು ಮುತ್ತುರಾಜ್ ರೌಡಿಶೀಟರ್‌ಗಳಿಗೆ ಕಿವಿಮಾತು ಹೇಳಿದರು. ವಿಜಯನಗರ ಉಪವಿಭಾಗದ ಎಸಿಪಿ ಎಸ್.ಜಿ.ಗಜೇಂದ್ರ ಪ್ರಸಾದ್, ಇನ್‌ಸ್ಪೆಕ್ಟರ್‌ಗಳಾದ ಎ.ಮಲ್ಲೇಶ್, ದಿವಾಕರ್, ಸುರೇಶ್‌ಕುಮಾರ್, ಪುರುಷೋತ್ತಮ್ ಈ ಸಂದರ್ಭದಲ್ಲಿದ್ದರು.

# ನಾಳೆ ಹೆಚ್.ಡಿ. ಕೋಟೆಯಲ್ಲಿ ರೈತ ಕಲ್ಯಾಣೋತ್ಸವ

ಮೈಸೂರು, ಡಿ.21(ಜಿಎ)–ಕರ್ನಾಟಕ ರಾಜ್ಯ ರೈತಕಲ್ಯಾಣ ಸಂಘದ ವತಿಯಿಂದ ಡಿ.23ರಂದು ಬೆಳಗ್ಗೆ 11 ಗಂಟೆಗೆ ಹೆಚ್.ಡಿ.ಕೋಟೆ ತಾಲೂಕಿನ ಡಾ.ಬಿ.ಆರ್. ಅಂಬೇಡ್ಕರ್ ಭವನದಲ್ಲಿ ರೈತ ಕಲ್ಯಾಣೋತ್ಸವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಸಿ.ಚಂದನ್‌ಗೌಡ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕ ಅನಿಲ್ ಚಿಕ್ಕಮಾದು ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಸಂಸದ ಸುನೀಲ್ ಬೋಸ್, ಮಾಜಿ ಶಾಸಕರಾದ ಎಂ.ಶಿವಣ್ಣ, ಚಿಕ್ಕಣ್ಣ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ್ ರೆಡ್ಡಿ, ಅರಣ್ಯ ಸಂರಕ್ಷಣಾಧಿಕಾರಿ ಡಾ.ಎಂ.ಮಾಲತಿಪ್ರಿಯ, ಕೃಷಿ ಇಲಾಖೆಯ ಜಂಟಿ ನಿರ್ದೇಶಕ ಕೆ.ಹೆಚ್.ರವಿ, ಪೊಲೀಸ್ ಅಧೀಕ್ಷಕ ಎನ್.ವಿಷ್ಣುವರ್ಧನ್, ಹೆಚ್.ಡಿ.ಕೋಟೆ ತಾಲೂಕಿನ ತಹಶೀಲ್ದಾರ್ ಶ್ರೀನಿವಾಸ್, ಸರಗೂರು ತಹಶೀಲ್ದಾರ್ ಮೋಹನ್ ಕುಮಾರಿ ಮತ್ತಿತರರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿದ್ದಾರೆ ಎಂದರು.

ಸಂಘದಿಂದ ಹೋರಾಟಗಳನ್ನು ಮಾಡುವ ಬದಲು ರೈತರಿಗೆ ಬೇಕಿರುವ ತಾಂತ್ರಿಕ ಸಲಹೆ ನೀಡಲಾಗುತ್ತಿದ್ದು, ಮಣ್ಣಿನ ಗುಣಮಟ್ಟ ಹಾಗೂ ಪರಿಶೀಲನೆಯನ್ನು ಉಚಿತವಾಗಿ ಮಾಡಿಸಿಕೊಡಲಾಗುತ್ತಿದೆ. ಹೀಗೆ ನಿರಂತರವಾಗಿ ಕಳೆದ 2 ವರ್ಷಗಳಿಂದ ಅನ್ನದ ಹಾಗೂ ರೈತರ ಋಣವನ್ನು ತೀರಿಸುತ್ತಿದ್ದೇವೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಸಂಘದ ಗೌರವ ಅಧ್ಯಕ್ಷ ಹೇಮಂತ್‌ಗೌಡ, ಹರೀಶ್ ಪಿ.ಗೌಡ, ರವಿಗೌಡ, ಎಸ್.ಬಿ.ಸಮಂತ್, ಅನಿಲ್, ನಾಗರಾಜು ಉಪಸ್ಥಿತರಿದ್ದರು.

# ಮೈಸೂರಲ್ಲಿ ವಿಶ್ವ ಧ್ಯಾನ ದಿನಾಚರಣೆ



ಮಾನಸಗಂಗೋತ್ರಿಯಲ್ಲಿರುವ ಬಯಲು ರಂಗಮಂದಿರದಲ್ಲಿ ವಿಶ್ವ ಧ್ಯಾನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಮೈಸೂರು, ಡಿ.21(ಆರ್‌ಕೆ)– ಮೈಸೂರಿನ ಮಾನಸಗಂಗೋತ್ರಿಯಲ್ಲಿರುವ ಬಯಲು ರಂಗಮಂದಿರದಲ್ಲಿ ಇಂದು ಬೆಳಗ್ಗೆ ವಿಶ್ವ ಧ್ಯಾನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾನಿಲಯ, ಆಯುಷ್ ಇಲಾಖೆ ಹಾಗೂ ವಿವಿಧ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿದ್ದ ಕಾರ್ಯಕ್ರಮವನ್ನು ಬಿ.ಕೆ. ಲಕ್ಷ್ಮೀಜಿ ಅವರು ಉದ್ಘಾಟಿಸಿ ಧ್ಯಾನ ದಿನಾಚರಣೆಗೆ ಶ್ರಮಿಸಿದ ವಿವಿಧ ಸಂಘ-ಸಂಸ್ಥೆಗಳ ಮುಖ್ಯಸ್ಥರನ್ನು ಸನ್ಮಾನಿಸಿದರು.

ಶಿರಸಿಯಿಂದ ಆಗಮಿಸಿದ್ದ ಬಿ.ಕೆ. ವೀಣಾಜಿ ಅವರು ಮಾತನಾಡಿ, ಕೋಪ-ತಾಪ, ಅಸಹಾಯಕತೆ, ತಿಕ್ಕಾಟ, ಗೊಂದಲ, ಒತ್ತಡದಿಂದ ಹೊರಬರಲು ಧ್ಯಾನ, ಪ್ರಶಾಂತತೆ ಅತ್ಯವಶ್ಯ. ಇದರಿಂದ ಶಾಂತಿಯುತ ಹಾಗೂ ಸಂತೃಪ್ತಿ ಜೀವನಕ್ಕೂ ಸಹಕಾರಿಯಾಗಲಿದೆ ಎಂದರು.

ಬೆಂಗಳೂರಿನ ಬಿ.ಕೆ.ರೂಪಾಜಿ ಅವರು ಮಾತನಾಡಿ, ಸಂಕಲ್ಪಗಳನ್ನು ಬಳಸಿಕೊಳ್ಳುವುದು, ಉಸಿರಾಟದ ಕಡೆ ಗಮನಹರಿಸುವುದು, ಮನಸ್ಸನ್ನು ಕೇಂದ್ರೀಕರಿಸಿ ಧ್ಯಾನ ಮಾಡುವುದು, ಶಾಂತಿ, ಪ್ರೀತಿಯನ್ನು ಬಿತ್ತರಿಸುವುದರಿಂದ ನೆಮ್ಮದಿ ಜೀವನ ಸಾಧ್ಯ ಎಂದು ತಿಳಿಸಿದರು.

ಜಿಲ್ಲಾ ಆಯುಷ್ ಅಧಿಕಾರಿ ಡಾ.ಪುಷ್ಪ, ಸರ್ಕಾರಿ ಆಯುರ್ವೇದ ಸಂಶೋಧನಾ ಕಾಲೇಜು ಸಹಾಯಕ ನಿರ್ದೇಶಕ ಡಾ.ಲಕ್ಷ್ಮಿನಾರಾಯಣ ಶೆಣೈ, ಶ್ರೀ ಪತಂಜಲಿ ಯೋಗ ಶಿಕ್ಷಣ ಸಂಸ್ಥೆಯ ಕಿರಣ್, ನಾಗೇಂದ್ರ ರಾಜೇ ಅರಸ್, ಲಯನ್ಸ್ ಕ್ಲಬ್‌ನ ಡಾ.ನಾಗರಾಜ ಭೈರಿ, ಎಸಿ ರವಿ, ಸಿರಿ ಬಾಲು, ಯೋಗ ಫೆಡರೇಷನ್‌ನ ಡಾ.ಗಣೇಶ್, ಭಾರತ್ ಸ್ವಾಭಿಮಾನ ಟ್ರಸ್ಟ್‌ನ ಶಶಿಕುಮಾರ್, ಆರ್ಟ್ ಆಫ್ ಲಿವಿಂಗ್‌ನ ಚನ್ನಕೇಶವ, ಯೋಗ ಒಕ್ಕೂಟದ ದೇವರಾಜ್ ಸೇರಿದಂತೆ ಹಲವು ಸಂಸ್ಥೆಗಳ ಪ್ರಮುಖರು ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

## ಅಭಿನಂದನೆ



ಅಖಿಲ ಭಾರತ ವೀರಶೈವ ಮಹಾಸಭಾ ಮೈಸೂರು ಘಟಕದ ಯುವ ಅಧ್ಯಕ್ಷರಾಗಿ ಆಯ್ಕೆಯಾದ ಅರ್ಜುನ್ ಅವರನ್ನು ಮಾಜಿ ಸಂಸದ ಪ್ರತಾಪ್ ಸಿಂಹ ಅಭಿನಂದಿಸಿದರು. ಚಿತ್ರದಲ್ಲಿ ಸಚಿನ್, ಲೋಹಿತ್ ಶರ್ಮ, ರವಿಕಿರಣ್, ಪ್ರತಾಪ್, ನಂದನ್, ಯೋಗೇಶ್ ಅವರನ್ನು ಕಾಣಬಹುದು.

## ಇಂದು ರಾಷ್ಟ್ರೀಯ ಗಣಿತಶಾಸ್ತ್ರ ದಿನಾಚರಣೆ

**ಮೈಸೂರು:** ಮೈಸೂರಿನ ಕಲಾಮಂದಿರದಲ್ಲಿ ಡಿ.22ರಂದು ಬೆಳಗ್ಗೆ 9 ಗಂಟೆಗೆ ರಾಷ್ಟ್ರೀಯ ಗಣಿತಶಾಸ್ತ್ರ ದಿನಾಚರಣೆ ಏರ್ಪಡಿಸಲಾಗಿದೆ. ಮುಖ್ಯ ಅತಿಥಿಗಳಾಗಿ ಪಿವಿಎಸ್‌ಎಂ, ವಿಎಸ್‌ಎಂ (ನಿವೃತ್ತ), ಇಂಡಿಯನ್ ಆರ್ಮಿ ಲೆಫ್ಟಿನೆಂಟ್ ಜನರಲ್ ಪಿ.ಸಿ.ತಿಮ್ಮಯ್ಯ, ಮ್ಯಾನೇಜ್‌ಮೆಂಟ್ ಕನ್ಸಲ್ಟೆಂಟ್ ಹರೀಶ್ ಮಾಚಯ್ಯ ಕೊಡಂಡೆರಾ ಭಾಗವಹಿಸುವರು.



## ಆರೋಗ್ಯ ವಿಚಾರಣೆ...

ಬೀದಿನಾಯಿಗಳ ದಾಳಿಯಿಂದ ಗಾಯಗೊಂಡು ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಬರಡನಪುರ ಗ್ರಾಮದ ಗುರುಸ್ವಾಮಿ ಅವರ ಪುತ್ರಿ ತ್ರಿಷಿಕಾಳ ಆರೋಗ್ಯವನ್ನು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ವಿಚಾರಿಸಿ, ಕುಟುಂಬ ವರ್ಗದವರಿಗೆ ಧೈರ್ಯ ತುಂಬಿದರು.

## ನೆನಪಿನ ಕಾಣಿಕೆ



ಮೈಸೂರು ಜಿಲ್ಲಾ ಪೊಲೀಸ್ ಆಯುಕ್ತರ ಕಚೇರಿಯಲ್ಲಿ ನಡೆದ ಎಸ್‌ಸಿ/ಎಸ್‌ಟಿ ಸಮುದಾಯದ ಕುಂದುಕೊರತೆಗಳ ಸಭೆಯಲ್ಲಿ ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಅವರಿಗೆ ಡಾ.ಬಿ.ಆರ್.ಅಂಬೇಡ್ಕರ್ ಕ್ಷೇಮಾಭಿವೃದ್ಧಿ ಸಂಘ, ಲಾಲ್ ಬಹದ್ದೂರ್ ಶಾಸ್ತ್ರಿನಗರ, ಶಾಂತವೇರಿ ಗೋಪಾಲಗೌಡ ನಗರದ ಪರವಾಗಿ ಸಂವಿಧಾನ ಪೀಠಿಕೆಯನ್ನು ನೆನಪಿನ ಕಾಣಿಕೆಯಾಗಿ ನೀಡಲಾಯಿತು.

# ಗಾಣಿಗರ ಸಂಘದಿಂದ ಪ್ರತಿಭಾ ಪುರಸ್ಕಾರ, ಗಣ್ಯರಿಗೆ ಸನ್ಮಾನ, ಕ್ಯಾಲೆಂಡರ್ ಬಿಡುಗಡೆ

ಮೈಸೂರು, ಡಿ.21(ಜಿಎ)–ಮೈಸೂರು ಜಿಲ್ಲಾ ಗಾಣಿಗರ ಸಂಘದ ವತಿಯಿಂದ ಡಿ.29ರಂದು ಬೆಳಿಗ್ಗೆ 10.30ಕ್ಕೆ ನಗರದ ದೇವರಾಜ ಮೊಹಲ್ಲಾದ ದಿವಾನ್ಸ್ ರಸ್ತೆಯ ಬಳಿ ಇರುವ ಮರಿಮಲ್ಲಪ್ಪ ಶಾಲೆ ಪಕ್ಕದ ಯಾದವ ಸಮುದಾಯ ಭವನದಲ್ಲಿ ಪ್ರತಿಭಾ ಪುರಸ್ಕಾರ, ಗಣ್ಯರಿಗೆ ಸನ್ಮಾನ ಹಾಗೂ 2025ನೇ ವರ್ಷದ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಎನ್.ಸಿ.ಉಮೇಶ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದು, ಶಾಸಕರಾದ ಜಿ.ಟಿ.ದೇವೇಗೌಡ, ಜಿ.ಡಿ. ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ ಕೆ.ಹರೀಶ್ ಗೌಡ, ವಿಧಾನಪರಿಷತ್ ಸದಸ್ಯರಾದ ಡಾ.ಯತೀಂದ್ರ, ಹೆಚ್.ವಿಶ್ವನಾಥ್, ಮಾಜಿ ಸಭಾಪತಿ ವಿ.ಆರ್.ಸುದರ್ಶನ್, ಮಾಜಿ ಶಾಸಕ ಎಲ್.ನಾಗೇಂದ್ರ, ಬಿಜೆಪಿ ಒಬಿಸಿ ಮೋರ್ಚಾದ ರಾಜ್ಯ ಅಧ್ಯಕ್ಷ ಆರ್.ರಘು ಕೌಟಿಲ್ಯ, ಅಖಿಲ ಕರ್ನಾಟಕ ಗಾಣಿಗರ ಸಂಘದ ಅಧ್ಯಕ್ಷ ಎಂ.ಆರ್. ರಾಜಶೇಖರ್ ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದರು. ಸುದ್ದಿಗೋಷ್ಠಿಯಲ್ಲಿ ಎ.ಟಿ.ಶ್ರೀನಿವಾಸ್, ಹೇಮಂತ್ ಕುಮಾರ್, ಜಿ.ವಿಜಯ್‌ಕುಮಾರ್, ಚಿಕ್ಕಹಳ್ಳಿ ವೆಂಕಟೇಶ್ ಉಪಸ್ಥಿತರಿದ್ದರು.

# ಕುದುರೆ ಜೂಜಾಟ: ನಾಲ್ವರ ಬಂಧನ

ಮೈಸೂರು,ಡಿ.21(ಆರ್‌ಕೆ)–ಮೊಬೈಲ್‌ಗಳ ಮೂಲಕ ಸಾರ್ವಜನಿಕರಿಂದ ಹಣವನ್ನು ಪಣವಾಗಿರಿಸಿ ಅದೃಷ್ಟದ ಕುದುರೆ ಜೂಜಾಟದಲ್ಲಿ ತೊಡಗಿದ್ದ ನಾಲ್ವರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ತೇಜಸ್, ಶಿವರಾಜ್, ನಂದನ್ ಹಾಗೂ ದಯಾನಂದ ಬಂಧಿತ ಆರೋಪಿಗಳಾಗಿದ್ದು, ಅವರಿಂದ 7,000 ರೂ. ನಗದು, 4 ಮೊಬೈಲ್ ಫೋನ್‌ಗಳು ಹಾಗೂ ಇತರೆ ಪರಿಕರಗಳನ್ನು ವಶಪಡಿಸಿಕೊಳ್ಳಲಾಗಿದೆ. ಡಿಸೆಂಬರ್ 18ರಂದು ಮೈಸೂರಿನ ಕೆಸರೆ 1ನೇ ಹಂತದ ಕುರಿಮಂಡಿ ಸರ್ಕಲ್ ಬಳಿಯ ಮನೆಯೊಂದರಲ್ಲಿ ಮೊಬೈಲ್‌ಗಳ ಮೂಲಕ ಮೈಸೂರು ರೇಸ್ ಕೋರ್ಸ್‌ನಲ್ಲಿ ನಡೆಯುವ ಕುದುರೆ ಜೂಜಾಟಕ್ಕೆ ಸಮಾನಾಂತರವಾಗಿ ಅಕ್ರಮ ಲಾಭ ಗಳಿಸುವ ಉದ್ದೇಶದಿಂದ ಅದೃಷ್ಟದ ಜೂಜಾಟವಾಡುತ್ತಿದ್ದ ವೇಳೆ ದಾಳಿ ಮಾಡಿದ ಪೊಲೀಸರು, ಆರೋಪಿಗಳನ್ನು ಬಂಧಿಸಿದರು. ಡಿಸಿಪಿ ಎಸ್.ಜಾಹ್ನವಿ ಮಾರ್ಗದರ್ಶನದಲ್ಲಿ ಸಿಸಿಬಿ ಎಸಿಪಿ ಎಸ್.ಎನ್. ಸಂದೇಶ್‌ಕುಮಾರ್ ನೇತೃತ್ವದಲ್ಲಿ ನಡೆದ ದಾಳಿಯಲ್ಲಿ ಸಬ್‌ಇನ್‌ಸ್ಪೆಕ್ಟರ್ ಮಾರುತಿ, ಅಂತರಶೆಟ್ಟಿ ಸಿಬ್ಬಂದಿಗಳಾದ ರಾಮಸ್ವಾಮಿ, ರಾಘವೇಂದ್ರ ಮಂಜುನಾಥ ಭಾಗವಹಿಸಿದ್ದರು.

## ನಿಧನ

### ಅಜ್ಜಮಾಡ ಪಾರ್ವತಿ



ಮೈಸೂರು, ಡಿ. 21– ಕೊಡಗು ಜಿಲ್ಲೆ ಪೊನ್ನಂಪೇಟೆ ತಾಲೂಕು ಕುರ್ಚಿ ಗ್ರಾಮದ ನಿವಾಸಿ ದಿವಂಗತ ಮಂದಣ್ಣ (ರಾಮು) ಅವರ ಪತ್ನಿ ಅಜ್ಜಮಾಡ ಪಾರ್ವತಿ (ಕೆಳಪಂಡ) ಶನಿವಾರ ಬೆಳಗ್ಗೆ ನಿಧನರಾದರು. ಅವರಿಗೆ 94 ವರ್ಷ ವಯಸ್ಸಾಗಿತ್ತು. ಮೃತರು ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಗೂ ಮುನ್ನ ಪಾರ್ಥಿವ ಶರೀರವನ್ನು ಅಂತಿಮ ದರ್ಶನಕ್ಕಾಗಿ ದಟ್ಟಗಳ್ಳಿ 3ನೇ ಹಂತದಲ್ಲಿರುವ ಅವರ ಪುತ್ರಿಯ ನಿವಾಸದಲ್ಲಿ ಇಡಲಾಗಿತ್ತು. ಅಂತ್ಯಕ್ರಿಯೆ ಕೆ.ಜಿ. ಕೊಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಶ್ರೀಮತಿ ಶಿವಮ್ಮ



ಮಂಡ್ಯ ನಗರದ ನಿವಾಸಿ ಲೇಟ್ ಕೆ.ಸಿ.ಬೋರಲಿಂಗಯ್ಯ ಅವರ ಧರ್ಮಪತ್ನಿ ಶ್ರೀಮತಿ ಶಿವಮ್ಮ (82) ಶುಕ್ರವಾರ ನಿಧನರಾದರು. ಮೃತರು ಪುತ್ರರಾದ ಮೈಸೂರು ಮಹಾನಗರಪಾಲಿಕೆ, ವಾಣಿವಿಲಾಸ ನೀರು ಸರಬರಾಜು ವಿಭಾಗದ ಕಾರ್ಯಪಾಲಕ ಇಂಜಿನಿಯರ್ ಬಿ.ನಾಗರಾಜ್, ಬಿ.ಬಸವರಾಜ್ ಮತ್ತು ಬಿ.ರಮೇಶ್ ಹಾಗೂ ಇಬ್ಬರು ಹೆಣ್ಣು ಮಕ್ಕಳನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ 1 ಗಂಟೆಗೆ ಮಂಡ್ಯದ ಹರಿಶ್ಚಂದ್ರ ಘಾಟ್‌ನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಮೈಸೂರು ಹಾಗೂ ಸುತ್ತಮುತ್ತ ಇಂದು...



## ಇಂದಿನ ಪಂಚಾಂಗ

22.12.2024 ಭಾನುವಾರ, ಮಳೆ ನಕ್ಷತ್ರ: ಮೂಲ, 16.12.2024 ರಿಂದ 28.12.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಧನುರ್ಮಾಸ, ಕೃಷ್ಣ ಪಕ್ಷ,
ತಿಥಿ: ಸಪ್ತಮಿ, ನಕ್ಷತ್ರ: ಪುಬ್ಬ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಪಾಳ್ಯಂ ಶ್ರೀ ಶಾಸ್ತಾಪೀಠ, ಅಭಯದಾಯಕ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನಂ:** ಧನುರ್ಮಾಸದ ವಿಶೇಷ ಪೂಜಾ ಲಕ್ಷಾರ್ಚನಾ ಮತ್ತು ವಾರ್ಷಿಕ ಕುಂಬಾಭಿಷೇಕ ಪೂಜಾ ಮಹೋತ್ಸವ, ಮಹತೋಭಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಪ್ರಾಂಗಣ, ರಾಘವೇಂದ್ರನಗರ.

■ **ಕಲಾಮಂದಿರ:** ರಾಷ್ಟ್ರೀಯ ಗಣಿತಶಾಸ್ತ್ರ ದಿನಾಚರಣೆ, ಮುಖ್ಯ ಅತಿಥಿಗಳು : ಪಿವಿಎಸ್‌ಎಂ, ವಿಎಸ್‌ಎಂ (ನಿವೃತ್ತ), ಇಂಡಿಯನ್ ಆರ್ಮಿ ಲೆಫ್ಟಿನೆಂಟ್ ಜನರಲ್ ಪಿ.ಸಿ.ತಿಮ್ಮಯ್ಯ, ಮ್ಯಾನೇಜ್ ಮೆಂಟ್ ಕನ್ಸಲ್ಟೆಂಟ್ ಹರೀಶ್ ಮಾಚಯ್ಯ ಕೊಡಂಡೆರಾ, ಸ್ಥಳ: ಕಲಾಮಂದಿರ, ಬೆಳಗ್ಗೆ 9 ಗಂಟೆಗೆ

■ **ರಾಮ್‌ಸನ್ಸ್ ಪ್ರತಿಷ್ಠಾನ:** ಬೊಂಬೆ ಮನೆ ದಸರೆ ಬೊಂಬೆ ಪ್ರದರ್ಶನ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, 91, ಆಮ್ರಪಾಲಿ ಸೀರೆ ಮಳಿಗೆ ಮೇಲೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.

■ **ಶ್ರೀ ಸೂತ್ರ ಆಯುರ್ಧಾಮ :** ಉಚಿತ ವೈದ್ಯಕೀಯ ತಪಾಸಣಾ ಹಾಗೂ ಸಲಹಾ ಶಿಬಿರ, ಸ್ಥಳ: ಶ್ರೀ ಸೂತ್ರ ಆಯುರ್ಧಾಮ, ಚಾಮುಂಡಿಪುರಂ, ಬೆಳಗ್ಗೆ 10 ರಿಂದ.

■ **ಮೈಸೂರು ವೀರಶೈವ ಸಜ್ಜನ ಸಂಘ :** ಶ್ರೀ ಸುಬ್ರಹ್ಮಣ್ಯಸ್ವಾಮಿ ಷಷ್ಠಿ ಪೂಜಾ ಕಾರ್ಯಕ್ರಮ, ಬೆಳಗ್ಗೆ 10.30ಕ್ಕೆ ನೂತನ ಪದವೀಧರರ ಸನ್ಮಾನ, ಹೊಸ ವರ್ಷದ ಕ್ಯಾಲೆಂಡರ್ ಬಿಡುಗಡೆ, ಮಧ್ಯಾಹ್ನ 2.30ಕ್ಕೆ ಕ್ರೀಡೆ ಮತ್ತು ಮನರಂಜನಾ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಕರ್ನಾಟಕ ಪೊಲೀಸ್ ಅಕಾಡೆಮಿ ನಿರ್ದೇಶಕ ಎಸ್.ಎಲ್. ಚನ್ನಬಸವಣ್ಣ, ಅಧ್ಯಕ್ಷತೆ : ಮೈಸೂರು ವೀರಶೈವ ಸಜ್ಜನ ಸಂಘದ ಅಧ್ಯಕ್ಷ ಎಂ.ಟಿ. ಮಲ್ಲಿಕಾರ್ಜುನ್, ಸ್ಥಳ: ಸಜ್ಜನ ಶಾಲೆ ಆವರಣ, ವಿಶ್ವೇಶ್ವರನಗರ, ಬೆಳಗ್ಗೆ 10ಕ್ಕೆ.

■ **ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನ:** ಶಾರದಾ ದೇವಿಯವರ ಜಯಂತ್ಯೋತ್ಸವ, ಸಂಜೆ 6 ಗಂಟೆಗೆ ನಿವೇದಿತಾ ನಗರದ ಉದ್ಯಾನವನದಿಂದ ಮೆರವಣಿಗೆ, ಸಾನ್ನಿಧ್ಯ: ರಾಮಕೃಷ್ಣ ಆಶ್ರಮದ ಸ್ವಾಮಿ ಮುಕ್ತಿದಾನಂದಜಿ, ಉದ್ಘಾಟನೆ: ಸರ್ವಜಯಾನಂದಜೀ ಮಹಾರಾಜ್, ಅಧ್ಯಕ್ಷತೆ: ಶಾಸಕ ಜಿ.ಟಿ. ದೇವೇಗೌಡ, ಮುಖ್ಯ ಅತಿಥಿಗಳು: ಸಂಸದ ಯದುವೀರ್ ಒಡೆಯರ್, ಶಾಸಕ ಟಿ.ಎಸ್. ಶ್ರೀವತ್ಸ, ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ಟಿ.ಎಸ್.ಸತ್ಯಮೂರ್ತಿ, ಸ್ಥಳ: ಶಾರದಾದೇವಿನಗರ ವೃತ್ತ.

■ **ದಲಿತ ಸಂಘರ್ಷ ಸಮಿತಿ ಜಿಲ್ಲಾ ಶಾಖೆ, ಸಂಶೋಧಕರ ಸಂಘ:** ಡಾ.ಅಂಬೇಡ್ಕರ್‌ರ ಪರಿನಿಬ್ಬಾಣ ದಿನದ ಅಂಗವಾಗಿ ಭಾರತೀಯ ನೂತನ ಕ್ರಿಮಿನಲ್ ಕಾನೂನುಗಳು–ಒಂದು ಚರ್ಚೆ ವಿಷಯ ಕುರಿತ ಕಾರ್ಯಕ್ರಮ, ಉದ್ಘಾಟನೆ: ನಿವೃತ್ತ ನ್ಯಾಯಾಧೀಶ ಮಹದೇವಯ್ಯ, ಅಧ್ಯಕ್ಷತೆ: ಜಿಲ್ಲಾ ಸಂಚಾಲಕ ಚೋರನಹಳ್ಳಿ ಶಿವಣ್ಣ, ವಿಷಯ ಮಂಡನೆ: ವಕೀಲ ಎಸ್.ಬಾಲನ್, ಮುಖ್ಯ ಅತಿಥಿಗಳು: ಡಾ.ಕೆ.ಎಲ್. ಚಂದ್ರಶೇಖರ್, ಡಾ.ಪ್ರಕೃತಿ, ಕಾಂತರಾಜು, ರಂಗಸ್ವಾಮಿ, ಆಲಗೂಡು ಚಂದ್ರಶೇಖರ್, ಚಾ.ಶಿವಕುಮಾರ್, ಶಿವಶಂಕರ್, ಪುನೀತ್ ಆಲನಹಳ್ಳಿ, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಕರ್ನಾಟಕ ಯೋಗ ಶಿಕ್ಷಕರ ಒಕ್ಕೂಟ, ಹಿಮಾಲಯ ಪ್ರತಿಷ್ಠಾನ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು :** ಬೆಳಗ್ಗೆ 11ಕ್ಕೆ ಯೋಗಭೀಷ್ಮ ಡಾ. ಬಿ.ಕೆ.ಎಸ್.ಅಯ್ಯಂಗಾರ್ ಅವರ ಜಯಂತ್ಯುತ್ಸವ ಪ್ರಯುಕ್ತ ರಾಜ್ಯ ಮಟ್ಟದ ಮುಕ್ತ ಯೋಗಾಸನ ಸ್ಪರ್ಧೆ, ಸಾಧಕರಿಗೆ ಸನ್ಮಾನ, ಸಾನ್ನಿಧ್ಯ: ಇಳೈ ಆಳ್ವಾರ್ ಸ್ವಾಮೀಜಿ, ಉದ್ಘಾಟನೆ: ಸಂಗೀತ ವಿವಿ ಕುಲಪತಿ ಪ್ರೊ. ನಾಗೇಶ್ ವಿ.ಬೆಟ್ಟಕೋಟೆ, ಶ್ರೀ ಪತಂಜಲಿ ಮಹರ್ಷಿಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ: ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಅಧ್ಯಕ್ಷತೆ: ಸಂಧ್ಯಾ ಸುರಕ್ಷಾ ಟ್ರಸ್ಟ್ ಸಂಸ್ಥಾಪಕ ಡಾ.ಬಿ.ಆರ್.ನಟರಾಜ ಜೋಯಿಸ್; ಸಂಜೆ 4.30ಕ್ಕೆ ಸಮಾರೋಪ ಸಮಾರಂಭ, ಅಧ್ಯಕ್ಷತೆ : ಶ್ರೀ ಪತಂಜಲಿ ಅಷ್ಟಾಂಗ ವಿನ್ಯಾಸ ಯೋಗ ಪ್ರತಿಷ್ಠಾನ ಸಂಸ್ಥಾಪಕ ಎಸ್.ವಿ. ವೆಂಕಟೇಶಯ್ಯ, ಬಹುಮಾನ ವಿತರಣೆ: ಎಂಎಲ್‌ಸಿ ಸಿ.ಎನ್.ಮಂಜೇಗೌಡ, ಸ್ಥಳ: ಸರ್ಕಾರಿ ಮಹಾರಾಜ ಸಂಸ್ಕೃತ ಕಾಲೇಜು.

■ **ಹಾಸನ ಜಿಲ್ಲಾ ಬಳಗ:** ಪ್ರತಿಭಾ ಪುರಸ್ಕಾರ, ಸರ್ವ ಸದಸ್ಯರ ಸಭೆ, ಉದ್ಘಾಟನೆ: ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಪ್ರಶಸ್ತಿ ಪ್ರದಾನ: ವಿಧಾನಪರಿಷತ್ ಸದಸ್ಯ ವಿವೇಕಾನಂದ, ಪ್ರಧಾನ ಭಾಷಣ: ನಿವೃತ್ತ ಪೊಲೀಸ್ ಅಧಿಕಾರಿ ಜೆ.ಬಿ.ರಂಗಸ್ವಾಮಿ, ಕ್ಯಾಲೆಂಡರ್ ಬಿಡುಗಡೆ: ಬಾಲಾಜಿ ಶೇಖರ್, ಅಧ್ಯಕ್ಷತೆ: ಬಳಗದ ಅಧ್ಯಕ್ಷೆ ಪಿ.ಶಾರದಮ್ಮ, ಸ್ಥಳ: ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಬೆಳಗ್ಗೆ 11ಕ್ಕೆ.

■ **ಶಬರಿ ಮಲೆ ಶ್ರೀ ಅಯ್ಯಪ್ಪ ಪೂಜಾ ಸಮಿತಿ, ಶ್ರೀ ಅಯ್ಯಪ್ಪಸ್ವಾಮಿ ಮತ್ತು ಶ್ರೀ ಗುರುವಾಯೂರಪ್ಪನ್ ದೇವಾಲಯ:** 64ನೇ ವಾರ್ಷಿಕ ಪೂಜಾ ಮಹೋತ್ಸವ, ಮಧ್ಯಾಹ್ನ 12.30ಕ್ಕೆ ಆಚಾರ್ಯರನ್ನು ಸ್ವಾಗತಿಸುವುದು, ಮಹಾಅನ್ನದಾನ, ಸಂಜೆ 5.30ರಿಂದ ಪ್ರಸಾದ ಶುದ್ಧಿ, ಧ್ವಜಾರೋಹಣ, ವಾಸ್ತುಹೋಮ, ವಾಸ್ತು ಕಳಶ, ರಾತ್ರಿ 9ಕ್ಕೆ ಪೂಜಾ, ವಾಸ್ತು ಬಲಿ, ರಕ್ಷೋಘ್ನ ಹೋಮ, ಅಸ್ತ್ರ ಕಳಶ ಪೂಜಾ, ಅತ್ತಾಳ ಪೂಜಾ, ಶ್ರೀಭೂತ ಬಲಿ, ವಿಳಕ್ಕು, ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನದ ಆವರಣ, ಚಾಮುಂಡಿಬೆಟ್ಟದ ಪಾದ.

■ **ಮೈಸೂರು ಜಿಲ್ಲಾ ಪ್ರಾಕೃತಿಕ ಚಿಕಿತ್ಸಾ ಪರಿಷತ್ :** ಆಕ್ಯುಪ್ರೆಶರ್, ಆಕ್ಯೂ ಫಿಶಿಯೋಥೆರಪಿ ಚಿಕಿತ್ಸಾ ಶಿಬಿರ, ಸ್ಥಳ: ಶ್ರೀ ಸಿದ್ಧಿವಿನಾಯಕ ಸ್ವಾಮಿ ದೇವಸ್ಥಾನದ ಆವರಣ, ರಾಮಕೃಷ್ಣನಗರ, ಬೆಳಗ್ಗೆ 10.30 ರಿಂದ.

■ **ವೇಣು ಗೋಪಾಲಸ್ವಾಮಿ ದೇವಸ್ಥಾನ:** ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ಮಹಾರಾಣಿ ಕಾಲೇಜು ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ವಿದುಷಿ ಡಾ.ಕೆ.ಎಲ್.ಪ್ರಸನ್ನಾಕ್ಷಿ ಅವರಿಂದ ತಿರುಪ್ಪಾವೈ ಪ್ರವಚನ, ಸ್ಥಳ: ದೇವಸ್ಥಾನ, ತ್ಯಾಗರಾಜ ರಸ್ತೆ, ಶ್ರೀ ಚಿಕ್ಕಾಂಜನೇಯ ಸ್ವಾಮಿ ದೇವಸ್ಥಾನದ ಸಮೀಪ, ಸಂಜೆ 6.30ಕ್ಕೆ.

■ **ಹೆಬ್ಬಾರ್ ಶ್ರೀ ವೈಷ್ಣವ ಸಭಾ ; ಹೆಬ್ಬಾರ್ ಶ್ರೀ ವೈಷ್ಣವ ಉಪಸಭಾ:** ತಿರುಪ್ಪಾವೈ ಪ್ರವಚನ, ಮಹಾರಾಣಿ ಕಾಲೇಜು (ಬೆಂಗಳೂರು) ನಿವೃತ್ತ ಸಂಸ್ಕೃತ ಪ್ರಾಧ್ಯಾಪಕ ಕೆ.ಎಸ್.ಶ್ರೀಧರನ್, ಸ್ಥಳ: ಸನಾತನೀ ಸಭಾ, ಜಯನಗರ, ಸಂಜೆ 6.15ರಿಂದ

■ **ಶ್ರೀ ರಾಮಕೃಷ್ಣ ಆಶ್ರಮ :** ಶ್ರೀ ಮಾತೆ ಶಾರದಾದೇವಿ ಜಯಂತಿ, ಬೆಳಗ್ಗೆ 5.15 ರಿಂದ ವೇದಮಂತ್ರ ಪಠನ, ಮಹಾಮಂಗಳಾರತಿ, ಭಜನೆ, ವಿಶೇಷ ಪೂಜೆ, ಲಲಿತಾ ಸಹಸ್ರನಾಮ ಪಾರಾಯಣ, ಭಜನೆ, ಗ್ರಂಥವಾಚನ, ಆರತಿ, ಹೋಮ, ಪ್ರಸಾದ ವಿತರಣೆ, ಸಂಜೆ 4.30 ರಿಂದ ಶ್ರೀ ಶಾರದಾ ಸಂವಿತ್ ಭಜನಾ ಮಂಡಳಿಯಿಂದ ಭಜನೆ, ಸಂಜೆ 6ರಿಂದ ಕನ್ನಡದಲ್ಲಿ ಪ್ರವಚನ –ಶ್ರೀಮಾತೆ ಶಾರದಾದೇವಿ, ಸಂಜೆ 7ರಿಂದ ಆರತಿ, ವಿಶೇಷ ಭಜನೆ, ಸ್ಥಳ: ಶ್ರೀರಾಮಕೃಷ್ಣ ಆಶ್ರಮ, ಯಾದವಗಿರಿ.

■ **ಶ್ರೀ ಕೃಷ್ಣ ಗಾನಸಭಾ:** ಬ್ಯಾಡರಹಳ್ಳಿ ಬಿ.ಸುಬ್ಬರಾಜೇ ಅರಸ್ ಅವರ ಸ್ಮರಣಾರ್ಥ ಮೈಸೂರಿನ ಕರಾವಳಿ ಯಕ್ಷಗಾನ ಕೇಂದ್ರದವರಿಂದ ಶ್ರೀಧರರಾಜ ಅರಸ್ ಅವರ ಪುದುವಟ್ಟು ಕಾರ್ಯಕ್ರಮ, ಮುಖ್ಯ ಅತಿಥಿಗಳು: ಮಂಗಳೂರು ಗಣೇಶ ಬೀಡಿ ವರ್ಕ್ಸ್ ಮಾಲೀಕರಾದ ಡಾ.ಎಂ.ಜಗನ್ನಾಥ ಶೆಣೈ, ಸ್ಥಳ: ಆಳ್ವಾರ್ ಕಲಾಭವನ, ಸಂಜೆ 6.30ಕ್ಕೆ.

■ **ಮೈಸೂರು ಅರಮನೆ ಮಂಡಳಿ :** ಸಂಜೆ 5ಕ್ಕೆ ಅರಮನೆ ಫಲಪುಷ್ಪ ಪ್ರದರ್ಶನ, ಸಂಜೆ 6 ರಿಂದ ರಘು ಆರ್. ಮತ್ತು ತಂಡದವರಿಂದ ಗೀತ ಗಾಯನ, ಸಂಜೆ 6.45ರಿಂದ ಭಾರತೀಯ ವಿದ್ಯಾ ಭವನದವರಿಂದ ನೃತ್ಯರೂಪಕ, ಸಂಜೆ 7.30 ರಿಂದ ಖ್ಯಾತ ಹಿನ್ನೆಲೆ ಗಾಯಕ ವಿಜಯಪ್ರಕಾಶ್ ಮತ್ತು ತಂಡದವರಿಂದ ಸಂಗೀತ ಸಂಜೆ, ಸ್ಥಳ: ಮೈಸೂರು ಅರಮನೆ ಆವರಣ.

■ **ಶ್ರೀ ರಾಮಕೃಷ್ಣ ವಿದ್ಯಾಶಾಲಾ :** ಸಂಜೆ 5 ರಿಂದ ಹಿರಿಯ ವಿದ್ಯಾರ್ಥಿಗಳ ಸಂಘದ ಸುವರ್ಣ ಮಹೋತ್ಸವ, ಕಾಲೇಜು ವಾರ್ಷಿಕೋತ್ಸವದ ಸಮಾರೋಪ ಸಮಾರಂಭ, ಮುಖ್ಯ ಅತಿಥಿಗಳು : ಸಂಸದ ಜಿ. ಕುಮಾರ ನಾಯಕ್, ಸ್ಥಳ: ಶ್ರೀ ರಾಮಕೃಷ್ಣ ವಿದ್ಯಾಶಾಲೆ, ಯಾದವಗಿರಿ, ಮಧ್ಯಾಹ್ನ 2.30 ರಿಂದ.

■ **ಅಹಂ ಬ್ರಹ್ಮಾಸ್ಮಿ ಫೌಂಡೇಷನ್ :** ವೇದಾಂತ ಶ್ರವಣ ಕಾರ್ಯಕ್ರಮ, ಸಂಜೆ 5 ರಿಂದ ವಿದ್ವಾನ್ ವಾಸುದೇವ ಭಟ್ ಅವರಿಂದ ವೇದಾಂತ ಮತ್ತು ಭಾಗವತ, ಸಂಜೆ 6.30 ರಿಂದ ಶ್ರೀ ನಿರ್ಭಯಾನಂದ ಸರಸ್ವತಿ ಸ್ವಾಮಿಗಳಿಂದ ಸನಾತನ ಧರ್ಮ ಮತ್ತು ಶ್ರೀ ಶಂಕರ ಭಗವತ್ಪಾದರು ಕುರಿತು ಉಪನ್ಯಾಸ ಕಾರ್ಯಕ್ರಮ, ಸ್ಥಳ: ಶ್ರೀ ಶೃಂಗೇರಿ ಶಂಕರ ಮಠ, ಶ್ರೀ ಅಭಿನವ ಶಂಕರಾಲಯ.

■ **ರಂಗಾಯಣ :** ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ಅಗ್ನಿ ಮತ್ತು ಮಳೆನಾಟಕ ಪ್ರದರ್ಶನ, ರಚನೆ : ಗಿರೀಶ್ ಕಾರ್ನಾಡ್, ನಿರ್ದೇಶನ : ಸಾಲಿಯಾನ ಉಮೇಶ್ ನಾರಾಯಣ, ಸ್ಥಳ: ವನರಂಗ, ರಂಗಾಯಣ, ಸಂಜೆ 6.30ಕ್ಕೆ.

■ **ಆಯಾಮ ಅಕಾಡೆಮಿ ಆಫ್ ಫೈನ್ ಆರ್ಟ್ಸ್ :** ಆಯಾಮೋತ್ಸವ–2024, ನೃತ್ಯ ನಾಟಕಗಳ ಉತ್ಸವ, ಸ್ಥಳ: ಕಿರುರಂಗ ಮಂದಿರ, ಸಂಜೆ 6.30ಕ್ಕೆ.

■ **ಮೈಸೂರು ಜಿಲ್ಲಾ ಕೆಮಿಸ್ಟ್ ಅಂಡ್ ಡಿಸ್ಟ್ರಿಬ್ಯೂಟರ್ಸ್ ಅಸೋಸಿಯೇಷನ್ :** ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ, ಉದ್ಘಾಟನೆ : ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕ ಟಿ.ಎಸ್. ಶ್ರೀವತ್ಸ, ಮುಖ್ಯ ಅತಿಥಿಗಳು : ಕೆ. ಶ್ರೀನಿವಾಸ್, ಬಿ.ಟಿ. ಕನಪುರಿ, ಅಧ್ಯಕ್ಷತೆ : ಅಸೋಸಿಯೇಷನ್ ಅಧ್ಯಕ್ಷ ಎಸ್. ಮಂಜುನಾಥ್, ಸ್ಥಳ: ಗಾನಭಾರತೀ, ವೀಣೆ ಶೇಷಣ್ಣ ಭವನ, ಸಂಜೆ 7.30ಕ್ಕೆ.

**ಹಲಗಯ್ಯನಹುಂಡಿ, ಮೈಸೂರು ತಾಲೂಕು.**

■ **ಮಹಾರಾಜ ಸರ್ಕಾರಿ ಪದವಿ ಪೂರ್ವ ಕಾಲೇಜು, ರಾಷ್ಟ್ರೀಯ ಸೇವಾ ಯೋಜನೆ:** ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ನಿವೃತ್ತ ಉಪನ್ಯಾಸಕ ರಾಜಣ್ಣ, ಅಧ್ಯಕ್ಷತೆ : ಕಾಲೇಜು ಪ್ರಾಂಶುಪಾಲ ಎನ್. ಉದಯಶಂಕರ್, ಸ್ಥಳ: ಹಲಗಯ್ಯನಹುಂಡಿ, ಮೈಸೂರು ತಾಲೂಕು, ಬೆಳಗ್ಗೆ 10ಕ್ಕೆ.

**ಬರಡನಪುರ ಗ್ರಾಮ, ಮೈಸೂರು ತಾಲೂಕು.**

■ **ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್, ರಾಷ್ಟ್ರೀಯ ಸೇವಾ ಯೋಜನೆ:** ವಾರ್ಷಿಕ ವಿಶೇಷ ಶಿಬಿರ 2024–25, ಬೆಳಗ್ಗೆ 6.30ಕ್ಕೆ ಮಹದೇವಣ್ಣ ಅವರಿಂದ ಧ್ವಜಾರೋಹಣ, ಬೆಳಗ್ಗೆ 10ಕ್ಕೆ ಗ್ರಾಮದ ಹೆಣ್ಣು ಮಕ್ಕಳಿಗೆ ರಂಗೋಲಿ ಸ್ಪರ್ಧೆ, ಸಂಜೆ 5.30ಕ್ಕೆ ಉಪನ್ಯಾಸ ಕಾರ್ಯಕ್ರಮ, ಜೆಎಸ್‌ಎಸ್ ಪ್ರೌಢಶಾಲೆ ಮುಖ್ಯೋಪಾಧ್ಯಾಯ ಎಂ.ಭವಾನಿಶಂಕರ್ ಅವರಿಂದ ಮೂಢನಂಬಿಕೆಗಳ ಬಗ್ಗೆ ಅರಿವು, ಅಧ್ಯಕ್ಷತೆ: ಪ್ರಾಂಶುಪಾಲ ವಿದ್ಯಾಶಂಕರ್, ಮುಖ್ಯ ಅತಿಥಿಗಳು: ಪ್ರಾಂಶುಪಾಲ ಡಾ.ಕೆ.ಎಸ್.ಭಕ್ತವತ್ಸಲ, ಸ್ಥಳ: ಬರಡನಪುರ.

## ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ–ಡಾ.ಲಕ್ಷ್ಮೀನಾರಾಯಣ ಸ್ವಾಮಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಎಂ.ಎ. ಶೋಭಾ, ಕೆ.ಶ್ರೇಯಾ, ವ್ಯಾಖ್ಯಾನ–ಡಾ.ಸಿ.ನಾಗಣ್ಣ, 6.50 ರೈತರಿಗೆ ಸಲಹೆ, 7.15 ಸಮಗ್ರ ವಿಕಾಸಕ್ಕಾಗಿ ದಿಟ್ಟ ಹೆಜ್ಜೆ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ವಿಕಾಸ ಅಕಾಡೆಮಿ, ಕಲಬುರ್ಗಿ, 8.30 ಕನ್ನಡ ಚಿತ್ರಗೀತೆಗಳು, 9.05 ನಮ್ಮ ಆರೋಗ್ಯ–ಆಯಿಷ್ ಯಶೋಗಾಥೆ ಸರಣಿಯಲ್ಲಿ 'ಶ್ರವಣ ದೋಷ ನಿವಾರಣೆಗೆ ಕಾಕ್ಲಿಯರ್ ಇಂಪ್ಲಾಂಟ್' ಮತ್ತು 'ಶ್ರವಣ ದೋಷ' ಕುರಿತು ಕಾರ್ಯಕ್ರಮ ಭಾಗವಹಿಸುತ್ತಾರೆ: ಡಾ.ಗೀತಾ, ರಮಣಕುಮಾರಿ, ಸಾತ್ವಿಕ್ ಅಂಗಡಿ, ದೀಪಾ ಅಂಗಡಿ, ಲಕ್ಷ್ಮೀ ವಿಜಯಕುಮಾರ್ ಮತ್ತು ಪಂಕಜಾ, ನಡೆಸಿಕೊಡುತ್ತಾರೆ: ಬೇದ್ರೆ ಮಂಜುನಾಥ್, ಪ್ರಾಯೋಜಕರು–ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆ, ಮೈಸೂರು, 9.35 ಕ್ಯಾನ್ಸರ್ ಕುರಿತ ಮಿಥ್ಯೆಗಳು–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು–ಭಾರತೀಯ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಚಾಪ್ಟರ್, 9.40–ಮಂಡ್ಯದಲ್ಲಿ ನಡೆಯುತ್ತಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ 2ನೇ ದಿನದ ಗೋಷ್ಠಿಗಳ ಬಾನುಲಿ ಅವತರಣಿಕೆ, 10.05 ಕೇಳಿ ಗಿಳಿಗಳೇ: ಕೆ.ಎನ್.ಸಿ ಇನ್ನೋವೇಟಿವ್ ಶಾಲೆ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ, 10.30 KRISH -TRISH and Balty boy ನಾವು ಭಾರತೀಯರು 'ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ', 10.45 ಮಕ್ಕಳ ಮಂಟಪ: ಹಕ್ಕಿಗೂಡು, ಗಣಿತ ವಿಷಯ ಸರಳ ಮಾಡಿಕೊಳ್ಳುವ ಬಗ್ಗೆ ತಿಳಿಸುತ್ತಾರೆ, ಗಣಿತ ಶಿಕ್ಷಕರಾದ ಜಿ.ಬಿ.ಸಂತೋಷ್‌ಕುಮಾರ್, ಕಥೆ ಹೇಳುತ್ತಾರೆ–ಬಿ.ಆರ್.ನಾಗರತ್ನ, ವೃಂದಗಾನ. ರಚನೆ–ಕೆ.ಎಸ್.ನರಸಿಂಹಸ್ವಾಮಿ, 11.15 ಮಿಶ್ರಮಾಧುರ್ಯ

**ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ–ಗಿರಿಜಾ ಕುಮಾರ್, 12.45 ಜನಪದ ಸಂಗೀತ–ಚಿನ್ನಮಾದು ಹಾಗೂ ಸಂಗಡಿಗರಿಂದ ಪಾರ್ವತಿ–ಪರಶಿವರ ಹಾಡು, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ಅಂಬಿಕಾ ಕೆ.ರಾಮ್, 2.40 ಕನ್ನಡ ಚಲನಚಿತ್ರ ಧ್ವನಿವಾಹಿನಿ–ಜೀವನದಿ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ. ರವೀಂದ್ರಕುಮಾರ್, 3.45 ಕರ್ನಾಟಕ ಶಾಸ್ತ್ರೀಯ ಸಂಗೀತ: ಕೆ.ಎನ್.ಶಶಿಕಿರಣ್ ಮತ್ತು ಪಿ.ಗಣೇಶ್–ಯುಗಳ ಹಾಡುಗಾರಿಕೆ, 4.45 ಚಿತ್ರಗೀತೆಗಳು, 6.51 ಕೃಷಿರಂಗ, ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್.ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ, ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್.ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ–ರಾಷ್ಟ್ರೀಯ ಗಣಿತ ದಿನದ ಸಂದರ್ಭದಲ್ಲಿ ಶ್ರೀನಿವಾಸ ರಾಮಾನುಜನ್ ಅವರ ಜೀವನ ಮತ್ತು ಸಾಧನೆ ಈ ಕುರಿತು ಮಾತನಾಡುತ್ತಾರೆ : ಕನ್ನಡ, ಉಪನ್ಯಾಸಕಿ ಪ್ರತಿಮಾ ಹರೀಶ್ ರೈ, 8.00 ಹಾದಿಯಲ್ಲಿ ಕಂಡ ಮುಖ–ಬಾನುಲಿ ಸರಣಿ, ಟಿ. ನರಸೀಪುರ ತಾಲೂಕು ತಲಕಾಡು ಹೋಬಳಿ ಹೆಮ್ಮಿಗೆ ಗ್ರಾಮದ ಯಕ್ಷಗಾನ ಕಲಾವಿದರುಗಳಾದ ಚೌಡನಾಯಕ, ನಾರಾಯಣಸ್ವಾಮಿ, ಶಿವರುದ್ರಪ್ಪ ಹಾಗೂ ಚಿಕ್ಕನಾಯಕ ಅವರೊಂದಿಗೆ ಸಂವಾದ, ಪ್ರಸ್ತುತಿ : ಅಬ್ದುಲ್ ರಶೀದ್, 9.15 ರಂಗಗೀತೆಗಳು–ಚಿನ್ನಯ್ಯ 9.30 National Science Magazine Radio Scope, 10.00 ರವಿವಾರದ ಅಖಿಲ ಭಾರತ ಸಂಗೀತ ಸಭಾ, ಪಂಡಿತ್ ಅರುಪ್ ಚಟ್ಟೋಪಾಧ್ಯಾಯ–ತಬಲಾ ವಾದನ, ಮಧುರೇಶ್ ಭಟ್– ತಬಲಾ ವಾದನ

# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 22 ಭಾನುವಾರ 2024

ಸಂಪುಟ: 45 | ಸಂಚಿಕೆ: 245 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4






ಮೈಸೂರು ಅರಮನೆ ಆವರಣದಲ್ಲಿ ಆಯೋಜಿಸಿರುವ ಫಲಪುಷ್ಪ ಪ್ರದರ್ಶನದ ಸುಂದರ ನೋಟ. / ಚಿತ್ರ: ಲಕ್ಷ್ಮಿನಾರಾಯಣ ಯಾದವ್

### ಮೈಸೂರಲ್ಲಿ ಮಾಗಿ ಉತ್ಸವ ಸಂಭ್ರಮ

# ಅರಮನೆ ಅಂಗಳದಲ್ಲಿ ಫಲಪುಷ್ಪ ಪ್ರದರ್ಶನ ಆರಂಭ

### ಕಣ್ಮನ ಸೆಳೆಯುವ ಪುಷ್ಪರಾಶಿ; ಸಂಜೆ ವೇಳೆಗೆ ಸಂಗೀತ ಸುಧೆ

ಮೈಸೂರು, ಡಿ.21(ಎಸ್‌ಬಿಡಿ)– ಮೈಸೂರು ಅರಮನೆ ಆವರಣದಲ್ಲಿ ಮೈದಳೆದಿರುವ 'ಪುಷ್ಪಕಾಶಿ' ಶನಿವಾರ ಅನಾವರಣಗೊಂಡಿತು. ಪೂಜಾ ಕುಣಿತ, ಮಂಗಳವಾದ್ಯ ನಿನಾದದ ನಡುವೆ ರಥದಲ್ಲಿ ಮೆರವಣಿಗೆಯಲ್ಲಿ ಕರೆತರಲಾದ ತಾಯಿ ಚಾಮುಂಡೇಶ್ವರಿಗೆ ನಮಿಸಿದ ಬಳಿಕ ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ಮೈಸೂರು ಅರಮನೆ ಮಂಡಳಿ ವತಿಯಿಂದ ಆಯೋಜಿಸಿರುವ ಹನ್ನೊಂದು ದಿನಗಳ 'ಅರಮನೆ ಫಲಪುಷ್ಪ ಪ್ರದರ್ಶನ'ಕ್ಕೆ ಚಾಲನೆ ನೀಡಿದರು. ಇದೇ ವೇಳೆ ಅಪರೂಪದ ಛಾಯಾಚಿತ್ರಗಳ ಪ್ರದರ್ಶನ, ಬೊಂಬೆ ಮನೆ, ಕುಸ್ತಿ ಪಂದ್ಯಾವಳಿ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮವನ್ನೂ ವಿಧ್ಯುಕ್ತವಾಗಿ ಉದ್ಘಾಟಿಸಿದರು.

**ಹೂಗಳ ಚೆಲುವು:** ಹತ್ತನೇ ವರ್ಷದ 'ಫಲಪುಷ್ಪ ಪ್ರದರ್ಶನ'ದಲ್ಲಿ ಬಣ್ಣಬಣ್ಣದ ಲಕ್ಷಾಂತರ ಹೂಗಳಿಂದ ವಿವಿಧ ಅತ್ಯಾಕರ್ಷಕ ಕಲಾಕೃತಿಗಳನ್ನು ನಿರ್ಮಿಸಲಾಗಿದೆ. ವಿವಿಧ ಬಗೆಯ ಹೂಗಳಿಂದ ರೂಪುಗೊಂಡಿರುವ ದಕ್ಷಿಣಕಾಶಿಯ ನಂಜುಂಡೇಶ್ವರನ ವಿಗ್ರಹ, ಸ್ವಾಮಿ ನಾರಾಯಣ ಅಕ್ಷರಧಾಮ, ಚಾಮುಂಡಿ ಬೆಟ್ಟದ ನಂದಿ ■ 7ನೇ ಪುಟಕ್ಕೆ

**ಡಿ.31ರವರೆಗೆ ಫಲಪುಷ್ಪ ವೈಭವ**

ಫಲಪುಷ್ಪ ಪ್ರದರ್ಶನಕ್ಕೆ ಡಿ.31ರಂದು ತೆರೆಬೀಳಲಿದೆ. ಅವರೆಗೆ ಬೆಳಗ್ಗೆ 10ರಿಂದ ರಾತ್ರಿ 9ರವರೆಗೆ ವೀಕ್ಷಣೆ ಮಾಡಬಹುದಾಗಿದೆ. ನಿತ್ಯ ಸಂಜೆ 7ರಿಂದ 9ರವರೆಗೆ ಅರಮನೆ ವಿದ್ಯುತ್ ದೀಪಾಲಂಕಾರವನ್ನು ಕಣ್ತುಂಬಿಕೊಂಡು, ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಸವಿಯಬಹುದು. 10 ವರ್ಷದೊಳಗಿನ ಮಕ್ಕಳಿಗೆ ಉಚಿತ ಪ್ರವೇಶ ಕಲ್ಪಿಸಲಾಗಿದ್ದು, 10ರಿಂದ 18 ವರ್ಷದವರಿಗೆ ತಲಾ 20 ರೂ. ಹಾಗೂ ವಯಸ್ಕರಿಗೆ(ವಿದೇಶಿಯಾದರೂ) 30 ರೂ. ಟಿಕೆಟ್ ದರ ನಿಗದಿಪಡಿಸಲಾಗಿದೆ.

# ನನ್ನ ಹತ್ಯೆಗೆ ಸಂಚು ನಡೆದಿತ್ತು!

### ● ಎಂಎಲ್ಸಿ ಸಿ.ಟಿ.ರವಿ ಗಂಭೀರ ಆರೋಪ ● ರಾತ್ರಿಯಿಡೀ ನನ್ನನ್ನು ಮೂರು ಜಿಲ್ಲೆಯಾದ್ಯಂತ ಅಲೆಸಿದ ಪೊಲೀಸರ ವರ್ತನೆ ಭಯ ಹುಟ್ಟಿಸಿತ್ತು!




ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಎಂಎಲ್‌ಸಿ ಸಿ.ಟಿ.ರವಿ

**ಬೆಂಗಳೂರು, ಡಿ.21(ಕೆಎಂಶಿ)– ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ವಿರುದ್ಧ ತಾವು ಬಳಸಿರುವ ಪದದ ಬಗ್ಗೆ ಸದನದ ಆಡಿಯೊ, ವಿಡಿಯೊ ಪರಿಶೀಲಿಸಿ, ನನ್ನ ತಪ್ಪಿದ್ದರೆ ನನಗೆ ಶಿಕ್ಷೆ ವಿಧಿಸಲಿ. ಇಲ್ಲವೇ ಅವರ ತಪ್ಪಿದ್ದರೆ ಅವರಿಗೆ ಶಿಕ್ಷೆಯಾಗಲಿ ಎಂದು ಬಿಜೆಪಿ ಎಂಎಲ್‌ಸಿ ಸಿ.ಟಿ.ರವಿ ಇಂದಿಲ್ಲಿ ಆಗ್ರಹಿಸಿದ್ದಾರೆ.**

ನನ್ನ ಬಂಧನದ ನಂತರ ರಾತ್ರಿಯಿಡೀ ನಡೆದ ಘಟನಾವಳಿಗಳ ಬಗ್ಗೆ ನ್ಯಾಯಾಂಗ ತನಿಖೆ ಆಗಬೇಕೆಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸದನದ ಒಳಗೆ ನಡೆದಿರುವ ಘಟನೆಗೆ ಸಂಬಂಧಿಸಿದಂತೆ ಸಭಾಪತಿ ಅವರ ಅನುಮತಿ ಇಲ್ಲದೆ, ಪ್ರಕರಣ ದಾಖಲಿಸಿರುವುದು ಮತ್ತು ಬಂಧಿಸಿರುವುದು ಅಪರಾಧ.

ನನ್ನ ಬಂಧನದ ನಂತರ ಇಡೀ ರಾತ್ರಿ ಮೂರು ಜಿಲ್ಲೆಗಳಲ್ಲಿ ವಾಹನದಲ್ಲೇ ಸುತ್ತಾಡಿಸಿದ್ದಾರೆ. ಜೊತೆಯಲ್ಲಿದ್ದ ಪೊಲೀಸರಿಗೆ ಬಂದ ಕರೆಗಳು ಮತ್ತು ನನ್ನ ಫೋನಿನ ಕಾಲ್ ಡೀಟೇಲ್‌ಗಳ ತನಿಖೆ ಆಗಲಿ.


ನನ್ನ ಹತ್ಯೆ ಮಾಡಲು ದೊಡ್ಡ ಸಂಚು ನಡೆದಿತ್ತು. ಇದಕ್ಕಾಗಿ ಪೊಲೀಸರು ರಾತ್ರಿ ನಿಗೂಢ ಸ್ಥಳಗಳಿಗೆ ಕೊಂಡೊಯ್ದಿದ್ದರು. ಆ ಅಧಿಕಾರಿಗಳನ್ನು ತಕ್ಷಣ ಅಮಾನತು ಮಾಡಬೇಕು. ಸಮಗ್ರ ತನಿಖೆ ನಡೆಸಬೇಕು. ಅಲ್ಲದೆ, ನನ್ನ ಬಂಧನ ಸಮಯದಲ್ಲಿ ಪೊಲೀಸರ ಮೇಲೆ ಪ್ರಭಾವ ಬೀರುತ್ತಿದ್ದ ವ್ಯಕ್ತಿಗಳನ್ನು ಪತ್ತೆ ಹಚ್ಚಿ, ಅವರ ವಿರುದ್ಧ ಕ್ರಮಕೈಗೊಳ್ಳಿ.

ಮುಖ್ಯಮಂತ್ರಿ ಸಿದ್ದರಾಮಯ್ಯ ಆಡಳಿತದಲ್ಲಿ ಇಂತಹ ವರ್ತನೆ ನಿರೀಕ್ಷಿಸಿರಲಿಲ್ಲ. ಗೃಹ ಸಚಿವ ಡಾ.ಜಿ.ಪರಮೇಶ್ವರ್ ಹಿಡಿತದಲ್ಲಿ ಗೃಹ ಇಲಾಖೆ ಇದ್ದಂತೆ ಕಾಣದು ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

**ಬೆಳಗಾವಿ, ಕನಕಪುರ ರಿಪಬ್ಲಿಕ್‌ಗಳು:** ಲಕ್ಷ್ಮಿ ಹೆಬ್ಬಾಳ್ಕರ್ ಅವರ ಕ್ಷೇತ್ರದಿಂದ ನಾನು ಬದುಕಿ ಬಂದಿದ್ದೇ ಹೆಚ್ಚು ಎಂಬುದಾಗಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ಆಡಳಿತ ನಡೆಸುವವರೇ ಇಂತಹ ಹೇಳಿಕೆ ನೀಡಿದರೆ, ವ್ಯವಸ್ಥೆ ಯಾವ ಮಟ್ಟದಲ್ಲಿದೆ ಎಂಬುದು ತಿಳಿಯುತ್ತದೆ. ಇಂತಹ ಹೇಳಿಕೆ ನೋಡಿದರೆ, ಬೆಳಗಾವಿ ಮತ್ತು ಕನಕಪುರ ಕೆಲವು ವ್ಯಕ್ತಿಗಳ ರಿಪಬ್ಲಿಕ್‌ಗಳಾಗಿವೆಯೇ ಎಂದು ಪ್ರಶ್ನಿಸಿದರು. ನನ್ನ ರಕ್ಷಣೆ ಜವಾಬ್ದಾರಿ ಸರ್ಕಾರದ್ದು, ಅವರೇ ಈ ರೀತಿ ಹೇಳಿಕೆ ನೀಡಿದರೆ, ಇನ್ನು ಕಾನೂನು ಸುವ್ಯವಸ್ಥೆ ಹೇಗಿದೆ ಎಂಬುದನ್ನು ಊಹಿಸಬಹುದು ಎಂದರು.

# ರಾಜಕಾರಣಿಗಳು, ಸಾಹಿತಿಗಳನ್ನ ಅಸ್ಪೃಶ್ಯತೆಯಿಂದ ನೋಡಬೇಡಿ

### ಸಾಹಿತ್ಯ ಸಮ್ಮೇಳನದ ವಿಚಾರಗೋಷ್ಠಿಯಲ್ಲಿ ಸಚಿವ ಹೆಚ್.ಕೆ.ಪಾಟೀಲ್ ಮನವಿ



ಮಂಡ್ಯ,ಡಿ.21(ಮೋಹನ್‌ರಾಜ್)– ರಾಜಕಾರಣಿಗಳು, ಸಾಹಿತಿಗಳನ್ನು ಅಸ್ಪೃಶ್ಯತೆಯಿಂದ ನೋಡಬೇಡಿ. ರಾಜಕೀಯ ಬಿಟ್ಟು ಸಾಹಿತ್ಯ ರಚನೆ ಅಸಾಧ್ಯವಾಗಿದ್ದು, ಸಾಹಿತ್ಯದ ಬೆಳವಣಿಗೆಯಲ್ಲಿ ರಾಜಕೀಯದ ಪಾತ್ರ ಬಹಳವಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ವಿಶ್ಲೇಷಿಸಿದರು.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಎರಡನೇ ದಿನವಾದ ಶನಿವಾರ ರಾಜಮಾತೆ ರಾಜಮ್ಮಣ್ಣಿ– ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಧಾನ ವೇದಿಕೆಯಲ್ಲಿ 'ಸಾಹಿತ್ಯದಲ್ಲಿ ರಾಜಕೀಯ: ರಾಜಕೀಯದಲ್ಲಿ ಸಾಹಿತ್ಯ' ವಿಚಾರಗೋಷ್ಠಿಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ದೊಡ್ಡ ದೊಡ್ಡ ಸಾಹಿತಿಗಳಿಗೆ ಸಮಾಜವನ್ನು ಬದಲಾವಣೆ ಮಾಡುವ ಶಕ್ತಿ ಇದೆ. ಸಾಹಿತಿಗಳು ಸಹ ರಾಜಕಾರಣದಲ್ಲಿ ತೊಡಗಿಸಿಕೊಳ್ಳಬೇಕು. ಆದರೆ ಬಹುತೇಕ ಸಾಹಿತಿಗಳು ರಾಜಕೀಯದಿಂದ ದೂರವಿರುವುದಕ್ಕೆ ಯತ್ನಿಸುತ್ತಾರೆ. ■ 8ನೇ ಪುಟಕ್ಕೆ

**ರಾಜಕಾರಣಿಗಳ ಸಾಹಿತ್ಯಕ್ಕೆ ಸಮಾಜದಲ್ಲಿ ಬೆಲೆ ಇಲ್ಲದಂತಾಗಿದೆ. ರಾಜಕಾರಣವನ್ನು ಪಕ್ಕಕ್ಕಿಟ್ಟು ಆ ವ್ಯಕ್ತಿ ಸಾಹಿತ್ಯ ರಚಿಸಿದಾಗ ಅದನ್ನು ಮೂಲ ಸಾಹಿತಿಗಳು ಪ್ರೋತ್ಸಾಹಿಸಬೇಕು. ಆದರೆ ಅದನ್ನು ಸಾಹಿತ್ಯವೆಂದು ಪರಿಗಣನೆ ಮಾಡದಿರುವುದು ನಿಜಕ್ಕೂ ವಿಷಾದನೀಯ ಸಂಗತಿ. ಈ ಹಿಂದೆ ರಾಜಕಾರಣಿಗಳ ಜಾಗೃತಿಗೊಳಿಸುವ ಕೆಲಸವನ್ನು ಪಿ.ಲಂಕೇಶ್ ಮಾಡುತ್ತಿದ್ದರು. ಆದರೆ ಇಂದಿನ ಪರಿಸ್ಥಿತಿಯಲ್ಲಿ ಅಂತಹ ಪ್ರಯತ್ನಗಳನ್ನು ಕಾಣಲಾಗದು.**

**– ಹೆಚ್.ಕೆ.ಪಾಟೀಲ್**

# ಇಂದು ಮಂಡ್ಯದ ಅಕ್ಷರ ಜಾತ್ರೆಗೆ ತೆರೆ

**ಮಂಡ್ಯ(ವಿನಯ್‌ಕಾರೇಕುರ):** ಸಕ್ಕರೆ ನಾಡಿನಲ್ಲಿ ನಡೆಯುತ್ತಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಭಾನುವಾರ (ಡಿ.22) ತೆರೆ ಬೀಳಲಿದೆ.

ಬೆಳಗ್ಗೆಯಿಂದ ಸಂಜೆವರೆಗೂ ವಿವಿಧ ಗೋಷ್ಠಿಗಳು ನಡೆಯಲಿದ್ದು, ಹಲವಾರು ವಿಷಯಗಳು ಮಂಡನೆಯಾಗಲಿವೆ. ಜೊತೆಗೆ ಸಾಧಕರಿಗೆ ಸನ್ಮಾನ ಕೂಡ ಇದೆ.

ಮಧ್ಯಾಹ್ನ 2.10ಕ್ಕೆ ನಡೆಯುವ ಸನ್ಮಾನ ಸಮಾರಂಭದಲ್ಲಿ ಶ್ರೀ ಕ್ಷೇತ್ರ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ಡಾ.ನಿರ್ಮಲಾನಂದನಾಥ ಮಹಾಸ್ವಾಮೀಜಿ ದಿವ್ಯ ಸಾನ್ನಿಧ್ಯ ವಹಿಸಲಿದ್ದಾರೆ. ತುಮಕೂರು ಶ್ರೀ ಸಿದ್ದಗಂಗಾ ಮಠದ ಅಧ್ಯಕ್ಷರಾದ ಶ್ರೀ ಸಿದ್ದಲಿಂಗ ಮಹಾಸ್ವಾಮೀಜಿ ಸನ್ನಿಧಾನದಲ್ಲಿ, ನವದೆಹಲಿಯ ಭಾರತ ಲೋಕಪಾಲ್‌ನ ನ್ಯಾಯಾಂಗ ಸದಸ್ಯ ನ್ಯಾಯಮೂರ್ತಿ ಎಲ್.ನಾರಾಯಣ ಸ್ವಾಮಿ ■ 8ನೇ ಪುಟಕ್ಕೆ




### ಮಂಡ್ಯ ಜಿಲ್ಲೆಯಲ್ಲಿ ಎರಡು ಪ್ರತ್ಯೇಕ ಅಪಘಾತ

# ಮೂವರು ಇಂಜಿನಿಯರಿಂಗ್ ವಿದ್ಯಾರ್ಥಿಗಳು ಸೇರಿ ಐವರ ದುರ್ಮರಣ



ಮಂಡ್ಯ, ಡಿ.21–ಮಂಡ್ಯ ಜಿಲ್ಲೆಯಲ್ಲಿ ಸಂಭವಿಸಿದ ಎರಡು ಪ್ರತ್ಯೇಕ ರಸ್ತೆ ಅಪಘಾತದಲ್ಲಿ ಮೂವರು ಇಂಜಿನಿಯರಿಂಗ್ ವಿದ್ಯಾರ್ಥಿಗಳು ಮತ್ತು ತಿರುಪತಿಗೆ ತೆರಳಲು ಡ್ರಾಪ್ ತೆಗೆದುಕೊಳ್ಳುತ್ತಿದ್ದ ಮಹಿಳೆ ಹಾಗೂ ಯುವತಿ ಸೇರಿದಂತೆ ಐವರು ಸಾವನ್ನಪ್ಪಿ, ಮತ್ತಿಬ್ಬರು ಗಾಯಗೊಂಡಿದ್ದಾರೆ.

**ಮಳವಳ್ಳಿ:** ತಾಲೂಕಿನ ನಾಗೇಗೌಡನ ದೊಡ್ಡಿ ಗೇಟ್ ಬಳಿ ಕಾರಿಗೆ ಲಾರಿ ಡಿಕ್ಕಿ ಹೊಡೆದ ಪರಿಣಾಮ ಮೂವರು ಇಂಜಿನಿಯರಿಂಗ್ ವಿದ್ಯಾರ್ಥಿಗಳು ಸಾವನ್ನಪ್ಪಿದ್ದಾರೆ. ಬೆಂಗಳೂರಿನ ಬಿಐಟಿ ಕಾಲೇಜಿನ ನಾಲ್ಕನೇ ಸೆಮಿಸ್ಟರ್‌ನ ವಿದ್ಯಾರ್ಥಿಗಳಾದ ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ಮೂಲದ ಪ್ರಣವ್(22), ಆದರ್ಶ(23) ಹಾಗೂ ಆಕರ್ಷ(22) ಸಾವನ್ನಪ್ಪಿದ್ದು, ಹೃತಿಕ್ ಗಾಯಗೊಂಡಿದ್ದಾನೆ. ಈ ನಾಲ್ವರು ವಿದ್ಯಾರ್ಥಿಗಳು ಬೆಂಗಳೂರಿನಿಂದ ಕಾರಿನಲ್ಲಿ ತಲಕಾಡಿಗೆ ತೆರಳುತ್ತಿದ್ದ ವೇಳೆ ಚನ್ನೇಗೌಡನ ದೊಡ್ಡಿ ಗೇಟ್ ಬಳಿ ಕೊಳ್ಳೇಗಾಲ ಕಡೆಯಿಂದ ಬಂದ ಲಾರಿ ಡಿಕ್ಕಿ ಹೊಡೆದಿದೆ. ಇದರಿಂದ ಮೂವರು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಗಾಯಗೊಂಡಿರುವ ವಿದ್ಯಾರ್ಥಿಗೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ.

ಘಟನಾ ಸ್ಥಳಕ್ಕೆ ಡಿವೈಎಸ್‌ಪಿ ವಿ.ಕೃಷ್ಣಪ್ಪ, ಸಿಪಿಐ ಮಹೇಶ್ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಈ ಸಂಬಂಧ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಆದರ್ಶ



ಆಕರ್ಷ



ಪ್ರಣವ್

**ಪಾಂಡವಪುರ**



ಶಿಲ್ಪಶ್ರೀ



ಸಂಧ್ಯಾ

ಸ್ಕೂಟರ್‌ಗೆ ಲಾರಿ ಡಿಕ್ಕಿ ಹೊಡೆದ ಪರಿಣಾಮ ತಿರುಪತಿಗೆ ತೆರಳಲು ಡ್ರಾಪ್ ತೆಗೆದುಕೊಳ್ಳುತ್ತಿದ್ದ ಮಹಿಳೆ, ಯುವತಿ ಸ್ಥಳದಲ್ಲಿಯೇ ಮೃತಪಟ್ಟಿದ್ದು, ಮತ್ತೊಬ್ಬ ಮಹಿಳೆ ಗಂಭೀರವಾಗಿ ಗಾಯಗೊಂಡಿರುವ ಘಟನೆ ಶನಿವಾರ ಮುಂಜಾನೆ ಮಹದೇಶ್ವರಪುರ ಗ್ರಾಮದ ಬಳಿ ಶ್ರೀರಂಗಪಟ್ಟಣ–ಜೇವರ್ಗಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಂಭವಿಸಿದೆ.

ಪಾಂಡವಪುರ ತಾಲೂಕು ನೀಲನಹಳ್ಳಿ ಗ್ರಾಮದ ಶಿವಣ್ಣೇಗೌಡರ ಪತ್ನಿ ಶಿಲ್ಪಶ್ರೀ(34) ಮತ್ತು ಅದೇ ಗ್ರಾಮದ ಪ್ರದೀಪ ಎಂಬುವರ ಪುತ್ರಿ ಸಂಧ್ಯಾ (17) ಮೃತಪಟ್ಟ ದುರ್ದೈವಿಗಳು. ಮೃತ ಸಂಧ್ಯಾ ಅವರ ತಾಯಿ ಶೈಲಜಾ ಗಂಭೀರವಾಗಿ ಗಾಯಗೊಂಡಿದ್ದು, ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಶಿಲ್ಪಶ್ರೀ ಹಾಗೂ ಶೈಲಜಾ ಅವರು ತಿರುಪತಿಗೆ ಹೋಗುತ್ತಿದ್ದು, ಶೈಲಜಾ ಅವರ ಪುತ್ರಿ ಸಂಧ್ಯಾ ಈ ಇಬ್ಬರನ್ನು ■ 8ನೇ ಪುಟಕ್ಕೆ

# ಗರಗಸ ಆರ್ಡರ್ ನೆಪ ಮಾಡಿಕೊಂಡು ಬಂದು ಮನೆ ಯಜಮಾನನ ಭೀಕರ ಹತ್ಯೆ

### ● ಹಂತಕನ ಕೂಡಿ ಹಾಕಿದ ಯಜಮಾನಿ ● ಗ್ರಾಮಸ್ಥರಿಂದ ಅಪರಿಚಿತ ಪೊಲೀಸರ ವಶಕ್ಕೆ

ಶ್ರೀರಂಗಪಟ್ಟಣ, ಡಿ.21–ಮನೆಗೆ ನುಗ್ಗಿ ಪಾರ್ಶ್ವವಾಯು ಪೀಡಿತ ವ್ಯಕ್ತಿಯ ದೇಹವನ್ನು ಯಾಂತ್ರಿಕ ಗರಗಸದಿಂದ ಕತ್ತರಿಸಿ ಭೀಕರವಾಗಿ ಹತ್ಯೆ ಮಾಡಿದ ಹಂತಕನನ್ನು ಚಾಣಾಕ್ಷ ಮನೆಯೊಡತಿ ಮನೆಯಲ್ಲೇ ಕೂಡಿ ಹಾಕಿದ ಘಟನೆ ಶನಿವಾರ ಸಂಜೆ ಪಾಂಡವಪುರ ತಾಲೂಕು ಗಡಿಯಲ್ಲಿರುವ ಕ್ಯಾತನಹಳ್ಳಿ ಗ್ರಾಮದ ತೋಟದ ಮನೆಯಲ್ಲಿ ನಡೆದಿದೆ.

ಗ್ರಾಮದ ರಮೇಶ್ ಭೀಕರವಾಗಿ ಹತ್ಯೆಗೀಡಾದವರಾಗಿದ್ದು, ಇಂತಹ ಪರಿಸ್ಥಿತಿಯಲ್ಲೂ ಅವರ ಪತ್ನಿ ಯಶೋಧಮ್ಮ ಅವರು, ಹೊರಗಿನಿಂದ ಮನೆಯ ಬಾಗಿಲ ಚಿಲಕ ಹಾಕಿದ ಪರಿಣಾಮವಾಗಿ ಹಂತಕ ಸಿಕ್ಕಿಬಿದ್ದಿದ್ದಾನೆ.

**ವಿವರ:** ಪಾಂಡವಪುರ ತಾಲೂಕಿನ ಗಡಿ ಗ್ರಾಮವಾದ ಕ್ಯಾತನಹಳ್ಳಿಯ ಹೊರ ವಲಯದಲ್ಲಿರುವ ತೋಟದಲ್ಲಿ ರಮೇಶ್ ಅವರು ಮನೆ ನಿರ್ಮಿಸಿಕೊಂಡು ಪತ್ನಿಯೊಂದಿಗೆ ವಾಸಿಸುತ್ತಿದ್ದರು. ತೋಟದ ಮನೆಯಾದರೂ ಹೊರಗಿನಿಂದ ನೋಡಿದರೆ ಐಷಾರಾಮಿ ಮನೆಯಂತೆ ಭಾಸವಾಗುತ್ತಿತ್ತು.

ಇಂದು ಸಂಜೆ 7 ಗಂಟೆ ಸುಮಾರಿಗೆ ಬೆನ್ನಿಗೆ ಬ್ಯಾಗ್ ನೇತು ಹಾಕಿಕೊಂಡು, ಗರಗಸ ಇನ್ನಿತರೆ ಪದಾರ್ಥಗಳಿದ್ದ ಮತ್ತೊಂದು ಬ್ಯಾಗ್ ಅನ್ನು ಕೈಯ್ಯಲ್ಲಿ ಹಿಡಿದಿದ್ದ ಅಪರಿಚಿತ ವ್ಯಕ್ತಿಯೋರ್ವ ಇವರ ಮನೆಗೆ ಬಂದು ಬಾಗಿಲು ತಟ್ಟಿದ್ದಾನೆ. ಯಶೋಧಮ್ಮ ಅವರು ಬಾಗಿಲು ತೆರೆದು ವಿಚಾರಿಸಿದಾಗ, ಅಷ್ಟರಲ್ಲೇ ಬ್ಯಾಗ್‌ನಲ್ಲಿದ್ದ ಯಾಂತ್ರಿಕ ಗರಗಸ ತೋರಿಸಿ ■ 8ನೇ ಪುಟಕ್ಕೆ



ಕೊಲೆಗಾರ

## ನಕ್ಕರೆ ಅದೇ ಸ್ವರ್ಗ

ಬಾಸ್ : ನನಗೆ ಒಬ್ಬ ಡ್ರೈವರ್ ಬೇಕು. ಸ್ಟಾರ್ಟಿಂಗ್ 2000 ಕೊಡ್ತೀನಿ.

ಗುಂಡ : ಏನ್ ಗ್ರೇಟ್ ಸಾರ್ ನೀವು ಸ್ಟಾರ್ಟಿಂಗ್‌ಗೆ 2000 ಕೊಟ್ರೆ ಇನ್ನು ಡ್ರೈವಿಂಗ್ ಸಂಬಳ ಎಷ್ಟು..!?

ಮೈಸೂರು ಮಿತ್ರ

ಭಾನುವಾರ, 22 ಡಿಸೆಂಬರ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

**ಅಮೃತ ವಾಹಿನಿ.........**

ಪ್ರೀತಿ ಇದ್ದಲ್ಲಿ ನಂಬಿಕೆ ಇರಲೇ ಬೇಕೆಂದಿಲ್ಲ. ಆದರೆ, ನಂಬಿಕೆ ಇದ್ದಲ್ಲಿ ಪ್ರೀತಿ ಇದ್ದೇ ಇರುವುದು. –ಸಂತ ಕಬೀರ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮನೆಯೆಂಬ ಮರ ಮುರಿಯಬಾರದು, ಮನಸ್ಸೆಂಬ ಮಾರ್ಗ ಕತ್ತರಿಸಬಾರದು.

## ನಿಮ್ಮ ಪತ್ರಗಳು

### ಕಣ್ಮರೆಯಾಗುತ್ತಿರುವ ಮೌಲ್ಯಗಳು?!

ಮಾನ್ಯರೆ,

ಮೌಲ್ಯ ಎಂದರೆ ಬೆಲೆ ಎನ್ನಬಹುದು. ಆದರೆ ನಾವು ಆಲೋಚಿಸ ಬೇಕಾಗಿರುವುದು ಯಾವುದರ ಬೆಲೆ ಎಂಬುದು. ಹಾಗೆ ನೋಡಿದಾಗ ಗುಣಗಳ ತಾಳೆ ಮಾಡುವುದಾಗಿದೆ. ಮೌಲ್ಯಗಳು ಒಬ್ಬ ವ್ಯಕ್ತಿಯ ನಡವಳಿಕೆ ಮತ್ತು ಆತನ ವರ್ತನೆಯನ್ನು ಅವಲಂಬಿಸಿದೆ ಎಂದರೆ ತಪ್ಪಾಗಲಾರದು. ಈ ಮೌಲ್ಯಗಳು ಪುರಾತನ ಕಾಲದಿಂದಲೇ ಜನ್ಮತಾಳಿವೆ. ಇದಕ್ಕೆ ಸೂಕ್ತ ನಿದರ್ಶನ ಶರಣ ಬಸವಣ್ಣನವರು ಅವರು ವಚನಗಳ ಮೂಲಕವೇ ಮೌಲ್ಯಗಳನ್ನು ಎತ್ತಿ ಹಿಡಿದಿದ್ದಾರೆ. ಇವರಷ್ಟೇ ಅಲ್ಲದೇ ಹನ್ನೆರಡನೇ ಶತಮಾನದ ಎಲ್ಲಾ ಸಮಕಾಲೀನ ಶಿವಶರಣರ ಸಮೂಹ ತಮ್ಮ ವಚನಗಳ, ಕೀರ್ತನೆಗಳ ಹಾಗೂ ಲೇಖನಗಳ ಮೂಲಕ ಜನಸಾಮಾನ್ಯರಿಗೆ ಮೌಲ್ಯಗಳನ್ನು ಬೆಳೆಸಿಕೊಳ್ಳುವಂತೆ ಪಾಲಕರ ಸ್ಥಾನದಲ್ಲಿದ್ದುಕೊಂಡು ಸಾರಿ ಹೇಳಿದ್ದಾರೆ.

ಇಂದು ಶರಣರ ವಚನಗಳು ನಮಗೆ ಹೊತ್ತಿಗೆಯಲ್ಲಿ ಬರೀ ಓದಲಿಕ್ಕೆ ಮಾತ್ರವೇ ಮೀಸಲು ಎಂದಾಗಿ ಬಿಟ್ಟಿದೆ. ಈ ಮೌಲ್ಯಗಳನ್ನು ಇಂದಿನ ಮಾನವರ ಅಂತರಂಗವನ್ನು ಹೊಕ್ಕುತಿಲ್ಲವೆನ್ನುವುದೇ ವಿಪರ್ಯಾಸದ ಸಂಗತಿ ಅಲ್ಲವೇ? ಬೆಳೆಯುವ ಸಿರಿ ಮೊಳಕೆಯಲ್ಲಿ ಎಂಬ ಗಾದೆ ಮಾತಿನಂತೆ ಮೌಲ್ಯಗಳು ಚಿಕ್ಕಂದಿನಿಂದಲೇ ಚಿಗುರೊಡೆಯಬೇಕು. ನಂತರ ಅದು ಬೆಳೆದು ಹೆಮ್ಮರವಾಗಿ ಇತರರಿಗೆ ಮೌಲ್ಯವೆಂಬ ಹಣ್ಣನ್ನು ಉಣಬಡಿಸುವುದು. ಈ ನಿಟ್ಟಿನಲ್ಲಿ ಸಮಾಜದ ಎಲ್ಲಾ ವರ್ಗದವರ ಪಾತ್ರ ಬಹು ಮುಖ್ಯವೆನಿಸುತ್ತದೆ.

ಇಂದು ನಾವು ರಸ್ತೆ ಅಪಘಾತವಾದಾಗ, ವ್ಯಕ್ತಿ ಮೂರ್ಛೆ ಬಿದ್ದಾಗ ಆತನನ್ನು ಸಂತೈಸಿ ಪ್ರಥಮ ಚಿಕಿತ್ಸೆ ಮಾಡದೆ ಆತನ ಪಕ್ಕ ನಿಂತು ಸೆಲ್ಫಿ ಗೀಳಿಗೆ ಇಳಿಯುವ ಅಮಾನುಷರಾಗಿದ್ದೇವೆ.ಇದು ನಮ್ಮಲ್ಲಿರುವ ಮೃಗದ ಗುಣವನ್ನು ತೋರ್ಪಡಿಸುತ್ತದೆ. ಇದು ಸಮಾಜದಲ್ಲಿ ಬದಲಾಗಬೇಕು ಎಂಬುದೇ ನಮ್ಮ ನಿಮ್ಮೆಲ್ಲರ ಧ್ಯೇಯವಾಗಬೇಕಲ್ಲವೇ? ಇದಕ್ಕಾಗಿ ನಾವೆಲ್ಲರೂ ಕೈಜೋಡಿಸಬೇಕಾಗಿದೆ. ನಮ್ಮ ಸುತ್ತಮುತ್ತಲಿನವರಿಂದ ಒಳ್ಳೆಯ ಗುಣಗಳನ್ನು ಕಲಿತುಕೊಳ್ಳೋಣ. ಆ ಗುಣಗಳನ್ನು ಮೊದಲು ನಾವು ಮೈಗೂಡಿಸಿಕೊಂಡು ನಂತರ ಅದನ್ನು ನಮ್ಮ ಹಿರಿಯರಿಗೆ ಕಿರಿಯರಿಗೆ ಹಂಚೋಣ. ಸ್ವಸ್ಥ ಸಮಾಜ ನಿರ್ಮಾಣದಲ್ಲಿ ತೊಡಗೋಣ. ಅದರಲ್ಲೂ ಮೊದಲು ವಿದ್ಯಾರ್ಥಿಗಳಿಗೆ ಮೌಲ್ಯದ ಅರಿವು ಮೂಡಿಸೋಣ. ಇವರೇ ನಮಗೆ ಮೌಲ್ಯವನ್ನು ಬೆಳೆಸುವ ಬ್ರಹ್ಮಾಸ್ತ್ರ. ಇವರಿಂದ ಒಳ್ಳೆಯ ಸಮಾಜ ನಿರ್ಮಿಸಬಹುದು. ಇದರಲ್ಲಿ ಪಾಲಕರ, ಶಿಕ್ಷಕರ ಹಾಗೂ ಸಮಾಜದ ಎಲ್ಲಾ ಜನಸಾಮಾನ್ಯರ ಪಾತ್ರವೂ ಬಹುಮುಖ್ಯವಾಗಿರುತ್ತದೆ. ಹಾಗಾದರೆ ನಮ್ಮ ನಿಲುವು ಮೌಲ್ಯಯುತ ಸಮಾಜದ ನಿರ್ಮಾಣದೆಡೆಗೆ ಎಲ್ಲರೂ ಒಟ್ಟಾಗಿ ಕಲಿಯೋಣ ಕಲಿಸೋಣಾ?!

–ಅನಿಲ್‌ರಾಜ, ಸಹ ಶಿಕ್ಷಕರು, ಮೈಸೂರು

### ಬದುಕಲಿಕ್ಕೆ ತಿನ್ನಬೇಕು

ಮಾನ್ಯರೆ,

ಕನ್ನಡದ ಅಸ್ಮಿತೆ ಬೆಳೆಯಬೇಕಾದರೆ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಬಾಡೂಟ ಕಡ್ಡಾಯ ಮಾಡಬೇಕೆಂದು ಮಹಾಶಯರೊಬ್ಬರು ಅಪ್ಪಣೆ ಕೊಡಿಸುವುದರ ಜೊತೆಗೆ ಬಾಡೂಟ ಮಾಡುವುದರಿಂದ ವೈಜ್ಞಾನಿಕತೆ ಮತ್ತು ವೈಚಾರಿಕತೆ ಬೆಳೆಯುತ್ತದೆ ಎಂಬ ಹಾಸ್ಯಾಸ್ಪದ ಹೇಳಿಕೆಯನ್ನು ನೀಡಿದ್ದಾರೆ. ಇದು ಇವರ ಸಾಂಸ್ಕೃತಿಕ ಕಳಕಳಿ ಎಷ್ಟರ ಮಟ್ಟಿಗೆ ಇದೆ ಎಂಬುದನ್ನು ಎತ್ತಿ ತೋರಿಸಿದ್ದಾರೆ.

ಮೊದಲು ಶಾಲೆಗಳಲ್ಲಿ ಕಾಗುಣಿತ ಹೇಳುವುದನ್ನು ಕಲಿಸಿ. ಅದು ಕನ್ನಡದ ಅಭಿವೃದ್ಧಿಗೆ ಪೂರಕವಾಗುತ್ತೆ. ಇಂದಿನ ಮಕ್ಕಳಿಗೆ ಹ್ರಸ್ವಸ್ವರ, ದೀರ್ಘಸ್ವರ, ಅಲ್ಪ ಪ್ರಾಣ, ಮಹಾಪ್ರಾಣ ಅರಿವಿಲ್ಲ. ಚಿಕ್ಕ 'ಟ' ದೊಡ್ಡ 'ಟ', ಚಿಕ್ಕ 'ಪ' ದೊಡ್ಡ 'ಪ' ಅಂತ ಮೇಷ್ಟರೇ ಕಲಿಸಿ ಕೊಡುವಾಗ ಕನ್ನಡ ಉದ್ಧಾರ ಆಗಲು ಸಾಧ್ಯವೇ? 'ಅ' ಕಾರ 'ಹ' ಕಾರ, 'ಸ' ಕಾರ 'ಶ' ಕಾರಗಳ ವ್ಯತ್ಯಾಸ ತಿಳಿಯದೆ ಅಸು, ಆಲು, ಸರೀರ, ಹೆತ್ತರ, ಹಡುಗೆ ಒಟ್ಟೆ, ಆಸ್ಯ ಅನ್ನುವ ಅಪಶಬ್ಧ ಕಲಿಸುವ ಬೋಧಕರನ್ನು ತಿದ್ದಿ. ಪ್ರಸ್ತುತ ಇದರ ಬಗ್ಗೆ ನಿಯೋಜಿತ ಸಮ್ಮೇಳನಾಧ್ಯಕ್ಷರ ನಿಲುವು ಏನು ಎಂಬುದನ್ನು ಜನತೆಗೆ ತಿಳಿಸಲಿ ಎಂದು ವಿನಂತಿಸುತ್ತೇನೆ. ಬದುಕಲಿಕ್ಕೆ ತಿನ್ನಬೇಕೇ ಹೊರತು, ತಿನ್ನಲಿಕ್ಕೇ ಬದುಕಬಾರದು.

–ವಿ. ಕೇಶವಮೂರ್ತಿ, ಜ್ಯೋತಿಷ್ಯ ವಿದ್ವಾಂಸ.

### ಮೈಸೂರು ಸ್ವಚ್ಛ ನಗರಿ ಆಗಲು ಸಾಧ್ಯವೇ?

ಮಾನ್ಯರೆ,

ಮೈಸೂರಿನ ಹೃದಯ ಭಾಗವಾದ ರೈಲು ನಿಲ್ದಾಣದ ಹೊರಗೆ ರೈಲು ಕಚೇರಿ ಎದುರು ಹಾಗೂ ಕೆ.ಆರ್. ಆಸ್ಪತ್ರೆ ವೃತ್ತದ ಎದುರು ಕೆಲವು ಅನಾಗರಿಕ ಜನರು ಫುಟ್‌ಪಾತ್‌ನಲ್ಲಿ ಗೋಡೆಗಳಿಗೆ ಮೂತ್ರ ವಿಸರ್ಜನೆ ಮಾಡುತ್ತಿದ್ದಾರೆ. ಇದರಿಂದ ಪಾದಚಾರಿಗಳು ಮೂಗು ಮುಚ್ಚಿಕೊಂಡು ತಿರುಗಾಡುವಂತಾಗಿದೆ. ಕೂಗಳತೆಯ ದೂರದಲ್ಲೇ ಹಣ್ಣು, ತರಕಾರಿ ಮಾರುತ್ತಿರುತ್ತಾರೆ. 10 ವರ್ಷದ ಹಿಂದೆ ಅತೀ ಸ್ವಚ್ಛ ನಗರಿಗಳಲ್ಲಿ ಒಂದಾದ ಮೈಸೂರಿಗೆ ಇದೊಂದು ಕಳಂಕ. ಸಾರ್ವಜನಿಕರ ತೆರಿಗೆ ಹಣದಿಂದ ಉಚಿತ ಶೌಚಾಲಯಗಳನ್ನು ನಿರ್ಮಿಸಲು ಮನವಿ.

–ಜಿ.ಪಿ. ರಾಜೇಶ್, ಸ್ನೇಹಿತರು, ಮೈಸೂರು.

### ಸಹಾಯಕ ಪ್ರಾಧ್ಯಾಪಕಿಯಾದ ಮಂಗಳಮುಖಿ, ಶ್ಲಾಘನೀಯ

ಮಾನ್ಯರೆ,

ಮಂಗಳಮುಖಿಯೊಬ್ಬರು (ರೇಣುಕಾ ಪೂಜಾರಿ), ಬಳ್ಳಾರಿಯ ವಿಜಯ ನಗರದ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದಲ್ಲಿ ಕನ್ನಡ ಸಹಾಯಕ ಪ್ರಾಧ್ಯಾಪಕಿಯಾಗಿ ಪ್ರಸಕ್ತ ಶೈಕ್ಷಣಿಕ ವರ್ಷದಿಂದ ಸೇವೆ ಸಲ್ಲಿಸಲು ಆಯ್ಕೆಯಾಗಿರುವುದು ರಾಜ್ಯದ ಇತಿಹಾಸದಲ್ಲೇ ಮೊದಲು ಎಂದು ಹೇಳಲಾಗುತ್ತಿದೆ. ಈ ಬಗ್ಗೆ ಎಲ್ಲಾ ಮಾಧ್ಯಮಗಳು ವರದಿ ಮಾಡಿವೆ. ರೇಣುಕಾ ಪೂಜಾರಿ ಎಂಬ ಮಂಗಳಮುಖಿಯೊಬ್ಬರು ಬಳ್ಳಾರಿಯ ವಿಜಯನಗರದ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾಲಯದಲ್ಲಿ ಕನ್ನಡ ಸ್ನಾತಕೋತ್ತರ ಪದವಿಯನ್ನು ಪಡೆದು ಅದೇ ವಿಶ್ವವಿದ್ಯಾಲಯದಲ್ಲಿ ಸಹಾಯಕ ಪ್ರಾಧ್ಯಾಪಕಿಯಾಗಿ ಆಯ್ಕೆಗೊಂಡಿರುವುದು ನಿಜಕ್ಕೂ ಶ್ಲಾಘನೀಯ.

ಮಂಗಳಮುಖಿಯರೆಂದರೆ, ಅವರು ಮೈ–ಗಳ್ಳರು, ಎಲ್ಲೆಂದರಲ್ಲಿ ಭಿಕ್ಷೆ ಬೇಡುವುದು, ಮದುವೆ – ಗೃಹ ಪ್ರವೇಶ ಇನ್ನಿತರ ಶುಭ ಸಮಾರಂಭಗಳಿಗೆ ಏಕಾಏಕಿ ನುಗ್ಗಿ ಹಣಕ್ಕಾಗಿ ಬೇಡಿಕೆ ಇಡುವುದು, ಸಾಕಷ್ಟು ಹಣ ಕೊಡದಿದ್ದರೆ ಎಲ್ಲರೆದುರು ನಿಂದಿಸುವುದು, ಸಾರ್ವಜನಿಕ ಸ್ಥಳಗಳಲ್ಲಿ ಅಸಭ್ಯವಾಗಿ ವರ್ತಿಸುವುದು ಇವರ ಕೆಲಸ ಎಂದುಕೊಂಡಿದ್ದೇವೆ. ಇವರುಗಳನ್ನು ಸಹ ಸಮಾಜದ ಮುಖ್ಯವಾಹಿನಿಗೆ ತರಲು ಅನೇಕ ಸಂಘ ಸಂಸ್ಥೆಗಳು ಅವಿರತವಾಗಿ ಶ್ರಮಿಸಿ ವಿಫಲವಾಗಿವೆ. ಆದರೆ ಜೀವನದಲ್ಲಿ ಶ್ರಮಪಟ್ಟರೆ ನಾವು ಸಹ ಎಲ್ಲರಂತೆ ಬದುಕನ್ನು ಕಟ್ಟಿಕೊಳ್ಳಬಹುದು ಎಂದು ರೇಣುಕಾ ಪೂಜಾರಿ ತೋರಿಸಿ ಕೊಟ್ಟಿದ್ದಾರೆ. ಇವರ ಬದುಕು ಒಂದು ರೀತಿಯಲ್ಲಿ ಯಶೋಗಾಥೆ ಎನ್ನಬಹುದು. ಇಂತಹವರು ಆದರ್ಶವಾಗಿ ಇನ್ನಿತರರು ಸಹ ಸ್ವಾಭಿಮಾನದ ಬದುಕು ಕಟ್ಟುಕೊಳ್ಳುವಂತಾಗಲಿ.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

## ನಾದಲಹರಿ

# ತಾಯಿ ಎಂಬ ಮಮತೆಯ ಕಡಲು

ಭಾರತೀಯ ಸಂಸ್ಕೃತಿಯು ತಾಯಿಗೆ ಅತ್ಯುನ್ನತ ಸ್ಥಾನವನ್ನು ಕೊಟ್ಟಿದೆ. ತಾಯಿಯೇ ಮನುಷ್ಯನ ಮೊದಲ ಗುರು. ಅವಳು ನಮ್ಮ ಸಂಸ್ಕೃತಿಯ ವಾಹಕಳೂ ಹೌದು. ಹೆಣ್ಣೊಂದು ಕಲಿತರೆ, ಇಡೀ ಕುಟುಂಬವೇ ಕಲಿತಂತೆ. ಮೊದಲು ಮಾತೃದೇವೋಭವ. ನಂತರ ಉಳಿದವರು. ಶಂಕರಾಚಾರ್ಯರಿಂದ ಹಿಡಿದು ಎಲ್ಲರೂ ಅತ್ಯಂತ ಗೌರವದಿಂದ ತಾಯಿಗೆ ತಲೆ ಬಾಗಿದವರೇ. ನಮ್ಮ ಪುರಾಣಗಳಲ್ಲೂ ಅವಳ ಹಿರಿಮೆ–ಗರಿಮೆಗಳನ್ನು ಸಾರುವ ಕತೆಗಳನ್ನು ನೋಡಬಹುದು. ಪಾರ್ವತಿ, ಸೀತೆ, ಯಶೋಧೆ ಎಲ್ಲರೂ ಮಾತೃ ಹೃದಯಿಗಳೇ. ಹೀಗೆ ತಾಯಿಗೆ ಆದ್ಯ ಸ್ಥಾನವನ್ನು ಕೊಟ್ಟಿರುವ ನಮ್ಮ ದೇಶವು ಅವಳನ್ನು ದೇವಿಯಾಗಿ ಪೂಜಿಸಿರುವುದೂ ಉಂಟು. ಅವಳನ್ನು ಅತ್ಯಂತ ಹೀನಾಯವಾಗಿ ಹಿಂಸಿಸಿರುವುದೂ ಉಂಟು ಎಂಬುದು ವಿರೋಧಾಭಾಸವೂ ಹೌದು, ವಾಸ್ತವವೂ ಹೌದು.

ತನ್ನ ಕಂದನನ್ನು ಒಂಬತ್ತು ತಿಂಗಳು ತನ್ನ ಒಡಲಲ್ಲಿ ಹೊತ್ತು, ಹೆತ್ತು, ಅದನ್ನು ಜೋಪಾನ ಮಾಡಿ ಬೆಳೆಸುವ, ಒಳ್ಳೆಯ ಸಂಸ್ಕಾರ ಮತ್ತು ವಿದ್ಯೆಯ ಓಂಕಾರ ಹಾಕುವ ಜವಾಬ್ದಾರಿ ಅವಳದೇ. ಅವಳಲ್ಲೆ ಮಾತನ್ನು ಕೇಳುತ್ತಲೇ ಮಗು ಬೆಳೆಯುವುದು, ಮಾತು ಕಲಿಯುವುದು. ತಾಯ ಮಡಿಲಿನಲ್ಲಿ ಬೆಳೆದ ಯಾವುದೇ ಮಗು, ಕೊನೆಯುಸಿರು ಇರುವತನಕ ತನ್ನ ತಾಯಿಯ ನೆನಪಿನಿಂದ ಬಹುಶಃ ಬಿಡುಗಡೆ ಹೊಂದುವುದಿಲ್ಲ. ಹೆಣ್ಣಿಗಂತೂ ತಾಯ ತವರು ಬಹಳ ಆಪ್ಯಾಯಮಾನವಾದುದು. ತನ್ನ ತವರು ಹೊಳೆದಂಡೆಯ ಗರಿಕೆಯಂತೆ ಬೆಳೆಯಲಿ ಎಂಬುದು ಜನಪದ ಹೆಣ್ಣಿನ ಹಾರೈಕೆ. ತಾಯಿ ಇದ್ದರೆ ಮಾತ್ರ ಅದು ತವರು. ತಾಯಿಯ ಪ್ರೀತಿಗೆ ಇದಕ್ಕಿಂತಲೂ ಉತ್ತಮ ಹೋಲಿಕೆ ಇಲ್ಲವೇನೋ. ತಾಯಿಯನ್ನು ಕುರಿತ ಅದೆಷ್ಟು ಕವಿಗಳು ಬರೆದಿಲ್ಲ! ನನ್ನವ್ವ ಫಲವತ್ತಾದ ಕಪ್ಪು ನೆಲ ಮಕ್ಕಳೊದ್ದರೆ, ಅವಳ ಅಂಗಾಂಗ ಪುಳಕ ಎಂದರು ಲಂಕೇಶರು. ಮಕ್ಕಳನ್ನು ಬೆಳೆಸುವಲ್ಲಿ ಅವಳು ಯಾವುದೇ ತ್ಯಾಗಕ್ಕೂ ಸಿದ್ಧಳಾಗುತ್ತಾಳೆ. ಅವಳ ಬದುಕಿನ ಗುರಿಯೇ ಮಕ್ಕಳ ಲಾಲನೆ ಪೋಷಣೆ ಆಗಿಬಿಡುವುದು ನಿತ್ಯ ಸತ್ಯ. ತಾನು ಎಂಬ ಸ್ವಾರ್ಥವೇ ಇಲ್ಲದಂತೆ ಆ ಜಾಗದಲ್ಲಿ ಅವಳ ಮಗುವಿನ ರಕ್ಷಣೆಯೇ ಆವರಿಸಿಕೊಂಡು ಬಿಡುವುದು ಬಹುಶಃ ಪ್ರಕೃತಿಯು ಅವಳಿಗೆ ನೀಡಿದ ದೇಣಿಗೆ.

ನಿಜ ಜೀವನದಲ್ಲಿ ಇದ್ದಂತಹ ಅಂತಹ ಒಬ್ಬ ತಾಯಿಯ ಬದುಕಿನ ಕತೆ ಇದು. ಆಕೆಯ ಹೆಸರು ರಂಗನಾಯಕಿ ಎಂದು ಇಟ್ಟುಕೊಳ್ಳೋಣ. ಮದ್ದೂರಿನ ಒಬ್ಬ ಸಾತ್ವಿಕ ಸಾಹುಕಾರನ ಕೊನೆಯ ಮಗಳಾಗಿ ಜನಿಸಿದ ಈಕೆಯು ತಾಯಿಯ ಮುಖವನ್ನೇ ಕಾಣದ ನತದೃಷ್ಟೆ, ಚಿಕ್ಕಮ್ಮನ ಆರೈಕೆಯಲ್ಲಿ, ತಂದೆಯ ಮುದ್ದಿನ ಮಗಳಾಗಿ, ಅಣ್ಣಂದಿರ ಮುದ್ದಿನ ತಂಗಿಯಾಗಿ ಬೆಳೆದ ಈಕೆಗೆ ಬದುಕಿನಲ್ಲಿ ಕಷ್ಟ ಎಂದರೇನು ಎಂಬುದೇ ಗೊತ್ತಿರಲಿಲ್ಲ. ಎರಡನೆಯ ತರಗತಿವರೆಗೆ ಮಾತ್ರ ಶಾಲೆಗೆ ಕಳುಹಿಸಿದ ಹಿರಿಯರು ಅವಳಲ್ಲಿದ್ದ ಓದಿನ ಆಸಕ್ತಿಯನ್ನು ಗಮನಿಸಲೇ ಇಲ್ಲ. ಮನೆಯಲ್ಲಿ ಅವಳ ಅಣ್ಣನಿಗೆ ಪಾಠ ಹೇಳಿಕೊಡಲು ಬರುತ್ತಿದ್ದ ಮಾಸ್ತರರು ಹೇಳುತ್ತಿದ್ದ ಪಾಠವನ್ನೆಲ್ಲಾ ಗಮನವಿಟ್ಟು ಕೇಳುತ್ತಲೇ ಓದಿನಲ್ಲಿ ಅಭಿರುಚಿಯನ್ನು ಬೆಳಸಿಕೊಂಡ ಆಕೆ ನಿಧಾನವಾಗಿ ಇಂಗ್ಲಿಷ್ ಅಕ್ಷರಗಳನ್ನೂ ಕಲಿಯತೊಡಗಿದಳು. ಇದನ್ನು ಗಮನಿಸಿದ ಅಣ್ಣನ ಮಾಸ್ತರರು ಅವಳ ಆಸಕ್ತಿಗೆ ನೀರೆರೆಯತೊಡಗಿದರು.

ಹೀಗಿರುವಾಗ, ಅಂದಿನ ಪದ್ಧತಿಯಂತೆ ಅವಳಿಗೆ ಹನ್ನೊಂದು



> “ ಮಕ್ಕಳನ್ನು ಬೆಳೆಸುವಲ್ಲಿ ತಾಯಿಯು ಯಾವುದೇ ತ್ಯಾಗಕ್ಕೂ ಸಿದ್ಧಳಾಗುತ್ತಾಳೆ. ಅವಳ ಬದುಕಿನ ಗುರಿಯೇ ಮಕ್ಕಳ ಲಾಲನೆ ಪೋಷಣೆ ಆಗಿಬಿಡುವುದು ನಿತ್ಯ ಸತ್ಯ. ತಾನು ಎಂಬ ಸ್ವಾರ್ಥವೇ ಇಲ್ಲದಂತೆ ಆ ಜಾಗದಲ್ಲಿ ಅವಳ ಮಗುವಿನ ರಕ್ಷಣೆಯೇ ಆವರಿಸಿಕೊಂಡು ಬಿಡುವುದು ಬಹುಶಃ ಪ್ರಕೃತಿಯು ಅವಳಿಗೆ ನೀಡಿದ ದೇಣಿಗೆ.

ವಯಸ್ಸಾಗುವಾಗ ಮೈಸೂರಿನ ಖ್ಯಾತ ಮನೆತನದ ಹಿರಿಯ ಪುತ್ರನೊಡನೆ ವಿವಾಹವನ್ನೂ ಮಾಡಿದರು. ತನ್ನ ಹದಿನಾಲ್ಕನೆಯ ವರುಷಕ್ಕೆ ಗಂಡನ ಮನೆಗೆ ಕಾಲಿಟ್ಟ ಆಕೆಯನ್ನು ಅಡಿಯಿಂದ ಮುಡಿಯವರೆಗೆ ಬಂಗಾರದ ಆಭರಣಗಳಿಂದ ಸಿಂಗರಿಸಿ ಕಳುಹಿಸಿದ್ದರು. ಸಮಾಜದಲ್ಲಿ ಗಂಡನ ಮನೆಯ ಹೆಸರು ಮಾತ್ರ ದೊಡ್ಡದು, ಒಳಗೆ ಕಿತ್ತು ತಿನ್ನುತ್ತಿದ್ದ ಬಡತನ ಇದೆ ಎಂಬುದು ಅವಳ ಅರಿವಿಗೆ ಬರಲು ತಡವಾಗಲಿಲ್ಲ. ಸೊಸೆಯ ಒಂದೊಂದೇ ಒಡವೆಗಳು ಮಾಯವಾಗಲೇಬೇಕಾದ ಅನಿವಾರ್ಯತೆಯನ್ನು ಯಾವ ತಕರಾರೂ ಇಲ್ಲದೆ ಒಪ್ಪಿಕೊಂಡ ಆಕೆ, ಮನೆತನದ ಮರ್ಯಾದೆಯನ್ನು ಯಾವ ಕಾರಣಕ್ಕೂ ಬಿಟ್ಟುಕೊಡದ ಮನಃಸ್ಥಿತಿಯನ್ನು ಬೆಳೆಸಿಕೊಂಡಳು. ಇಂತಹ ಒಳ್ಳೆಯ ಸೊಸೆಯನ್ನು ಅತ್ತೆಯು ತಮ್ಮ ಮಗಳಂತೆಯೇ ನೋಡಿಕೊಂಡುದರಲ್ಲಿ ಆಶ್ಚರ್ಯವೇನೂ ಇಲ್ಲ. ಅತ್ತೆ, ಸೊಸೆ ಇಬ್ಬರೂ ಮನೆತುಂಬ ಮಕ್ಕಳನ್ನು ಹೆತ್ತರು. ಅರಮನೆಯಲ್ಲಿ ಕೆಲಸ ಮಾಡುತ್ತಿದ್ದ ಗಂಡನಿಗೆ ಹದಿಮೂರು ರೂಪಾಯಿಗಳ ಸಂಬಳ. ಮಾವನವರ ದುಡಿಮೆಗಿಂತ ದರ್ಪವೇ ಜೋರು. ಗಂಡನೂ ಬೆಂಕಿ ನವಾಬನೇ ಆಗಿದ್ದರೂ ಹೆಂಡತಿಯನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದ. ಹೀಗೇ ಯಾವುದೋ ವಿಷಯಕ್ಕೆ ಬೇಜಾರು ಮಾಡಿಕೊಂಡ ಗಂಡ, ತನ್ನ ಹೆಂಡತಿ ಮಕ್ಕಳೊಡನೆ ಬೇರೆ ಮನೆ ಹೂಡಿದ.

ತನ್ನ ಕೈಗೆ ಗಂಡ ತಂದಿತ್ತ ಹದಿಮೂರು ರೂಪಾಯಿಗಳಲ್ಲಿ ಆ ತಿಂಗಳ ಖರ್ಚು ಕಳೆದು ಒಂದೆರಡು ರೂಪಾಯಿಗಳನ್ನೂ ಉಳಿಸಿದ ಹೆಂಡತಿಯ ಜಾಣ್ಮೆಗೆ ತಲೆದೂಗಿ, ಅಂದಿನಿಂದ ಬಂದ ದುಡ್ಡನ್ನೆಲ್ಲಾ ಆಕೆಯ ಕೈಲಿರಿಸಿ, ಸಂಸಾರದ ಜವಾಬ್ದಾರಿಯನ್ನು ಪೂರ್ತಿ ಆಕೆಯ ಮೇಲೇ ಹೊರೆಸಿ ನಿಶ್ಚಿಂತನಾದ ಆ ಗಂಡ. ಇದ್ದುದರಲ್ಲೇ ಸಂಸಾರವನ್ನು ತೂಗಿಸಿಕೊಂಡು ಹೋಗುವ ಜಾಣ್ಮೆಯನ್ನು ದೇವರು ಆಕೆಗೆ ವರವಾಗಿ ಇತ್ತಿದ್ದನೇನೋ ಎಂಬಂತೆ ಒಂದು ಚಿಕ್ಕಾಸಿನ ಸಾಲ ಮಾಡದೆ, ಸಂಸಾರವೆಂಬ ನೊಗಕ್ಕೆ ಕೊರಳು ನೀಡಿದ ಆಕೆಯು ಮಕ್ಕಳಿಗೆ ಒಳ್ಳೆಯ ಸಂಸ್ಕಾರವನ್ನು ನೀಡುವುದರಲ್ಲಿ ಮಗ್ನಳಾದಳು. ಎಂಟು ಮಕ್ಕಳನ್ನು ಹೆತ್ತ ಅವಳ ಚೊಚ್ಚಲ ಮಗ ತನ್ನ ಹದಿನೆಂಟನೆಯ ವಯಸ್ಸಿನಲ್ಲಿ ತೀರಿಕೊಂಡಾಗ ಅವಳ ಮಾತೃ ಹೃದಯಕ್ಕೆ ಕೊಳ್ಳಿ ಇಟ್ಟಂತಾಗಿತ್ತು. ಮಿಕ್ಕ ಏಳು ಮಂದಿಯನ್ನು ಜತನದಿಂದ ನೋಡಿಕೊಂಡ ಆಕೆಗೆ ಒಂದೇ ಕನಸಿತ್ತು. ತಾನಂತೂ ಪದವೀಧರೆಯಾಗಲಿಲ್ಲ. ತನ್ನ ಮಕ್ಕಳಾದರೂ ಓದಿ ಪದವೀಧರರಾಗಬೇಕೆಂದು. ಓದಿನಲ್ಲಿ ಅಷ್ಟೇನೂ ಆಸಕ್ತಿ ತೋರದ ಗಂಡುಮಕ್ಕಳಿಗಿಂತ ಹೆಣ್ಣು ಮಕ್ಕಳೇ ಅವಳ ಆಸೆಯನ್ನು ಪೂರೈಸಿದಾಗ ಅವಳ ಸಂತೋಷಕ್ಕೆ ಪಾರವೇ ಇರಲಿಲ್ಲ. ಆ ವೇಳೆಗಾಗಲೇ ಕನ್ನಡದ ಅಸಂಖ್ಯಾತ ಪುಸ್ತಕಗಳನ್ನು–ಕಾದಂಬರಿ, ರಾಮಾಯಣ ಮಹಾಭಾರತಗಳೆಲ್ಲವನ್ನೂ ಓದಿ ಮುಗಿಸಿದ್ದ ಅವಳು ಬದುಕಿನ ಶಾಲೆಯಲ್ಲಿ ಪಿಎಚ್.ಡಿ ಪದವೀಧರೆಯೇ ಆಗಿದ್ದಳು. ಮೂರು ಹೆಣ್ಣು ಮತ್ತು ನಾಕು ಗಂಡು ಮಕ್ಕಳಲ್ಲಿ ಮನೆತನದ ಮರ್ಯಾದೆಯ ಬಗ್ಗೆ, ಅದನ್ನು ಕಾಪಾಡಿಕೊಂಡು ಹೋಗುವುದರ ಬಗ್ಗೆ ಮನಸ್ಸಿಗೆ ನಾಟುವಂತೆ ತಿಳುವಳಿಕೆ ನೀಡಿದ್ದಳು. ಸಂಸಾರದ ಜವಾಬ್ದಾರಿಯೇ ಇಲ್ಲದ ಗಂಡನನ್ನು ಕಟ್ಟಿಕೊಂಡು ಎಲ್ಲ ಮಕ್ಕಳ ಮದುವೆಯನ್ನೂ ಮಾಡಿ ಸೈ ಎನಿಸಿಕೊಂಡಳು.

ಮನುಷ್ಯನ ಸ್ವಭಾವವು ಯಾವ ಸಂದರ್ಭದಲ್ಲಿ ಹೇಗಿರುತ್ತದೆ ಎಂಬುದನ್ನು ಚೆನ್ನಾಗಿ ಅರಿತವಳಾದ ಆಕೆ ಎಂತಹ ಬಡತನದ ಸಮಯದಲ್ಲೂ ತನ್ನ ಸೆರಗನ್ನು ಭದ್ರವಾಗಿ ಹಿಡಿದುಕೊಂಡು ಹೆಣ್ಣು ಮಕ್ಕಳಿಗೆ ದಾರಿದೀಪವಾದಳು. ದೃಢ ಮನಸಿನ, ಕಷ್ಟಜೀವಿಯಾಗಿದ್ದ ಅಂತಹ ತಾಯಿ ಧುತ್ತನೆ ತನ್ನ ಗಂಡನನ್ನು ಕಳೆದುಕೊಂಡಾಗ ಮಕ್ಕಳ ಆಶ್ರಯದಲ್ಲಿರಬೇಕಾಯಿತು. ಗಂಡು ಮಕ್ಕಳಿಗೆ, ಸೊಸೆಯಂದಿರಿಗೆ ಬೇಡದ ವಸ್ತುವಾಗಿ, ಹೆಣ್ಣು ಮಕ್ಕಳ ಮನೆಯಲ್ಲಿಯೇ ಹೆಚ್ಚಾಗಿ ಇರುತ್ತಿದ್ದ ಅವಳು ಮನದಲ್ಲಿ ಅನುಭವಿಸುತ್ತಿದ್ದ ಯಾತನೆಯನ್ನು ಯಾರೊಡನೆಯೂ ಹಂಚಿಕೊಳ್ಳಲಿಲ್ಲ. ಗಾಂಭೀರ್ಯ ತುಂಬಿದ ಅವಳ ನಡವಳಿಕೆಯು ಸ್ವಲ್ಪವೂ ಬದಲಾಗಲಿಲ್ಲ. ಮೊಮ್ಮಕ್ಕಳ ಪ್ರೀತಿಯನ್ನು ಅನುಭವಿಸುತ್ತಲೇ ತನ್ನ ಬದುಕಿಗೆ ವಿದಾಯ ಹೇಳಿದ ಅವಳು ಎಲ್ಲರಿಗೂ ಕೇವಲ ನೆನಪಾಗಿ ಉಳಿದಳು ಅಷ್ಟೇ.

# ಮನೆಗಳಲ್ಲೇ ಕಸ ವಿಂಗಡಿಸಿ ಕೊಡದಿದ್ದರೆ ದಂಡಾಸ್ತ್ರ ಪ್ರಯೋಗಿಸಿ

## ಪಾಲಿಕೆಗೆ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ ರಾಜ್ಯ ಸಮಿತಿಯ ಅಧ್ಯಕ್ಷ ಸುಭಾಷ್ ಬಿ.ಅಡಿ ಸೂಚನೆ

ಮೈಸೂರು,ಡಿ.21(ಪಿಎಂ)– ಹಸಿ ಕಸ, ಒಣ ಕಸ ಮತ್ತು ಹಾನಿಕಾರಕ ಕಸ (ಬಯೋಮೆಡಿಕಲ್ ತ್ಯಾಜ್ಯ) ಸೇರಿದಂತೆ ಮೂರು ತ್ಯಾಜ್ಯಗಳನ್ನು ಮನೆಗಳಲ್ಲೇ ವಿಂಗಡಿಸಿ ಕೊಡುವಂತೆ ಕ್ರಮ ವಹಿಸಬೇಕು. ಇದನ್ನು ಪಾಲಿಸಿದ ನಾಗರಿಕರಿಗೆ ದಂಡ ವಿಧಿಸಬೇಕು. ಇದನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕೆಂದು ಪಾಲಿಕೆಗೆ ನಿವೃತ್ತ ನ್ಯಾಯಮೂರ್ತಿಗಳೂ ಆದ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದ ರಾಜ್ಯ ಸಮಿತಿಯ ಅಧ್ಯಕ್ಷ ಸುಭಾಷ್ ಬಿ.ಅಡಿ ಸೂಚನೆ ನೀಡಿದರು.

ಮೈಸೂರು ಮಹಾನಗರ ಪಾಲಿಕೆಯ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಸಭಾಂಗಣದಲ್ಲಿ ಘನತ್ಯಾಜ್ಯ ವಸ್ತು ನಿರ್ವಹಣೆ ಸಂಬಂಧ ಶನಿವಾರ ಹಮ್ಮಿಕೊಂಡಿದ್ದ ಮೈಸೂರು ಮಹಾನಗರ ಪಾಲಿಕೆ ಸೇರಿದಂತೆ ವಿವಿಧ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳು, ವಿವಿಧ ಕ್ಷೇತ್ರದ ಪಾಲುದಾರರು ಮತ್ತು ನಾನಾ ಕ್ಷೇತ್ರದ ಉದ್ಯಮಿಗಳ ಸಭೆಯ ಅಧ್ಯಕ್ಷತೆ ವಹಿಸಿ ಚರ್ಚಿಸಿ ಅಂತಿಮವಾಗಿ ಪಾಲಿಕೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಸಭೆಯಲ್ಲಿ ವ್ಯಕ್ತವಾದಂತೆ ತ್ಯಾಜ್ಯ ವಿಂಗಡಣೆ ಬಗ್ಗೆ ಸಾಕಷ್ಟು ಜಾಗೃತಿ ಮೂಡಿಸಿಯಾಗಿದೆ. ಹಸಿಕಸ, ಒಣಕಸ ಮತ್ತು ಹಾನಿಕಾರಕ ಕಸ (ಬಯೋಮೆಡಿಕಲ್ ತ್ಯಾಜ್ಯ) ಮೂರು ಕಸ ವಿಂಗಡನೆ ಮಾಡಿ ಮನೆಯಿಂದ ಕೊಡಬೇಕು. ಈ ಬಗ್ಗೆ ಒಮ್ಮೆ ತಿಳುವಳಿಕೆ ಹೇಳಿ. ಅದಾಗ್ಯೂ ವಿಂಗಡಿಸಿ ಕೊಡದಿದ್ದರೆ ದಂಡ ವಿಧಿಸಬೇಕು. ಇದು ಕಟ್ಟುನಿಟ್ಟಾಗಿ ಜಾರಿಯಾಗಬೇಕು. ಎಷ್ಟು ದಂಡ ವಿಧಿಸಬೇಕೆಂದು ನಿಗದಿಗೊಳಿಸಿ ಕ್ರಮ ವಹಿಸಬೇಕೆಂದು ಪಾಲಿಕೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

**ಒಣ ತ್ಯಾಜ್ಯ ಪಾಲಿಕೆಯೇ ಸಂಗ್ರಹಿಸಬೇಕು:** ಒಣ ತ್ಯಾಜ್ಯ ಸಂಗ್ರಹ ಪಾಲಿಕೆಯಿಂದಲೇ ನಡೆಯಬೇಕು. ಇದಕ್ಕೆ ಬೇರೆ ಯಾರಿಗೂ ಅವಕಾಶ ನೀಡಬಾರದು. ಇದರ ಮರು ಬಳಕೆ ಸಾಧ್ಯವಿದೆ. ಇದರಲ್ಲಿ ಉತ್ತಮ ಆದಾಯವೂ ಇದೆ. ಉದಾಹರಣೆಗೆ ಯಾವುದೇ ಸಮಾರಂಭವಾದರೂ ಪೆಟ್ (PET) ಕಪ್ ಸಾವಿರಾರು ಸಂಖ್ಯೆಯಲ್ಲಿ ತ್ಯಾಜ್ಯವಾಗಲಿವೆ. ಇವು ಮೌಲ್ಯಾಧಾರಿತ ಮರು ಬಳಕೆಯ ಸಾಮಗ್ರಿಗಳಾಗಿವೆ. ಇವುಗಳ ಸಂಗ್ರಹವು ಪಾಲಿಕೆಯ ಆದಾಯ ಮೂಲವಾಗಲಿದೆ ಮುಖ್ಯವಾಗಿ ಒಣ ತ್ಯಾಜ್ಯ ಆಯ್ದುಕೊಳ್ಳುವವರಿಗೆ ಉದ್ಯೋಗ ನೀಡುವ ಅವಕಾಶ ಬಳಸಿಕೊಳ್ಳಬೇಕು ಎಂದರು.

ಈ ನಿಟ್ಟಿನಲ್ಲಿ ಯಾವುದೇ ಕಾರ್ಯಕ್ರಮ ಆಯೋಜನೆಗೆ ಪಾಲಿಕೆ ಅನುಮತಿ ಪಡೆಯುವುದನ್ನು ಕಡ್ಡಾಯಗೊಳಿಸಬೇಕು. ಇದಕ್ಕೆ ಕಾನೂನಿನಲ್ಲಿ ಅವಕಾಶವಿದೆ.



ಮೈಸೂರು ಮಹಾನಗರ ಪಾಲಿಕೆಯಲ್ಲಿ ಶನಿವಾರ ಘನತ್ಯಾಜ್ಯ ವಸ್ತು ನಿರ್ವಹಣೆ ಸಂಬಂಧ ಸಭೆ ನಡೆಯಿತು.

ರಾಜಕೀಯ, ಧಾರ್ಮಿಕ, ಸಾಮಾಜಿಕ ಸೇರಿದಂತೆ ಯಾವುದೇ ಸಮಾರಂಭವಾದರೂ ಪಾಲಿಕೆ ಅನುಮತಿ ಕಡ್ಡಾಯಗೊಳಿಸಬೇಕು ಎಂದು ತಿಳಿಸಿದರು.

ಹೆಚ್ಚಿನ ಪ್ರಮಾಣದ ತ್ಯಾಜ್ಯ ಉತ್ಪಾದನೆಯಾಗುವ ಚೌಲ್ಟ್ರಿ, ಸಂಘ ಸಂಸ್ಥೆಗಳು, ಅಪಾರ್ಟ್‌ಮೆಂಟ್ ಮೊದಲಾದವುಗಳಲ್ಲಿ ಅವರಲ್ಲಿಯೇ ಹಸಿ ಕಸವನ್ನು ಗೊಬ್ಬರವಾಗಿ ಮಾರ್ಪಡಿಸಲು ಉತ್ತೇಜನ ನೀಡಬೇಕು. ದೊಡ್ಡ ನಿವೇಶನ ಹೊಂದಿರುವವರಿಗೂ ಈ ಅವಕಾಶದ ಬಗ್ಗೆ ತಿಳಿಸಬೇಕು. ಜೊತೆಗೆ ತರಕಾರಿ ಮಾರುಕಟ್ಟೆಗಳ ಬಳಿಯಲ್ಲಿ ಸಣ್ಣದಾದ ಗೊಬ್ಬರ ಉತ್ಪಾದನಾ ಘಟಕ ನಿರ್ಮಿಸಬೇಕು. ಇದರಿಂದ ಸಂಗ್ರಹ, ಸಾರಿಗೆ ವೆಚ್ಚ ಸೇರಿದಂತೆ ಪಾಲಿಕೆಯ ತ್ಯಾಜ್ಯ ನಿರ್ವಹಣೆ ಮೇಲಿನ ಒತ್ತಡವೂ ಕಡಿಮೆಯಾಗುತ್ತದೆ. ಹೋಟೆಲ್, ಚೌಲ್ಟ್ರಿ, ಶಿಕ್ಷಣ ಸಂಸ್ಥೆಗಳು ಸೇರಿದಂತೆ ಮೊದಲಾದೆಡೆ ಗ್ರೀನ್ ಕ್ಯಾಂಪಸ್‌ಗೆ ಉತ್ತೇಜನ ನೀಡಬೇಕು. ಇದು ಸುಸ್ಥಿರ ಅಭಿವೃದ್ಧಿ ಮಾದರಿಯಾಗಿದೆ ಎಂದರು.

**ಅನಧಿಕೃತ ಪಿಜಿಗಳ ಮುಚ್ಚಿಸಿ:** ನಗರದಲ್ಲಿರುವ ಅನಧಿಕೃತ ಪಿಜಿ ಸೆಂಟರ್‌ಗಳನ್ನು ಮುಚ್ಚಿಸಲು ಕ್ರಮ ವಹಿಸಬೇಕು. ಪಿಜಿ ಆರಂಭಕ್ಕೆ ಪಾಲಿಕೆ ಅನುಮತಿ, ಪರವಾನಗಿ ಪಡೆಯುವುದನ್ನು ಪಾಲಿಕೆ ಬೈಲಾದಲ್ಲಿ ತರಬೇಕು. ಜೊತೆಗೆ ಅವರಲ್ಲಿ ಅಡುಗೆ ಮನೆ ಇರಬೇಕು, ಸ್ವಚ್ಛತೆ ನಿರ್ವಹಣೆ ಇರಬೇಕೆಂಬುದು ಸೇರಿದಂತೆ ಅಗತ್ಯ ಷರತ್ತುಗಳನ್ನು ವಿಧಿಸಿ ಅನುಮತಿ ನೀಡುವ ವ್ಯವಸ್ಥೆ ಜಾರಿಗೊಳಿಸಲು ಕ್ರಮ ವಹಿಸಬೇಕು. ಅದಾಗ್ಯೂ ಅನಧಿಕೃತ ಸೆಂಟರ್‌ಗಳು ತಲೆ ಎತ್ತಿದರೆ ಬೀಗಮುದ್ರೆ ಹಾಕಲು ಕ್ರಮ ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು.

ಕಟ್ಟಡ ನಿರ್ಮಾಣಗೊಳ್ಳದ ನಿವೇಶನಗಳ ಸ್ವಚ್ಛತೆಗೆ ಪಾಲಿಕೆ ಕ್ರಮ ವಹಿಸಬೇಕು.

### ಫುಟ್‌ಪಾತ್‌ನಲ್ಲಿ ಸಾಮಗ್ರಿ ಪ್ರದರ್ಶನ ಸಲ್ಲದು!

ನಗರದ ಫುಟ್‌ಪಾತ್‌ಗಳ ಒತ್ತುವರಿ ತೆರವಿಗೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಫುಟ್‌ಪಾಪ್‌ಗಳನ್ನು ಯಾವುದೇ ಮಳಿಗೆಯ ಸಾಮಗ್ರಿಗಳ ಪ್ರದರ್ಶನದ ವೇದಿಕೆಯಾಗಲು ಬಿಡಬಾರದು. ಪಾದಚಾರಿಗಳ ಸಂಚಾರಕ್ಕೆ ಬಳಕೆಯಾಗುವಂತೆ ಕ್ರಮ ವಹಿಸಬೇಕು. ಬೆಂಗಳೂರಿನಲ್ಲಿ ಫುಟ್‌ಪಾತ್ ಒತ್ತುವರಿ ಸಾಮಾನ್ಯವಾಗಿ ಬಿಟ್ಟಿದೆ. ಆದರೆ ಮೈಸೂರಿನಲ್ಲಿ ಹಾಗೆ ಆಗಬಾರದು. ಯಾವುದೇ ಫುಟ್‌ಪಾತ್ ಒತ್ತುವರಿಗೆ ಅವಕಾಶ ನೀಡಬಾರದು ಎಂದು ಸುಭಾಷ್ ಬಿ.ಅಡಿ, ಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದರು.

ಈ ಸಂಬಂಧ ನಿವೇಶನ ಮಾಲೀಕರಿಗೆ ಶುಲ್ಕ ವಿಧಿಸಿ, ಪಾವತಿಸದೇ ಇದ್ದಲ್ಲಿ ಆಸ್ತಿ ತೆರಿಗೆಯಲ್ಲಿ ಶುಲ್ಕ ಕಡಿತ ಮಾಡಿಕೊಳ್ಳಲು ಕ್ರಮ ಕೈಗೊಳ್ಳಬೇಕು. ಕೊಳಚೆ ನೀರು, ಒಳಚರಂಡಿ ನಿರ್ವಹಣೆ ಸಮರ್ಪಕವಾಗಿ ಇರಬೇಕು. ಇಲ್ಲವಾದರೆ ಕೆರೆಕಟ್ಟೆಗಳಲ್ಲಿ ಮಾಲಿನ್ಯ ಸಮಸ್ಯೆ ತಲೆದೋರಲಿದೆ ಎಂದು ಎಚ್ಚರಿಸಿದರು.

ಪಾಲಿಕೆ ಆಯುಕ್ತ ಆಶಾದ್ ಉರ್ ರೆಹಮಾನ್ ಷರೀಫ್, ಆರೋಗ್ಯಾಧಿಕಾರಿ ಡಾ.ವೆಂಕಟೇಶ್, ಉಪ ಆಯುಕ್ತ (ಅಭಿವೃದ್ಧಿ) ಕೆ.ಜೆ.ಸಿಂಧು, ಸಹಾಯಕ ಕಾರ್ಯಪಾಲಕ ಅಭಿಯಂತರ ಮೃತ್ಯುಂಜಯ, ಮೈಸೂರು ಗ್ರಾಹಕರ ಪರಿಷತ್ತಿನ (ಎಂಜಿಪಿ) ಸಂಸ್ಥಾಪಕ ಅಧ್ಯಕ್ಷ ಭಾಮೀ ವಿ.ಶೆಣೈ, ಅಧ್ಯಕ್ಷ ಶ್ರೀಶೈಲ ರಾಮಣ್ಣನವರ್, ಕಾರ್ಯಾಧ್ಯಕ್ಷೆ ಶೋಭನಾ, ಕಾರ್ಯಕಾರಿ ಸಮಿತಿ ಸದಸ್ಯ ಅರುಣ್‌ಕುಮಾರ್ ಶೆಟ್ಟರ್, ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಕ್ಲೀನ್ ಅಂಡ್ ಡ್ರೀಮ್ ಸಂಘಟನೆಯ ವೆಂಕಟೇಶ್, ಕ್ಲಿನ್ ಮೈಸೂರು ಫೌಂಡೇಷನ್‌ನ ಲೀಲಾ ಶಿವಕುಮಾರ್, ನೆಕ್ಸಸ್ ಮಾಲ್ ಪ್ರತಿನಿಧಿ ಗುರುಪ್ರಸಾದ್, ಕ್ರೆಡಯ್ ಪ್ರತಿನಿಧಿ ಅರುಣ್ ಪಂಡಿತ್ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳು, ವಿವಿಧ ಇಲಾಖೆ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು.

### ಕಸ ನಿರ್ವಹಣೆ; ನಾಗರಿಕರ ಹೊಣೆ

**ಮೈಸೂರು:** ಮೈಸೂರಿನ ಸಚ್ಛತೆ ಕಾಯ್ದುಕೊಳ್ಳುವುದು ನಾಗರಿಕರ ಚಳವಳಿಯಾಗಿ ರೂಪುಗೊಳ್ಳಬೇಕು ಎಂದು ಸುಭಾಷ್ ಬಿ.ಅಡಿ ತಿಳಿಸಿದರು. ಸ್ವಚ್ಛತೆಯಲ್ಲಿ ಮೈಸೂರು ಮತ್ತೆ ಪ್ರಥಮ ಸ್ಥಾನ ಅಲಂಕರಿಸಬೇಕು. ಈ ನಿಟ್ಟಿನಲ್ಲಿ ಪ್ರತಿಯೊಬ್ಬರು ಜವಾಬ್ದಾರಿ ಅರಿಯಬೇಕು ಎಂದು ಸಲಹೆ ನೀಡಿದರು.

**ಜಾಗೃತಿಯಾಗಬೇಕು:** ಶಾಲೆಗಳಿಂದ ಜಾಗೃತಿಯಾದರೆ ತ್ಯಾಜ್ಯ ನಿರ್ವಹಣೆ ಚಳುವಳಿ ರೂಪ ಪಡೆಯಲಿದೆ. ನಮ್ಮ ಸಂಘಟನೆಯಿಂದ ಈಗಾಗಲೇ ಸಾಕಷ್ಟು ಶಾಲೆಗಳಲ್ಲಿ ಜಾಗೃತಿ ಮೂಡಿಸಲಾಗಿದೆ. ಅಲ್ಲದೆ, ಜನಪ್ರತಿನಿಧಿಗಳು ಒಳಗೊಂಡಂತೆ ಸಮಿತಿ ರಚಿಸಬೇಕೆಂದು ಭಾಮೀ ವಿ.ಶೆಣೈ ತಿಳಿಸಿದರು.

**ವಿ.ಶೆಣೈ ಬೇಸರ:** ಕಟ್ಟಡ ತ್ಯಾಜ್ಯ ನಿರ್ವಹಣೆ ಸಂಬಂಧ ಪಾಲಿಕೆಯಿಂದ ಯಾವ ಕ್ರಮವಾಗಿದೆ ಎಂದು ಭಾಮೀ ವಿ.ಶೆಣೈ, ಮಾಹಿತಿ ಕೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಪಾಲಿಕೆ ಅಧಿಕಾರಿಯು, ಜಾಗದ್ದು ಸಮಸ್ಯೆಯಾಗಿದೆ. ಮುಡಾ, ಜಾಗ ಕೊಟ್ಟ ಬಳಿಕ ಕ್ರಮವಾಗಲಿದೆ ಎಂದರು. ಇದಕ್ಕೆ ಶೆಣೈ, ಕೆಲವು ಬಾರಿ ಇದೇ ಹೇಳಿದ್ರಿ ಎಂದಾಗ, ಜಾಗ ಕೊಟ್ಟ ತಕ್ಷಣ ಕಟ್ಟಡ ತ್ಯಾಜ್ಯ ಸಂಸ್ಕರಣ ಘಟಕ ಕಾಮಗಾರಿ ಆರಂಭವಾಗಲಿದೆ ಎಂದರು.

**ಅನಧಿಕೃತ ಪಿಜಿಗಳಿಂದ ನಿರ್ಲಕ್ಷ್ಯ:** ನಗರದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಅನಧಿಕೃತ ಪಿಜಿಗಳು ನಡೆಯುತ್ತಿದ್ದು, ಅವುಗಳಲ್ಲಿ ಎಲ್ಲೆಂದರಲ್ಲಿ ಕಸ ಎಸೆಯಲಾಗುತ್ತದೆ ಎಂದು ಆರೋಪ ಕೇಳಿ ಬಂದ ಹಿನ್ನೆಲೆಯಲ್ಲಿ ಕ್ರಮ ವಹಿಸುವಂತೆ ಸುಭಾಷ್ ಬಿ.ಅಡಿ, ಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದರು.

### ಶ್ರೀ ಭಗವತಿ ಕೊಡವ ಸೌಹಾರ್ದ ಸಹಕಾರಿ ಸಂಘದ ಕ್ಯಾಲೆಂಡರ್ ಬಿಡುಗಡೆ



ಮೈಸೂರಿನ ನಿವೇದಿತನಗರದ ಶ್ರೀ ಭಗವತಿ ಕೊಡವ ಸೌಹಾರ್ದ ಸಹಕಾರಿ ಸಂಘ ಹೊರತಂದಿರುವ ನೂತನ ವರ್ಷದ ಕ್ಯಾಲೆಂಡರ್ ಅನ್ನು ಶಾಸಕ ಜಿ.ಟಿ.ದೇವೇಗೌಡರು ಬಿಡುಗಡೆಗೊಳಿಸಿದರು. ಈ ವೇಳೆ ಜಿಟಿಡಿ ಅವರ ಪತ್ನಿ ಶ್ರೀಮತಿ ಲಲಿತಾ ಜಿ.ಟಿ.ದೇವೇಗೌಡ, ಸಂಘದ ಪೊಳ್ಳೆಯಂಡ ನಂಜಪ್ಪ, ಕಟ್ಟಿಮಂಡ ಕಾರ್ಯಪ್ಪ, ತಂಬುಕುತ್ತಿರ ಪಾವನ ಬೋಪ್ಪೋಳಂಡ ಸರಳ, ಪಾಲಂದಿರ ಸೋಮಣ್ಣ, ಪಾಲಂದಿರ ಪೂಣ್ಣಯ್ಯ, ಆದೆಂಗಡ ಸೋಮಣ್ಣ, ಮುಕ್ಕಾಟಿರ ಬೆಳ್ಯಪ್ಪ ಹಾಜರಿದ್ದರು.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com*

# ಯುಜಿ, ಪಿಜಿ ಆಯುಷ್: ನಾಳೆಯಿಂದ ಕೊನೆ ಸುತ್ತಿನ ಸೀಟು ಹಂಚಿಕೆ

ಬೆಂಗಳೂರು, ಡಿ.21– ಪ್ರಸಕ್ತ ಸಾಲಿನ ಪದವಿ ಮತ್ತು ಸ್ನಾತಕೋತ್ತರ ಪದವಿಯ ಆಯುಷ್ ಕೋರ್ಸ್‌ಗಳ ಪ್ರವೇಶಕ್ಕೆ ಕೊನೆ ಸುತ್ತಿನ ಸೀಟು ಹಂಚಿಕೆಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಅವಕಾಶ ಕಲ್ಪಿಸಿದೆ. ಅರ್ಹ ಅಭ್ಯರ್ಥಿಗಳು ಡಿ.23ರಿಂದ ಕೋರ್ಸ್ ಶುಲ್ಕವನ್ನು ಮುಂಗಡವಾಗಿ ಪಾವತಿಸಿ ಈ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್. ಪ್ರಸನ್ನ ಅವರು ತಿಳಿಸಿದ್ದಾರೆ. ಭಾರತೀಯ ವೈದ್ಯ ಪದ್ಧತಿಯ ರಾಷ್ಟ್ರೀಯ ಆಯೋಗ ಈ ಕೋರ್ಸ್‌ಗಳ ಪ್ರವೇಶಕ್ಕೆ ಡಿ.31ರವರೆಗೆ ಸಮಯ ನೀಡಿರುವ ಕಾರಣ ಹಂಚಿಕೆಯಾಗದೆ ಬಾಕಿ ಉಳಿದಿರುವ ಸೀಟುಗಳನ್ನು ಕೊನೆ ಸುತ್ತಿನಲ್ಲಿ ಹಂಚಿಕೆ ಮಾಡಲಾಗುತ್ತಿದೆ. ಸದ್ಯ ಯುಜಿ ಆಯುಷ್‌ನಲ್ಲಿ 436 ಹಾಗೂ ಪಿಜಿ ಆಯುಷ್‌ನಲ್ಲಿ 201 ಸೀಟುಗಳು ಹಂಚಿಕೆಗೆ ಲಭ್ಯ ಇವೆ. ಇನ್ನೂ ಕೆಲವರು ಕಾಲೇಜುಗಳಿಗೆ ವರದಿ ಮಾಡಿಕೊಳ್ಳದಿದ್ದ ಪಕ್ಷದಲ್ಲಿ ಅಂತಹವರ ಸೀಟುಗಳನ್ನು ಕೂಡ ಹಂಚಿಕೆಗೆ ಪರಿಗಣಿಸಲಾಗುತ್ತದೆ ಎಂದು ಅವರು ಮಾಹಿತಿ ನೀಡಿದ್ದಾರೆ.

**ವೇಳಾಪಟ್ಟಿ:** ಕೋರ್ಸ್ ಶುಲ್ಕ ಮುಂಗಡ ಪಾವತಿಗೆ ಡಿ.23ರಿಂದ 26ರವರೆಗೆ ಅವಕಾಶ ನೀಡಲಾಗಿದೆ. ಶುಲ್ಕ ಪಾವತಿಸಿದವರು ಡಿ.24ರಿಂದ 26ರವರೆಗೆ ಆಯ್ಕೆ ದಾಖಲಿಸಬೇಕು. ಡಿ.26ರಂದು ಸಂಜೆ 6ಕ್ಕೆ ತಾತ್ಕಾಲಿಕ ಹಾಗೂ ಡಿ.27ಕ್ಕೆ ಅಂತಿಮ ಫಲಿತಾಂಶ ಪ್ರಕಟಿಸಲಾಗುತ್ತದೆ. ಡಿ.27ರಿಂದ 29ರವರೆಗೆ ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಂಡು, ಡಿ.30ರೊಳಗೆ ಕಾಲೇಜುಗಳಿಗೆ ವರದಿ ಮಾಡಿಕೊಳ್ಳಬೇಕು ಎಂದು ಅವರು ತಿಳಿಸಿದ್ದಾರೆ. ಹೆಚ್ಚಿನ ವಿವರಗಳಿಗೆ ವೆಬ್‌ಸೈಟ್‌ಗೆ ಭೇಟಿ ನೀಡುವಂತೆ ಅವರು ಕೋರಿದ್ದಾರೆ.

## ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ಶ್ರೀ. ಎಸ್.ಮೋಹನ್ ಕುಮಾರ್ ಬಿನ್ ವಿ. ಶ್ರೀನಿವಾಸ ರವರ ಹಾಲೀ ಸ್ವಾಧೀನಾನುಭವದಲ್ಲಿರುವ ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಜಯಪುರ ಹೋಬಳಿ, ಕೀರ್ಗಳ್ಳಿ ಗ್ರಾಮದಲ್ಲಿ ನಿರ್ಮಿಸಿರುವ 'ಚಾಮುಂಡಿ ಸೂರು ನಗರ' ವಸತಿ ಬಡಾವಣೆಯಲ್ಲಿ ನಿವೇಶನ ಸಂಖ್ಯೆ 32, 33 ಮತ್ತು 34 ರ ಮೂಲ ಶುದ್ಧ ಕ್ರಯ ಪತ್ರ, ಖಾತ ಪತ್ರ ಮತ್ತು ಕಂದಾಯ ಪಾವತಿಸಿದ ರಶೀದಿಗಳು ದಿನಾಂಕ 29–08–2024 ರಂದು ಕಳೆದು ಹೋಗಿರುತ್ತದೆ. ಸದರಿ ದಾಖಲಾತಿಗಳ ವಿವರ ಕೆಳಕಂಡಂತಿದೆ.

| ಕ್ರಮ ಸಂಖ್ಯೆ | ನಿವೇಶನ ಸಂಖ್ಯೆ | ದಾಖಲಾತಿ ಸಂಖ್ಯೆ | ನೋಂದಣಿ ದಿನಾಂಕ | ಖಾತೆ ನಂ. |
|---|---|---|---|---|
| 1 | 32 | Book-1, MYW-1-07805-2015-16, CD No.MYWD57 | 21-11-2015 | 3465/15-16 |
| 2 | 33 | Book-1, MYW-1-07808-2015-16, CD No.MYWD57 | 21-11-2015 | 3466/15-16 |
| 3 | 34 | Book-1, MYW-1-07850-2015-16, CD No.MYWD57 | 23-11-2015 | 3464/15-16 |

ಸದರಿ ಮೇಲಿನ ದಾಖಲಾತಿಗಳು ಯಾರಿಗಾದರೂ ಸಿಕ್ಕಿದಲ್ಲಿ ಈ ದೂರವಾಣಿ ಸಂಖ್ಯೆ **9686666771** ಗೆ ಸಂಪರ್ಕಿಸಬೇಕಾಗಿ ಕೋರಿಕೊಳ್ಳುತ್ತೇನೆ.

ದಿನಾಂಕ: 21.12.2024, ಸ್ಥಳ: ಮೈಸೂರು

Sd/- RAVI KIRAN. S, B.Sc., LL.B.
Advocate, Mysuru-570 005.



ಮಾನ್ಯ ಗೌರವಾನ್ವಿತ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಸಿ.ಜೆ.ಎಂ. (ಹಿರಿಯ ಶ್ರೇಣಿ) ನ್ಯಾಯಾಧೀಶರ ನ್ಯಾಯಾಲಯ ಮೈಸೂರು
ಓ.ಎಸ್.ನಂ. 1389/2023

ವಾದಿ:
ಶ್ರೀ. ಕೃಷ್ಣಪ್ಪ ವಿ.ಬಿ.
ಬಿನ್ ಪಿ. ಬಸವಯ್ಯ
ಸುಮಾರು ವಯಸ್ಸು 48 ವರ್ಷ
ವಾಸ, ವೈದ್ಯನಾಥಪುರ, ಕಸಬಾ ಹೋಬಳಿ
ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ
ವಿರುದ್ಧ
ಪ್ರತಿವಾದಿಗಳು: ಶಿವಣ್ಣ ಮತ್ತು ಇತರರು
6. ಶ್ರೀಮತಿ. ಮಂಚಮ್ಮ
ಸುಮಾರು ವಯಸ್ಸು 78 ವರ್ಷ
ವಾಸ ಮೆಲ್ಲಹಳ್ಳಿ ಗ್ರಾಮ
ವರುಣಾ ಹೋಬಳಿ, ಮೈಸೂರು ತಾಲ್ಲೂಕು,
ಮೈಸೂರು ಜಿಲ್ಲೆ
19. ಶ್ರೀಮತಿ ಸಿದ್ದಮ್ಮ ಉರುಫ್ ಪುಟ್ಟಸಿದ್ದರಾಮಮ್ಮ
ಸುಮಾರು ವಯಸ್ಸು 55 ವರ್ಷ
ವಾಸ ಯಾಂದಳ್ಳಿ ಗ್ರಾಮ
ವರುಣಾ ಹೋಬಳಿ, ಮೈಸೂರು ತಾಲ್ಲೂಕು,
ಮೈಸೂರು- 570010
21. ಶ್ರೀ. ಜಿ.ವಿ. ಬಾಲು ಬಿನ್ ವೆಂಕಟಪ್ಪ
ವಾಸ ಸಿ.ಹೆಚ್. 19, ಮಹೇಶ್ ಪ್ರಸಾದ್ ಕಾಂಪ್ಲೆಕ್ಸ್
ಎಂ.ಜಿ. ರಸ್ತೆ, ಚಾಮರಾಜ ಮೊಹಲ್ಲಾ, ಮೈಸೂರು.

ಸಾರ್ವಜನಿಕ ಪ್ರಕಟಣೆ

ವಾದಿ ಮಾನ್ಯ ನ್ಯಾಯಾಲಯದಲ್ಲಿ ಪ್ರಾರ್ಥಿಸಿಕೊಳ್ಳುವುದೇನೆಂದರೆ, ಪ್ರತಿವಾದಿಗಳ ವಿರುದ್ಧ ದಾವೆಯನ್ನು ತಂದಿದ್ದು ಸದರಿ ದಾವೆಯಲ್ಲಿ ಪ್ರತಿವಾದಿಗಳಾದ ನಂ. 06 ಶ್ರೀಮತಿ. ಮಂಚಮ್ಮ ಹಾಗೂ ನಂ. 19. ಶ್ರೀಮತಿ. ಸಿದ್ದಮ್ಮ ಉರುಫ್ ಪುಟ್ಟಸಿದ್ದರಾಮಮ್ಮ ನಂ. 21. ಶ್ರೀ ಜಿ.ವಿ ಬಾಲು ಇವರುಗಳು ನ್ಯಾಯಾಲಯದಿಂದ ಸಮನ್ಸ್ ತೆಗೆದುಕೊಳ್ಳದೆ ಹಾಗೂ ಆರ್.ಪಿ.ಎ.ಡಿ. ಮುಖಾಂತರ ಸಲ್ಲಿಸಿದರೂ ಸಹ ಸದರಿ ಆರ್‌ಪಿಎಡಿ ಜಾರಿಯಾಗದೆ ವಾಪಸ್ಸು ಆಗಿರುತ್ತದೆ. ಇವರುಗಳು ಮೇಲ್ಕಂಡ ವಿಳಾಸದಲ್ಲಿ ವಾಸವಾಗಿರುತ್ತಾರೆ. ಆದುದರಿಂದ ಅದಕ್ಕೆ ಸಂಬಂಧಿಸಿದಂತೆ ಮೈಸೂರು ಮಿತ್ರ ಬೆಳಗಿನ ದಿನ ಪತ್ರಿಕೆಗಳಿಗೆ ಪ್ರಕಟಿಸುತ್ತಿದ್ದು, ಸದರಿಯವರು ಮಾನ್ಯ ನ್ಯಾಯಾಲಯದಲ್ಲಿ ದಿನಾಂಕ 18/2/25 ರಂದು 11.00 ಗಂಟೆಗೆ ಹಾಜರಾಗತಕ್ಕದ್ದು ಅಥವಾ ನಿಮ್ಮ ವಕೀಲರ ಮುಖಾಂತರ ಹಾಜರಾಗತಕ್ಕದ್ದು, ತಪ್ಪಿದಲ್ಲಿ ಮಾನ್ಯ ನ್ಯಾಯಾಲಯ ನಿಮ್ಮ ವಿರುದ್ಧ ಏಕಪಕ್ಷೀಯ ಆದೇಶವನ್ನು ಮಾಡುತ್ತದೆ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ತಾಲ್ಲೂಕು, ವರುಣ ಹೋಬಳಿ, ಯಾಂದಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ.38 ರಲ್ಲಿರುವ ವಿಸ್ತೀರ್ಣ 3 ಎಕರೆ 05 ಗುಂಟೆ ಜಮೀನನ್ನು ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ, ಮೈಸೂರುರವರಿಂದ ವಸತಿ ಉದ್ದೇಶಕ್ಕಾಗಿ ಅನ್ಯಕ್ರಾಂತ ಮಂಜೂರಾತಿ ಪಡೆದಿರುವ ಪೂರ್ತಾ ಸ್ವತ್ತಿನ ಪೈಕಿ 100 X 150 ಅಡಿಗಳುಳ್ಳ ಸ್ವತ್ತಿಗೆ ಚಕ್ಕಬಂದಿ:-

ಪೂರ್ವಕ್ಕೆ : ರಸ್ತೆ
ಪಶ್ಚಿಮಕ್ಕೆ ಸರ್ವೆ ನಂ.38ರ ನನ್ನ ಬಾಬ್ತು ಉಳಿಕೆ ಸ್ವತ್ತು
ಉತ್ತರಕ್ಕೆ :ಸರ್ವೆನಂ.33 ವೆಂಕಟನಾಯಕರವರ ಸ್ವತ್ತು
ದಕ್ಷಿಣಕ್ಕೆ :ನಾನು ತಿರುಗಾಡಲು ಬಿಟ್ಟಿರುವ 40ಅಡಿ ರಸ್ತೆ

ವಾದಿ ಪರ ವಕೀಲರು
ಮೋಹನ್‌ರಾಜು ಎಸ್. ಪಿ.
ಕೆ.ಎ.ಆರ್. 213/2005 ವಕೀಲರು
ನಂ. 2824, ಲಕ್ಷ್ಮೀ ವೆಂಕಟೇಶ್ವರ ನಿಲಯ,
1ನೇ ಮಹಡಿ, 1ನೇ 'ಎ' ಮುಖ್ಯರಸ್ತೆ,
8ನೇ ಕ್ರಾಸ್, ಜಯನಗರ, ಮೈಸೂರು- 570014



*In Loving Memory of*



**Dr. C. RAJAN** M.D. (Medi)

Former Professor of Medicine,
K.R. Hospital, Mysore Medical College & RI

Birth 13-02-1952 Death 11-12-2024

We miss you every moment in our life, your presence continues to surround us, in our heart, you are always there,
We will be gathering to share our memories,
followed by a lunch served in his honor,
on Sunday, 22nd December 2024 at 09:00 AM onwards.

Address

# 1786, 1st Cross, 10th Main, Vijayanagar 2nd Stage,
Near St. Joseph's Central School, Hinkal Post - 570017

*Your Loving Family*

Mrs. Shailaja Rajan. Mr. Rajan Balachander Mrs. Manjula Balachander & Family Members

## 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ

# ತಳ ಸಮುದಾಯದ ಮಕ್ಕಳಿಂದ ಮಾತ್ರ ಸರ್ಕಾರಿ ಶಾಲೆ ಉಳಿಯಲು ಸಾಧ್ಯ



ದಲಿತ ಸಾಹಿತ್ಯ ನೆಲೆಗಳು ಕುರಿತ ಚರ್ಚಾಗೋಷ್ಠಿಯಲ್ಲಿ ಕನ್ನಡ ಸಂವರ್ಧನೆಯಲ್ಲಿ ತಳ ಸಮುದಾಯಗಳ ಪಾತ್ರ ಕುರಿತು ಹಂಪಿ ವಿವಿ ಪ್ರಾಧ್ಯಾಪಕ ಚಲುವರಾಜು ವಿಚಾರ ಮಂಡಿಸಿದರು.

**ವಿಶ್ವ ಪ್ರಜ್ಞೆ ಬೆಳೆಯುವ ಕನ್ನಡ ಶಬ್ದ ಸಂಪತ್ತು ಇಂದಿಗೂ ಜೀವಂತವಾಗಿರುವುದು ದಲಿತ ಸಾಹಿತ್ಯ ಹಾಗೂ ತಳ ಸಮುದಾಯದಲ್ಲಿ ಮಾತ್ರ, ವಸ್ತು ಸಂಸ್ಕೃತಿ ಜಾರುತ್ತಿರುವುದರಿಂದ ಮೂಲ ಕನ್ನಡ ಭಾಷೆಯ ಪದಗಳು ನಶಿಸುತ್ತಿವೆ. –ಚಲುವರಾಜು**

**ಮಂಡ್ಯ(ಸಮನಾಂತರ ವೇದಿಕೆ–1, ವಿನಯ್ ಕಾರೇಕುರ):** ಸರ್ಕಾರಿ ಶಾಲೆಯಲ್ಲಿ ಓದುವ ಮೂಲಕ ತಳ ಸಮುದಾಯದ ಮಕ್ಕಳು ತಮ್ಮ ಹೆಗಲ ಮೇಲೆ ಕನ್ನಡ ಭಾಷೆ ಹೊತ್ತು ಸಾಗುತ್ತಿರುವುದರಿಂದಲೇ ಕನ್ನಡ ಶಾಲೆಗಳು ಉಳಿದಿವೆ ಎಂದು ಹಂಪಿ ಕನ್ನಡ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕ ಚಲುವರಾಜು ಹೇಳಿದರು.

87ನೇ ಕನ್ನಡ ಸಾಹಿತ್ಯ ಸಮ್ಮೇಳನದ ಎರಡನೇ ದಿನವಾದ ಶನಿವಾರ ಸಮನಾಂತರ ವೇದಿಕೆ 1ರಲ್ಲಿ ನಡೆದ ದಲಿತ ಸಾಹಿತ್ಯ ನೆಲೆಗಳು ಕುರಿತ ಚರ್ಚಾಗೋಷ್ಠಿಯಲ್ಲಿ ಕನ್ನಡ ಸಂವರ್ಧನೆಯಲ್ಲಿ ತಳ ಸಮುದಾಯಗಳ ಪಾತ್ರ ವಿಚಾರ ಮಂಡಿಸಿದರು.

ಡಿಜಿಟಲ್ ಜಗತ್ತಿನಿಂದ ಶಿಲಾ ಜಗತ್ತಿನವರೆಗೂ ನಮ್ಮ ಭಾಷೆ, ಸಂಸ್ಕೃತಿಯನ್ನು ತಳ ಸಮುದಾಯದವರೇ ಕಟ್ಟಿಕೊಂಡು ಬಂದಿದ್ದಾರೆ. ಇದರಿಂದ ನಮಗೆ ಪ್ರತ್ಯೇಕ ಬಂಡಾಯ ಸಾಹಿತ್ಯ ಜನ್ಮಕ್ಕೆ ಕಾರಣವಾಯಿತು. ಇದುವರೆಗೂ ಸ್ಪಷ್ಟ ಹಾಗೂ ಸ್ವಚ್ಛ ಭಾಷೆಗೆ ತಳ ಸಮುದಾಯದ ಕೊಡುಗೆ ಅಪಾರ ಎಂದು ಪ್ರತಿಪಾದಿಸಿದರು.

ತಳಸಮುದಾಯದವರು ಮಹದೇಶ್ವರ, ಮಂಟೇಸ್ವಾಮಿ ಮೇಲೆ ಹಾಡುವ ಪದಗಳು ಪ್ರತಿ ಮನೆಯಲ್ಲಿಯೂ ಸಿಗುತ್ತದೆ. ಆದರೆ ಕುಮಾರವ್ಯಾಸ ಅವರ ಸಾಹಿತ್ಯವನ್ನು ಎಲ್ಲರ ಮನೆಯಲ್ಲಿ ಕಾಣಲು ಸಾಧ್ಯವಿಲ್ಲ. ಆದರೆ ಇಲ್ಲಿ ಕುಮಾರವ್ಯಾಸರನ್ನು ನಾನು ಹೀಯಾಳಿಸುತ್ತಿಲ್ಲ. ಬದಲಿಗೆ ತಳ ಸಮುದಾಯದ ಮಾತುಗಳನ್ನು ಹಾಗೂ ಅವರ ಭಾಷೆಯನ್ನು ಇಲ್ಲಿ ವಿವರಿಸುತ್ತಿರುವೆ ಎಂದರು.

ದಲಿತ ಸಾಹಿತ್ಯ ಚಳವಳಿ ಮತ್ತು ಮಹಿಳೆ ಕುರಿತು ಮಂಡಿಸಿದ ಯಾದಗಿರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕಿ ಜಯದೇವಿ ಗಾಯಕವಾಡ ಮಾತನಾಡಿ, ಕ್ರಿಶ.6ರಲ್ಲಿ ಮಹಿಳೆಯರಿಗೆ ಸಮಾನ ಅವಕಾಶ ನೀಡಿದ ಕೀರ್ತಿ ನಮ್ಮ ಗೌತಮ ಬುದ್ಧರಿಗೆ ಸಲ್ಲುತ್ತದೆ. ಆನಂತರ ಅಲ್ಲಮಪ್ರಭು ಹಾಗೂ ಬಸವಣ್ಣನವರು ಸಾಹಿತ್ಯ ಕ್ಷೇತ್ರದಲ್ಲಿ ಅನುಭವ ಮಂಟಪದಲ್ಲಿ 33 ವಚನ ಕಾರ್ತಿಯರಿಗೆ ಅವಕಾಶ ನೀಡುತ್ತಾರೆ. ಇವರಲ್ಲಿ ತಳ ಸಮುದಾಯದವರು ಹಾಗೂ ಕೆಳವರ್ಗದ ವಚನಕಾರ್ತಿಯರೇ ಹೆಚ್ಚಿರುತ್ತಾರೆ ಎಂದರು.

ಪ್ರಸ್ತುತ ಅಂಬೇಡ್ಕರ್ ಅವರು ದಲಿತ ಚಳವಳಿಗೆ ಪ್ರೇರಣೆಯಾಗಿ ನಿಲ್ಲುತ್ತಾರೆ. ಇಂದು ಮಹಿಳೆಯರು ಸಮನಾಗಿ ಬಾಳ್ವೆ ನಡೆಸಲು ಅವಕಾಶ ಮಾಡಿಕೊಟ್ಟ ಪುಣ್ಯಾತ್ಮ ಎಂದರೆ ತಪ್ಪಾಗಲಾರದು. ಜೊತೆಗೆ ದಲಿತ ಸಾಹಿತ್ಯದ ಸಿಂಹಪಾಲು ಅಂಬೇಡ್ಕರ್ ಅವರಿಗೆ ಸಲ್ಲಬೇಕು ಎಂದರು.

ದಲಿತ ಸಂಘರ್ಷ ಸಮಿತಿ ಹುಟ್ಟಿ 50 ವರ್ಷಗಳು ಕಳೆದಿವೆ. ಸಿದ್ದಲಿಂಗಯ್ಯ ಅವರ ನೆಲಮಾದಿಗ ಹಾಡು ರಚನೆಯಾಗಿ 50 ವರ್ಷ ಕಳೆದಿವೆ. ನಂತರ ಇಂತಹ ವೇದಿಕೆಯಲ್ಲಿ ದಲಿತ ಸಾಹಿತ್ಯ ಚಳವಳಿ ಬಗ್ಗೆ ಅವಕಾಶ ನೀಡಿ ಚರ್ಚೆ ನಡೆದು ಆತ್ಮಾವಲೋಕಕ್ಕೆ ನಾಂದಿಯಾಗಿರುವ ವೇದಿಕೆ ಎನ್ನಬಹುದು ಎಂದು ಶ್ಲಾಘಿಸಿದರು.

ಅಧ್ಯಕ್ಷತೆ ವಹಿಸಿದ್ದ ಸಾಹಿತಿ ಮೂಡ್ನಾಕೂಡು ಚಿನ್ನಸ್ವಾಮಿ ಮಾತನಾಡಿ, ದಲಿತರ ಸಮಸ್ಯೆಗಳನ್ನು ಅರಿತು ಇದಕ್ಕೆ ದನಿಯಾಗಲು ಈ ದಲಿತ ಸಾಹಿತ್ಯ ಚಳವಳಿ ಹುಟ್ಟಿಕೊಂಡಿತು. ದಲಿತ ಚಳವಳಿಯ ಹಾಡುಗಳನ್ನು ಬರೆದದ್ದು ಕೇವಲ ಮನೆಯಲ್ಲಿ ಕುಳಿತು ಬರೆದ ಪದಗಳಲ್ಲ, ಅವು ನೋವಿನ ಹಾಗೂ ಕಿಚ್ಚಿನ ರೂಪದಲ್ಲಿ ಹುಟ್ಟಿಕೊಂಡ ಪದಗಳಾಗಿವೆ. ತಳಸಮು ದಾಯದವರು ಬರೆದ ಸಾಹಿತ್ಯಕ್ಕೆ ಅದು ಪರಿಪೂರ್ಣತೆ ಕಂಡುಕೊಳ್ಳಲು ಸಾಧ್ಯವಾಯಿತು ಎಂದರು.

ದಲಿತ ಸಂಘಟನೆಗಳ ಅಸ್ಮಿತೆ ಸಾಹಿತಿ ಎಂ.ವೆಂಕಟಸ್ವಾಮಿ ವಿಷಯ ಮಂಡಿಸಿದರು. ಗೋಷ್ಠಿಯನ್ನು ನಿರ್ವಹಣೆ ಸು.ಜಗದೀಶ್, ಸ್ವಾಗತ ಹಾಸಿಂಪೀರ್ ವಾಲೀಕಾರ್, ನಿರೂಪಣೆ ಬಸವರಾಜ ಕಲ್ಲುಸಕ್ಕರೆ, ವಂದನಾರ್ಪಣೆ ಸಿ.ಆರ್.ಚಂದ್ರಶೇಖರ ಮಾಡಿದರು.

## ಹರಿದು ಬಂದ ಜನಸಾಗರ...



ಮಂಡ್ಯದಲ್ಲಿ ನಡೆಯುತ್ತಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಜನಸಾಗರವೇ ಹರಿದು ಬರುತ್ತಿದೆ. 2ನೇ ದಿನವಾದ ಶನಿವಾರವೂ ಕೂಡ ಭಾರೀ ಸಂಖ್ಯೆಯಲ್ಲಿ ಪಾಲ್ಗೊಂಡಿರುವ ಕನ್ನಡಾಭಿಮಾನಿಗಳು.

# ಮಕ್ಕಳ ವ್ಯಕ್ತಿತ್ವ ರೂಪಿಸುವಲ್ಲಿ ಸಾಹಿತ್ಯದ ಪಾತ್ರ ಪ್ರಮುಖ

### ಮಕ್ಕಳ ಸಾಹಿತಿಗಳ ಅಭಿಮತ

**ಮಂಡ್ಯ(ಸಮನಾಂತರ ವೇದಿಕೆ–2, ಮೋಹನ್‌ರಾಜ್):** ಮಕ್ಕಳ ವ್ಯಕ್ತಿತ್ವ ರೂಪಿಸುವಲ್ಲಿ ಪೋಷಕರು, ಗುರುಗಳು–ಶಾಲೆ ಹಾಗೂ ಸಮಾಜ ಪ್ರಮುಖ ಪಾತ್ರ ವಹಿಸುತ್ತವೆ ಎಂದು ಮಕ್ಕಳ ಸಾಹಿತಿ ಆರ್.ಡಿ.ರವೀಂದ್ರ ಪ್ರತಿಪಾದಿಸಿದ್ದಾರೆ.

ಅಖಿಲ ಭಾರತ 87ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸಂಚಿ ಹೊನ್ನಮ್ಮ ಮತ್ತು ಕಾಂದಬರಿ ಸಾಮ್ರಾಜ್ಞಿ ತ್ರಿವೇಣಿ ವೇದಿಕೆಯಲ್ಲಿ ಶನಿವಾರ ನಡೆದ 'ಮಕ್ಕಳ ವ್ಯಕ್ತಿತ್ವ ರೂಪಿಸುವಲ್ಲಿ ಸಾಹಿತ್ಯದ ಪಾತ್ರ' ಕುರಿತು ಮಾತನಾಡಿದ ಅವರು, ಮಕ್ಕಳಿಗೆ ಅಕ್ಷರ ಜ್ಞಾನದ ಜೊತೆಗೆ ಕತೆ, ಕಾದಂಬರಿ ಬಗ್ಗೆ ಮಾಹಿತಿ ನೀಡುವಂತಾಗಬೇಕು ಎಂದು ಸಲಹೆ ನೀಡಿದರು.

ಮಕ್ಕಳಿಗೆ ಹಿಂದಿನ ಕಾಲದಲ್ಲಿ ಅಜ್ಜಿಯಂದಿರು ಕಥೆ ಹೇಳುವ ಮೂಲಕ ಕಲ್ಪನಾಲೋಕಕ್ಕೆ ಕೊಂಡೊಯ್ಯುತ್ತಿದ್ದರು. ಇದರಿಂದ ಮಕ್ಕಳಲ್ಲಿ ಕಲಿಕಾ ಆಸಕ್ತಿ ಹೆಚ್ಚಾಗುತ್ತಿತ್ತು. ಮಕ್ಕಳನ್ನು ತೊಡೆಯ ಮೇಲೆ ಕೂರಿಸಿಕೊಂಡು ಕಥೆ, ಕಾದಂಬರಿ ಹೇಳುವುದರಿಂದ ಒಂದು ರೀತಿ ಅಂತಃಕರಣ ಹೆಚ್ಚಾಗಿ ಮಕ್ಕಳಲ್ಲಿ ಆಸಕ್ತಿ ವೃದ್ಧಿಸುತ್ತಿತ್ತು ಎಂದು ನುಡಿದರು.

ಮಕ್ಕಳಿಗೆ ಸತ್ಯ ಹರಿಶ್ಚಂದ್ರ, ಪೌರಾಣಿಕ, ಏಕಲವ್ಯ ಹಾಗೆಯೇ ಅಭಿಮನ್ಯು, ಶ್ರೀರಾಮ ಹೀಗೆ ಹಲವು ನಾಟಕ, ಕತೆ ಹೇಳುವುದರಿಂದ ಏಕಾಗ್ರತೆ ಹೆಚ್ಚಾಗುತ್ತದೆ. ಮಕ್ಕಳು 7 ವರ್ಷದವರೆಗೆ ಪೋಷಕರ ಜೊತೆ ಬೆರೆಯಬೇಕು. ತಂದೆ ತಾಯಂದಿರ ಶ್ರಮ ಮಕ್ಕಳಿಗೆ ಗೊತ್ತಾಗಬೇಕು ಎಂದು ವಿವರಿಸಿದರು.

ಮಕ್ಕಳಲ್ಲಿ ರೂಪಿಸಬೇಕಾದ ಕಲೆ, ಸಾಹಿತ್ಯ, ಹವ್ಯಾಸದ ಕುರಿತು ಮಾತನಾಡಿದ ಮಕ್ಕಳ ಸಾಹಿತಿ ಬಾಗೂರು ಮಾರ್ಕಾಂಡೇಯ ಮಾತನಾಡಿ, ಇತ್ತೀಚಿನ ದಿನಮಾನದಲ್ಲಿ ಮೊಬೈಲ್, ಕಂಪ್ಯೂಟರ್‌ನಲ್ಲಿನ ಆಕರ್ಷಕ ಗೇಮ್‌ಗಳ ನಡುವೆ ಕಲೆ ಸಾಹಿತ್ಯ ಕಡಿಮೆಯಾಗುತ್ತಿದೆ. ಮಕ್ಕಳ ಸಾಹಿತ್ಯಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡುವಂತಾಗಬೇಕು. ಮನೆಗಳಲ್ಲಿ ಗ್ರಂಥಾಲಯ ವಾತಾವರಣ ನಿರ್ಮಾಣ ಮಾಡಬೇಕು. ಪೋಷಕರು ಮನೆಯಲ್ಲಿ ಮೊಬೈಲ್ ನೋಡುವುದು ಬಿಡಬೇಕು. ಮಕ್ಕಳಿಗೆ ಸಾಹಿತ್ಯದ ಕಲೆ ಅಭಿರುಚಿ ಬೆಳೆಸಬೇಕು. ಮನೆಗೊಂದು ಗ್ರಂಥಾಲಯ ಇರುವುದರ ಜೊತೆಗೆ, ಹಿಂದೆ ಚಂದಮಾಮ ಬಾಲಮಿತ್ರದಂತಹ ನಿಯತಕಾಲಿಕೆಗಳನ್ನು ಓದುತ್ತಿದ್ದರು. ಇತ್ತೀಚಿನ ದಿನಗಳಲ್ಲಿ ದಿನಪತ್ರಿಕೆ ಓದುವವರ ಸಂಖ್ಯೆ ಕಡಿಮೆಯಾಗಿದೆ ಎಂದು ಅತೃಪ್ತಿ ವ್ಯಕ್ತಪಡಿಸಿದರು.

ಬೆಕ್ಕಿನ ಕಣ್ಣು ಇಲಿ ಮೇಲೆ ಇರುತ್ತದೆ. ಹಾಗೆಯೇ ಮಕ್ಕಳ ಸಾಹಿತ್ಯ ಸಾಗರದಲ್ಲಿ ಸ್ವಲ್ಪವಾದರೂ ಸಾಹಿತ್ಯ ಚಟುವಟಿಕೆಯ ಬಗ್ಗೆ ಬೆಳಕು ಚೆಲ್ಲುವವಂತಾಗಬೇಕು. ಮಕ್ಕಳಿಗೆ ಚಂದ್ರ, ಕಾಮನಬಿಲ್ಲು ಒಂದು ರೀತಿ ಸಂತಸ ನೀಡುತ್ತದೆ. ಆ ನಿಟ್ಟಿನಲ್ಲಿ ಬೆಳಕಿನೊಡನೆ ಮಕ್ಕಳು ಕನಸು ಕಾಣಬೇಕು ಎಂದು ವಿವರಿಸಿದರು.

ಹಿರಿಯ ಮಕ್ಕಳ ಸಾಹಿತಿ ಟಿ.ಎಸ್.ನಾಗರಾಜಶೆಟ್ಟಿ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಬಾಲ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿವೆ. 2020 ರಿಂದ 2023ರವರೆಗೆ ಬೆಂಗಳೂರಿನಲ್ಲಿ 1665 ಬಾಲಪರಾದ ಪ್ರಕರಣಗಳು ವರದಿಯಾಗಿದ್ದು, ರಾಜ್ಯದಲ್ಲಿ 9871 ಪ್ರಕರಣಗಳು ವರದಿಯಾಗಿದೆ. ಇದರಲ್ಲಿ 8041 ಬಾಲಕರು ಮತ್ತು 930 ಬಾಲಕಿಯರು ಇದ್ದಾರೆ ಕಳವಳ ವ್ಯಕ್ತಪಡಿಸಿದರು.

ಸಮಾಜದಲ್ಲಿ ಮಕ್ಕಳ ಸ್ನೇಹಿ ವಾತಾವರಣ ನಿರ್ಮಾಣ ಮಾಡಬೇಕು. ಮಕ್ಕಳಲ್ಲಿ ಸಮರ್ಥ ವ್ಯಕ್ತಿತ್ವ ರೂಪಿಸಲು ಮುಂದಾಗಬೇಕು. ಮಕ್ಕಳ ಸಾಹಿತ್ಯ ಕಲಿಸುವುದರಿಂದ ಭವಿಷ್ಯದ ಆಶಾದಾಯದ ಬೆಳವಣಿಗೆಗೆ ಸಹಕಾರಿ ಆಗಲಿದೆ ಎಂದು ಯುನಿಸೆಫ್ ಅಭಿಪ್ರಾಯ ಪಟ್ಟಿದ್ದು, ಆ ದಿಸೆಯಲ್ಲಿ ಮಕ್ಕಳಿಗೆ ಜೀವನಮೌಲ್ಯ ರೂಪಿಸಬೇಕು ಎಂದರು.

ಹಿರಿಯ ಮಕ್ಕಳ ಸಾಹಿತಿ ಡಿ.ಎನ್‌ಅಕ್ಕಿ ಮಾತನಾಡಿದರು. ಮಂಜು ನಿರ್ವಹಿಸಿದರು. ಶಿವನಹಳ್ಳಿ ಶಿವಲಿಂಗಯ್ಯ ನಿರೂಪಿಸಿದರು, ಸಿದ್ದಪ್ಪ ಸಂಗಪ್ಪ ಮೇಟಿ ಸ್ವಾಗತಿಸಿದರು. ಎಚ್.ರಂಗಸ್ವಾಮಿ ವಂದಿಸಿದರು.

# ಕಲೆಗಾಗಿ ಮನೆ ಮಠ ಮಾರಿಕೊಂಡಿರುವ ಕಲಾವಿದರಿದ್ದಾರೆ



ಗೋಷ್ಠಿಯಲ್ಲಿ ಮಾತನಾಡುತ್ತಿರುವ ಗೀತರಚನಕಾರ ನಾಗೇಂದ್ರ ಪ್ರಸಾದ್.

**ನಾಟಕ ಡ್ರಾಮಾ ಸೀನರಿ ಎಂಬ ವಿಷಯ ನೋಡಿದಾಗ ಇಂದಿರಾ ಡ್ರಾಮಾ ಸೀನರಿ, ಹಳ್ಳಿಕೇಶ್ವರ ಮಾರ್ಕೆಟ್ ಸೀನರಿ, ಕೊಡಿಯಾಲ ಡ್ರಾಮಾ ಸೀನರಿ ಸೇರಿದಂತೆ ಹಲವು ಸೀನರಿಗೆ ಮಂಡ್ಯ ಡ್ರಾಮ ಸೀನರಿ ಎಂದರೆ ಪಕ್ಕದ ತಮಿಳುನಾಡಿನಲ್ಲಿಯೂ ಬೇಡಿಕೆ ಪಡೆದು ಮೆಚ್ಚುಗೆಗೆ ಪಾತ್ರವಾಗಿತ್ತು. ಜಿಲ್ಲೆಯ ಹೆಸರಾಂತ ಕೆ.ವಿ.ಶಂಕರಗೌಡ ಅವರು 'ಪಾದುಕಾ ಕಿರೀಟ' ನಾಟಕ ರಚಿಸಿ ರಾಜ್ಯದ ಮೂಲೆಮೂಲೆಯಲ್ಲಿಯೂ ಪ್ರದರ್ಶನ ಮಾಡಿಸಿ, ಅದರಿಂದ ಬಂದ ಹಣದಿಂದ ಶಿಕ್ಷಣ ಸಂಸ್ಥೆ ಕಟ್ಟಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಇದು ಎಲ್ಲರಿಗೂ ಮಾರ್ಗದರ್ಶನವಾಗಿದೆ. –ನಾಗೇಂದ್ರ ಪ್ರಸಾದ್**

**ಮಂಡ್ಯ(ಸಮನಾಂತರ ವೇದಿಕೆ 1, ವಿನಯ್ ಕಾರೇಕುರ):** ಕಲೆಗಾಗಿ ಕಲಾವಿದರು ಮನೆ ಮಠ ಮಾರಿಕೊಂಡಿರುವ ಅದೆಷ್ಟೋ ಉದಾಹರಣೆಗಳು ನಮ್ಮ ಮುಂದಿವೆ ಎಂದು ಗೀತ ರಚನೆಕಾರ ವಿ.ನಾಗೇಂದ್ರ ಪ್ರಸಾದ್ ವಿಷಾದ ವ್ಯಕ್ತಪಡಿಸಿದರು.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ರಾಜಮಾತೆ ಕೆಂಪನಂಜಮ್ಮಣಿ ಮತ್ತು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಧಾನ ವೇದಿಕೆಯ ಗೋಷ್ಠಿ–6ರಲ್ಲಿ ಶನಿವಾರ ರಂಗಭೂಮಿ, ಚಲನಚಿತ್ರ ಮತ್ತು ಕಿರುತೆರೆ ಕುರಿತು ವಿಷಯ ಮಂಡಿಸಿದರು.

ರಂಗಭೂಮಿ ಕಟ್ಟಿ ಬೆಳೆಸಿದ ಮಳವಳ್ಳಿ ಸುಂದರಮ್ಮ ಅವರು ರಾಜ್ಯಾದ್ಯಂತ ನಾಟಕ ಕಂಪನಿ ಮೂಲಕ ಪ್ರದರ್ಶನಗಳನ್ನು ನೀಡಿ ಪೌರಾಣಿಕಕ್ಕೆ ಮಹತ್ವ ನೀಡಿದರು. ಎಚ್‌ಎಲ್‌ಎನ್ ಸಿಂಹ ಅವರು ರಾಜ್‌ಕುಮಾರ್ ಅವರಿಗೆ ಬೇಡರಕಣ್ಣಪ್ಪ ಚಲನ ಚಿತ್ರದ ಮೂಲಕ ಅವಕಾಶ ನೀಡಿದ ಮೊದಲ ಕೀರ್ತಿ ಈ ಜಿಲ್ಲೆಯ ಮಳವಳ್ಳಿಗೆ ಸಲ್ಲುತ್ತದೆ ಎಂದು ಸ್ಮರಿಸಿದರು.

ಇಷ್ಟೇ ಅಲ್ಲದೆ ಹೆಸರಾಂತ ನಟ ದಿವಂಗತ ವಿಷ್ಣುವರ್ಧನ್ ಅವರು ಮಂಡ್ಯ ಜಿಲ್ಲೆಯ ಹಲ್ಲೆಗೆರೆಯವರಾಗಿದ್ದಾರೆ ಎಂಬುದು ಎಷ್ಟೋ ಜನರಿಗೆ ತಿಳಿದಿಲ್ಲ. ಜೊತೆಗೆ ಐದಾರು ದಶಕಗಳ ಕಾಲ ಸಿನಿಮಾ ಕ್ಷೇತ್ರದಲ್ಲಿ ದುಡಿದ ಮಂಡ್ಯದ ಗಂಡು ಎಂಬ ಬಿರುದು ಪಡೆದ ನಮ್ಮ ರೆಬೆಲ್‌ಸ್ಟಾರ್ ಅಂಬರೀಶ್ ಅವರು ಸಹ ಈ ಜಿಲ್ಲೆಯವರಾಗಿದ್ದಾರೆ. ಮೋಹಕ ನಟಿ ರಮ್ಯಾ, ನೀನಾಸಂ ಸತೀಶ್, ಜೋಗಿ ಪ್ರೇಮ್ ಸೇರಿದಂತೆ ಒಟ್ಟಿನಲ್ಲಿ ರಂಗಭೂಮಿಯಿಂದ ಹಿಡಿದು ಸಿನಿಮಾ, ಸಾಂಸ್ಕೃತಿಕ ಕಲಾವೈಭವಕ್ಕೆ ಮಂಡ್ಯ ಜಿಲ್ಲೆ ಸಾಕ್ಷಿಯಾಗಿದೆ ಎಂದರು.

ಪ್ರಸ್ತುತ ಕರ್ನಾಟಕ ಸಂಘದ ಜಯಪ್ರಕಾಶಗೌಡ ಅವರು ಮೂಡಲಪಾಯ ಯಕ್ಷಗಾನಕ್ಕೆ ಪ್ರೋತ್ಸಾಹ ನೀಡುವುದು ಸೇರಿದಂತೆ ಹಲವು ರಂಗಭೂಮಿ ಕಲಾವಿದರನ್ನು ಬೆಳೆಸುವ ಮೂಲಕ ಕಲೆ, ಸಾಹಿತ್ಯ, ಸಾಂಸ್ಕೃತಿಕ ಕ್ಷೇತ್ರಕ್ಕೆ ತನ್ನದೇ ಕೊಡುಗೆ ನೀಡುತ್ತಿದ್ದಾರೆ. ಜೊತೆಯಲ್ಲಿ ಮುದ್ದೇಗೌಡರು ನಿಂತಿದ್ದಾರೆ. ಇನ್ನೂ ಕಿರುತೆರೆ ಮತ್ತು ಸಿನಿಮಾ ಕ್ಷೇತ್ರದಲ್ಲಿ ಮಂಡ್ಯ ರಮೇಶ್ ಅವರು ಏಕಕಾಲದಲ್ಲಿ ದುಡಿಯುತ್ತಿದ್ದಾರೆ. ಎ.ಪಿ. ಅರ್ಜುನ್, ಅಕ್ಷತಾ ಪಾಂಡವಪುರ ಹೀಗೆ ಹಲವು ಹೆಸರುಗಳನ್ನು ಹೇಳಲು ಸಾಧ್ಯವಾಗುತ್ತಿಲ್ಲ. ಏಕೆಂದರೆ ಮಂಡ್ಯದಲ್ಲಿ ಅಂತಹ ನಟ, ನಟಿಯರನ್ನು ಈ ಮಣ್ಣು ಕೊಡುಗೆ ನೀಡಿದೆ ಎಂದು ವಿವರಿಸಿದರು.


ನೈರುತ್ಯ ಮಾರುತದ ಮೂರ್ನಾಲ್ಕು ತಿಂಗಳ ಅವಧಿಯಲ್ಲಿ ಬಿದ್ದ ಮಳೆಯನ್ನು ಆಧರಿಸಿ ಬದುಕಬೇಕಾದ ನಮ್ಮ ಪೂರ್ವಿಕರು ವರ್ಷದ ಉಳಿದ ದಿನಗಳಿಗೆ ಜೀವನಾವಶ್ಯಕವಾದ ನೀರಿಗಾಗಿ ಕೆರೆಕಟ್ಟೆಗಳನ್ನು ನಿರ್ಮಿಸಿದರು. ಮಳೆಗಾಲದಲ್ಲಿ ಬಿದ್ದ ಬಹುಪಾಲು ನೀರು ತಕ್ಷಣ ನದಿಗಳ ಮೂಲಕ ಸಮುದ್ರ ಸೇರುತ್ತಿದ್ದರಿಂದ ಮಳೆ ನೀರನ್ನು ಸಮರ್ಥವಾಗಿ ಬಳಸಲು ಕೆರೆಕಟ್ಟೆಗಳು ಉಗಮವಾದವು. ನೀರು ಇದ್ದ ಕಡೆ ಹಲವು ಜೀವಿಗಳು ಬದುಕುತ್ತವೆ. ಅದರ ಮೌಲ್ಯವನ್ನು ಎಲ್ಲರೂ ಅರಿತುಕೊಳ್ಳಬೇಕು ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಮುಚ್ಚಿಹೋದ ಕೆರೆಗಳಿಗೆ ಜೀವ ಕೊಡುವ ನಿಟ್ಟಿನಲ್ಲಿ ರಾಜಕಾರಣಿಗಳು ನಿಸ್ವಾರ್ಥದಿಂದ ಸೇವೆ ಮಾಡಬೇಕು. ಕೆರೆಗಳು ಗ್ರಾಮೀಣ ಭಾಗದ ಜೀವಾಳವಾಗಿವೆ. ಅವುಗಳ ಸಂರಕ್ಷಣೆ ತುರ್ತಾಗಿ ಆಗಬೇಕು. ಕೆರೆಗಳ ಮಹತ್ವ ತಿಳಿದುಕೊಳ್ಳದೇ ಅದರ ವಿನಾಶಕ್ಕೆ, ನಾವೇ ಕಾರಣರಾಗುತ್ತಿದ್ದೇವೆ. ಕೃಷಿ ಹೊಂಡಗಳನ್ನು ನಿರ್ಮಾಣ ಮಾಡಲಾಗಿದೆ. ಆದರೆ ಇಲ್ಲಿ ಸಫಲತೆಗಿಂತ ವಿಫಲತೆಯೇ ಹೆಚ್ಚಿದೆ ಎಂದರು.

ಜನಪದ ವಿಷಯ ಮಂಡಿಸಿದ ಪ್ರಾಧ್ಯಾಪಕಿ ಪ್ರೊ.ಕೆಂಪಮ್ಮ ಅವರು, ಮಂಡ್ಯ ಜಿಲ್ಲೆಯಲ್ಲಿ ಕನ್ನಡ ಸಾಹಿತ್ಯದ 27 ಪ್ರಕಾರಗಳು, ಜನಪದ ಕ್ಷೇತ್ರದ 21 ಪ್ರಕಾರಗಳು ಸೇರಿದಂತೆ ಒಟ್ಟು 71 ಪ್ರಕಾರಗಳು ಸಿಕ್ಕಿವೆ. ನಮ್ಮ 7 ತಾಲೂಕುಗಳಲ್ಲಿಯೂ ಒಂದಲ್ಲ ಒಂದು ಪ್ರಥಮಗಳಿರುವುದನ್ನು ನಾವು ಕಾಣಬಹುದು. ಮದ್ದೂರು ರಾಮಮೂರ್ತಿ ಅವರು ಕೆಂಪು, ಹಳದಿ ಬಣ್ಣವನ್ನು ನಾಡಧ್ವಜದ ಬಾವುಟ ನೀಡಿದರು. ಜೊತೆಗೆ ಮೊಟ್ಟಮೊದಲ ಬಾರಿಗೆ ಕನ್ನಡ ರಾಜ್ಯೋತ್ಸವ ಆಚರಿಸಿದ ಕೀರ್ತಿ ಮದ್ದೂರಿನ ರಾಮಮೂರ್ತಿ ಅವರಿಗೆ ಸಲ್ಲುತ್ತದೆ ಎಂದರು.

ಅಧ್ಯಕ್ಷತೆ ವಹಿಸಿ ಖ್ಯಾತ ವಾಗ್ಮಿ ಪ್ರೊ.ಎಂ. ಕೃಷ್ಣೇಗೌಡ ಮಾತನಾಡಿ, ಈ ಬಾರಿಯ ಕನ್ನಡ ಸಾಹಿತ್ಯ ಸಮ್ಮೇಳನ ಸಂಪೂರ್ಣ ಅರ್ಥಪೂರ್ಣವಾಗಿ ನಡೆದಿದೆ. ಈ ಹಿಂದೆ ನಡೆದ ಸಾಹಿತ್ಯ ಸಮ್ಮೇಳನಗಳಿಗೆ ಮಂಡ್ಯ ಕನ್ನಡ ಸಾಹಿತ್ಯ ಸಮ್ಮೇಳನ ಮಾದರಿಯಾಗಿ ನಿಲ್ಲುತ್ತದೆ. ನಾನು ಅಧ್ಯಕ್ಷತೆ ವಹಿಸಿರುವುದು ಹೆಮ್ಮೆ ಎನಿಸಿದೆ ಎಂದು ಶ್ಲಾಘಿಸಿದರು.

# ಪುಸ್ತಕ ಮೇಳದಲ್ಲಿ ಕಡಿಮೆಯಾದ ಪುಸ್ತಕ ಸಂಗ್ರಹಿಸುವವರ ಸಂಖ್ಯೆ



ಪುಸ್ತಕ ಮೇಳಕ್ಕೆ ಜನರು ಬರುತ್ತಿದ್ದಾರೆ ಆದರೆ ಕೊಳ್ಳುವವರ ಸಂಖ್ಯೆ ವಿರಳ

**ಮಂಡ್ಯ:** ಸಮ್ಮೇಳನದ ಪ್ರಮುಖ ಆಕರ್ಷಣೆಯಾದ ಪುಸ್ತಕ ಮೇಳದಲ್ಲಿ ಜನಜಾತ್ರೆ ಹೆಚ್ಚಾಗಿದ್ದರೂ, ಪುಸ್ತಕ ಖರೀದಿಸುವವರ ಸಂಖ್ಯೆ ವಿರಳವಾಗಿತ್ತು.

ಸಾಹಿತ್ಯ ಸಮ್ಮೇಳನದಲ್ಲಿ ಸಾವಿರಾರು ರೀತಿಯ ಪುಸ್ತಕಗಳನ್ನು ಓದುಗರಿಗೆ ಲಭ್ಯವಿದ್ದರೂ ಸಹ ಪುಸ್ತಕಗಳನ್ನು ಖರೀದಿಸುವವರ ಸಂಖ್ಯೆ ಮಾತ್ರ ಕಡಿಮೆಯಾಗಿತ್ತು. ಕೇವಲ ನೋಡುವುದಕ್ಕೆ ಹಾಗೂ ಸೆಲ್ಫಿ ಕ್ಲಿಕ್ಕಿಸುವುದಕ್ಕಷ್ಟೇ ಸೀಮಿತವಾಗಿದ್ದು, ಬೇಸರದ ಸಂಗತಿಯಾಗಿದೆ.

ನಾಲ್ಕು ಮಳಿಗೆಯಲ್ಲಿ ಒಟ್ಟು 450 ಬುಕ್ ಸ್ಟಾಲ್‌ಗಳನ್ನು ನಿರ್ಮಿಸಲಾಗಿತ್ತು. ಆದರೆ ಪುಸ್ತಕ ಖರೀದಿ ಮಾಡುವವರ ಸಂಖ್ಯೆ ಮಾತ್ರ ಕಡಿಮೆಯಾಗಿದೆ. ಮಂಡ್ಯ ಜಿಲ್ಲೆ ಸಾಹಿತ್ಯ ಮತ್ತು ಹೆಚ್ಚು ಕನ್ನಡ ಮಾತನಾಡುವವರಿಗೆ ಹೆಸರಾಗಿರುವ ಜಿಲ್ಲೆಯಾಗಿದೆ ಆದರೆ ಅಂತಹ ಜಿಲ್ಲೆಯಲ್ಲಿ ಪುಸ್ತಕ ಖರೀದಿ ಮಾಡುವವರು ವಿರಳವಾಗಿದ್ದದ್ದು ನಿಜಕ್ಕೂ ಬೇಸರದ ಸಂಗತಿ.

ಮತ್ತೊಂದೆಡೆ ಗೋಷ್ಠಿಗಳಲ್ಲೂ ಸಾಹಿತ್ಯಾಭಿಮಾನಿಗಳ ಸಂಖ್ಯೆ ಕಡಿಮೆ ಇದ್ದಿದ್ದು ಕಂಡು ಬಂತು. ವಾಣಿಜ್ಯ ಮಳಿಗೆಗಳು, ಊಟದ ಹಾಲ್‌ನಲ್ಲಿ ಸಿಗುವ ಜನಜಂಗುಳಿ ಮೂರು ವೇದಿಕೆಗಳಲ್ಲಿ ನಡೆದ ವಿಚಾರಗೋಷ್ಠಿಯಲ್ಲಿ ಕಾಣಲಿಲ್ಲ.

ಇದರ ಜೊತೆಗೆ ಇಂದು ಸಹ ಬಗೆ ಬಗೆಯ ಭೂರಿ ಭೋಜನ ವ್ಯವಸ್ಥೆ ಮಾಡಲಾಗಿತ್ತು. ಬೆಳಗ್ಗಿನ ತಿಂಡಿಗೆ ರಾಗಿ ದೋಸೆ, ಚಟ್ನಿ, ಖಾರ ಪೊಂಗಲ್, ಸಿಹಿ ಪೊಂಗಲ್, ವಡೆ ವ್ಯವಸ್ಥೆ ಮಾಡಿದ್ದರೆ ಮಧ್ಯಾಹ್ನ ದೂಟಕ್ಕೆ ಅಕ್ಕಿ ರೊಟ್ಟಿ, ಚಟ್ನಿ, ಗೊಜ್ಜು, ಪೂರಿ, ಸಾಗು, ಲಾಡು, ಪಲಾವ್, ಪಲ್ಯ, ಅನ್ನ ಸಾಂಬಾರ್ ಇತ್ತು.

## ಕನ್ನಡಕ್ಕೆ ತಂತ್ರಜ್ಞಾನದ ಕನ್ನಡಕ ಬೇಕು: ಜಿ.ಎನ್.ಮೋಹನ್

**ಮಂಡ್ಯ(ಸಮನಾಂತರ ವೇದಿಕೆ–1):** ಕನ್ನಡಕ್ಕೆ ತಂತ್ರಜ್ಞಾನದ ಕನ್ನಡಕ ಬೇಕು ಮತ್ತು ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯ ಮತ್ತು ಡಿಜಿಟಲ್ ಕನ್ನಡ ಪ್ರಾಧಿಕಾರ ಬೇಕು ಎಂದು ಹಿರಿಯ ಪತ್ರಕರ್ತ ಜಿ.ಎನ್.ಮೋಹನ್ ಹೇಳಿದರು. 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಮಾನಾಂತರ ವೇದಿಕೆ 1ರಲ್ಲಿ ಸೃಜನಶೀಲತೆ – ವಿದ್ಯುನ್ಮಾನ ಮಾಧ್ಯಮಗಳ ಸವಾಲುಗಳ ಕುರಿತು ಮಾತನಾಡಿದ ಅವರು, ಕೃತಕ ಬುದ್ಧಿಮತ್ತೆ ಹಾಗೂ ಚಾಟ್ ಜಿ.ಪಿ.ಟಿ ಸೃಷ್ಟಿಸಿರುವ ಸವಾಲುಗಳ ಬಗ್ಗೆ ಮನುಷ್ಯನಂತೆ ಮಾತನಾಡುವ ಯಂತ್ರ ವ್ಯವಸ್ಥೆಯೆ ಎಐ, ಕೃತಕ ಬುದ್ಧಿಮತ್ತೆಯಿಂದ ಮನುಷ್ಯ ಮುಂದೆ ಆಧುನಿಕ ಜಗತ್ತಿನಲ್ಲಿ ಎಲ್ಲಾ ಪ್ರತಿಕ್ರಿಯೆಗಳಿಗೆ ಯಾಂತ್ರಿಕ ಶಕ್ತಿಗೆ ಒಳಗೊಳ್ಳುತ್ತೇನೆ ಎಂದರು.

# ಮಾಜಿ ಸಿಎಂ ಎಸ್.ಎಂ.ಕೃಷ್ಣ ಪುಣ್ಯತಿಥಿ

## ಎಸ್‌ಎಂಕೆ ಕುಟುಂಬಸ್ಥರು, ಡಿಕೆಶಿ ಸೇರಿ ಹಲವು ಗಣ್ಯರು ಭಾಗಿ



ಡಿಸಿಎಂ ಡಿ.ಕೆ.ಶಿವಕುಮಾರ್ ಕೃಷ್ಣ ಅವರ ಪುಣ್ಯ ಸ್ಮರಣೆಯಲ್ಲಿ ಪೂಜೆ ಮಾಡುತ್ತಿರುವುದು.

**ಮದ್ದೂರು:** ಮದ್ದೂರು ತಾಲೂಕಿನ ಹಿರಿಯ ಮುತ್ಸದ್ಧಿ, ಮಾಜಿ ಮುಖ್ಯಮಂತ್ರಿ, ಮಾಜಿ ವಿದೇಶಾಂಗ ಸಚಿವ ಎಸ್.ಎಂ. ಕೃಷ್ಣ ಅವರ 11ನೇ ದಿನದ ಪುಣ್ಯ ಸ್ಮರಣೆ ಹಾಗೂ ಇತರೆ ವಿಧಿ ವಿಧಾನಗಳು ತಾಲೂಕಿನ ಸೋಮನಹಳ್ಳಿ ಗ್ರಾಮದಲ್ಲಿ ಶನಿವಾರ ಸಂಪ್ರದಾಯದಂತೆ ನೆರವೇರಿದವು.

ಎಸ್.ಎಂ.ಕೃಷ್ಣ ಅವರ ಕುಟುಂಬದ ಸದಸ್ಯರು, ಗಣ್ಯರು ಮತ್ತು ಇತರೆ ಸದಸ್ಯರ ಸಮ್ಮುಖದಲ್ಲಿ ಶನಿವಾರ ಬೆಳಗ್ಗೆ ಆರಂಭವಾದ ಪೂಜಾ ವಿಧಿ ವಿಧಾನಗಳು ಮಧ್ಯಾಹ್ನದವರೆಗೂ ಜರುಗಿದವು.

ಎಸ್.ಎಂ.ಕೃಷ್ಣ ಅವರ ಸಮಾಧಿಗೆ ಪತ್ನಿ ಪ್ರೇಮಕೃಷ್ಣ, ಹಿರಿಯ ಪುತ್ರಿ ಮಾಳವಿಕ, ಕಿರಿಯ ಪುತ್ರಿ ಶಾಂಭವಿ, ಮೊಮ್ಮಗ ಅಮರ್ತ್ಯ ಹೆಗಡೆ, ಡಿಕೆಶಿ ಪುತ್ರಿ ಐಶ್ವರ್ಯ, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವ ಎನ್.ಚಲುವರಾಯಸ್ವಾಮಿ, ಮಾಜಿ ಸಚಿವ ಸಿ.ಎಸ್. ಪುಟ್ಟರಾಜು, ಶಾಸಕರಾದ ಪಿ.ಎಂ.ನರೇಂದ್ರಸ್ವಾಮಿ, ಕೆ.ಎಂ.ಉದಯ, ಸಿ.ಪಿ.ಯೋಗೇಶ್ವರ್, ರವಿಕುಮಾರ್ ಗಣಿಗ ಮತ್ತಿತರ ಗಣ್ಯರು ಪುಷ್ಪನಮನ ಸಲ್ಲಿಸಿ ಗೌರವ ಅರ್ಪಿಸಿದರು.

ಪತ್ನಿ ಉಷಾ, ಪುತ್ರ ಆಕಾಶ್ ಜೊತೆ ಸಮಾಧಿ ಸ್ಥಳಕ್ಕೆ ಆಗಮಿಸಿದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಎಸ್.ಎಂ. ಕೃಷ್ಣ ಅವರಿಗೆ ಪೂಜೆ ಸಲ್ಲಿಸಿ ಪುಷ್ಪ ನಮನ ನೆರವೇರಿಸಿದರು.

**ತಿಂಡಿ ತಿನಿಸು:** ಮೃತ ಎಸ್.ಎಂ.ಕೃಷ್ಣ ಅವರಿಗೆ ಅತಿ ಪ್ರಿಯವಾದ ಮೈಸೂರು ಪಾಕ್, ಬಾದಾಮಿ ಹಲ್ವಾ, ಕೇಸರಿ ಬಾತ್, ಡ್ರೈ ಜಾಮೂನು, ರವೆಉಂಡೆ, ಕಡ್ಲೆ ಮಿಠಾಯಿ, ಚಕ್ಕುಲಿ, ನಿಪ್ಪಟ್ಟು, ಕೋಡುಬಳೆ, ಡ್ರೈ ಫ್ರೂಟ್ಸ್ ಸೇರಿದಂತೆ ಇನ್ನಿತರೆ ತಿಂಡಿ ತಿನಿಸುಗಳನ್ನು ಪೂಜೆ ವೇಳೆ ಎಡೆ ಇಡುವ ಮೂಲಕ ಸಮಾಧಿ ಸ್ಥಳದಲ್ಲಿ ಒಕ್ಕಲಿಗ ಸಂಪ್ರದಾಯ ದಂತೆ ವಿಧಿ ವಿಧಾನಗಳನ್ನು ಪೂರೈಸಲಾಯಿತು.

ಮದ್ದೂರು ತಾಲೂಕು ಸೇರಿದಂತೆ ರಾಜ್ಯದ ವಿವಿದೆಡೆಗಳಿಂದ ಅಪಾರ ಸಂಖ್ಯೆಯಲ್ಲಿ ಆಗಮಿಸಿದ್ದ ಗಣ್ಯರು, ಬಂಧುಗಳು ಹಾಗೂ ಸಾರ್ವಜನಿಕರಿಗೆ ವಿಶೇಷ ಭೋಜನದ ವ್ಯವಸ್ಥೆ ಮಾಡಲಾಗಿತ್ತು. ಸುಮಾರು ಐದು ಸಾವಿರಕ್ಕೂ ಅಧಿಕ ಮಂದಿ ಪಾಲ್ಗೊಂಡಿದ್ದರು.

## ಇಂದು ರೈತ ದಿನಾಚರಣೆ

**ಮಂಡ್ಯ:** ಕರ್ನಾಟಕ ರಾಜ್ಯ ರೈತಪರ ಹೋರಾಟಗಾರರ ಸಂಘದ ವತಿಯಿಂದ ಅಂತರಾಷ್ಟ್ರೀಯ ರೈತ ದಿನಾಚರಣೆಯನ್ನು ಡಿಸೆಂಬರ್ 23ರಂದು ಬೆಳಿಗ್ಗೆ 11 ಗಂಟೆಗೆ ನಗರದ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ರಾಜ್ಯಾಧ್ಯಕ್ಷ ಚಂದ್ರಶೇಖರ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂತರಾಷ್ಟ್ರೀಯ ರೈತ ದಿನಾಚರಣೆಯನ್ನು ಹಿನ್ನೆಲೆ ನಗರದ ಕಾಳಿಕಾಂಭ ದೇವಾಲಯದಿಂದ ಮಂಗಳ ವಾದ್ಯ ಸಮೇತ ಸಿಲ್ವರ್ ಜ್ಯೂಬಿಲಿ ಪಾರ್ಕ್‌ನವರೆಗೆ ಮೆರವಣಿಗೆ ನಡೆಸಿ, ಸಮಾವೇಶ ನಡೆಸಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ರೈತರು ಎದುರಿಸುತ್ತಿರುವ ಸಮಸ್ಯೆಗಳು, ದೊರೆಯಬೇಕಾದ ಸವಲತ್ತುಗಳ ಸಂಬಂಧ ಚರ್ಚೆ ನಡೆಸಲಾಗುವುದು. ಆದ್ದರಿಂದ ಹೆಚ್ಚಿನ ಸಂಖ್ಯೆಯಲ್ಲಿ ಸಾರ್ವಜನಿಕರು, ರೈತರು ಆಗಮಿಸಿ ಕಾರ್ಯಕ್ರಮದ ಯಶಸ್ಸಿಗೆ ಸಹಕರಿಸಬೇಕು ಎಂದು ಕೋರಿದರು.

ಇದೇ ವೇಳೆ ಹಳ್ಳಿಕಾರ್ ಉತ್ತಮ ರಾಸುಗಳ(ಎತ್ತುಗಳ) ಪ್ರದರ್ಶನ ನಡೆಸಲಾಗುತ್ತಿದ್ದು, ಉತ್ತಮ ರಾಸುಗಳಿಗೆ ಮೊದಲ ಬಹುಮಾನ 5000, ದ್ವಿತೀಯ ಬಹುಮಾನ 3000, ತೃತೀಯ ಬಹುಮಾನ 2000 ಮತ್ತು ಪ್ರಶಂಸನಾ ಪತ್ರ ನೀಡಲಾಗುವುದು ಎಂದು ಹೇಳಿದರು.

ಗೋಷ್ಠಿಯಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿ ಬಿ.ರಮೇಶ್, ಯುವ ರಾಜ್ಯಾಧ್ಯಕ್ಷ ರಾಜೇಗೌಡ, ಪೃಥ್ವಿರಾಜ್, ಇಂಡುವಾಳು ಬಸವರಾಜು ಇದ್ದರು.

# ಚಳುವಳಿಗಳ ಪ್ರಭಾವ ನಮ್ಮ ಪ್ರಗತಿಯ ಪಥವನ್ನು ಬೆಳಗಿಸುತ್ತಿದೆ: ದರ್ಶನ್



ಗೋಷ್ಠಿಯಲ್ಲಿ ಮಾತನಾಡುತ್ತಿರುವ ಶಾಸಕ ದರ್ಶನ್ ಪುಟ್ಟಣ್ಣಯ್ಯ.

**ಮಂಡ್ಯ(ಸಮನಾಂತರ ವೇದಿಕೆ–2, ವಿನಯ್ ಕಾರೇಕುರ):** ಚಳವಳಿಗಳು ಹುಟ್ಟಿಕೊಳ್ಳುವುದೇ ಸಾಮಾಜಿಕ, ಆರ್ಥಿಕ ನ್ಯಾಯಗಳನ್ನು ಸರಿಪಡಿಸುವುದಕ್ಕಾಗಿ ಮತ್ತು ಬದಲಾಯಿಸುವುದಕ್ಕಾಗಿ ಸ್ವಾತಂತ್ರ್ಯ ನಂತರ, ಕರ್ನಾಟಕದಲ್ಲಿ ನಡೆದ ಹಲವಾರು ಮಹತ್ವದ ಚಳವಳಿಗಳು ರಾಜ್ಯದ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಬದುಕಿನ ಮೇಲೆ ಆಳವಾದ ಪ್ರಭಾವ ಬೀರಿವೆ. ಇಂದಿಗೂ ಈ ಚಳವಳಿಗಳ ಪ್ರಭಾವ ನಮ್ಮ ಪ್ರಗತಿಯ ಪಥವನ್ನು ಬೆಳಗಿಸುತ್ತಿದೆ ಎಂದು ಶಾಸಕ ದರ್ಶನ್ ಪುಟ್ಟಣ್ಣಯ್ಯ ಅಭಿಪ್ರಾಯಪಟ್ಟರು.

ಅವರು 87ನೇ ಅಖಿಲಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಂಗವಾಗಿ ಸಂಚಿ ಹೊನ್ನಮ್ಮ ಮತ್ತು ತ್ರಿವೇಣಿ ಸಮಾನಾಂತರ ವೇದಿಕೆ–2ರಲ್ಲಿ ಏರ್ಪಡಿಸಿದ್ದ 'ಕರ್ನಾಟಕದ ಚಿತ್ರಣ ಬದಲಿಸಿದ ಚಳವಳಿಗಳು' ಗೋಷ್ಠಿಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಈ ಚಳವಳಿಗಳು ರೈತರ ಹಕ್ಕುಗಳು, ಭೂ ಸುಧಾರಣೆ, ಜಲಸಂಪತ್ತಿನ ಹಂಚಿಕೆ, ದಲಿತರ ಹಕ್ಕುಗಳು ಮತ್ತು ಪರಿಸರ ಕಾಳಜಿಗೆ ಪ್ರಾಧಾನ್ಯತೆ ನೀಡಿವೆ. 1990ರ ನಂತರ ಪ್ರೊ.ಎಂ.ಡಿ.ನಂಜುಂಡಸ್ವಾಮಿ ಮತ್ತು ಕೆ.ಎಸ್.ಪುಟ್ಟಣ್ಣಯ್ಯರ ನೇತೃತ್ವದಲ್ಲಿ ನಡೆದ ಚಳವಳಿಗಳು, ರೈತರು ಮತ್ತು ಗ್ರಾಮೀಣ ಸಮುದಾಯಗಳಿಗೆ ಹೊಸ ದಾರಿ ತೋರಿವೆ. ಇದೇ ಸಮಯದಲ್ಲಿ ದಲಿತ ಸಂಘರ್ಷ ಸಮಿತಿ ಮತ್ತು ಪ್ರಗತಿಪರ ಸಂಘಟನೆಗಳು ಸಾಮಾಜಿಕ ನ್ಯಾಯದ ದೃಷ್ಟಿಯಿಂದ ರಾಜ್ಯದಲ್ಲಿ ಹೊಸತೊಂದು ಸಂಚಲನ ಉಂಟು ಮಾಡಿದವು ಎಂದರು.

ಅಖಿಲ ಕರ್ನಾಟಕ ಡಾ.ರಾಜಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷ ಸಾ.ರಾ. ಗೋವಿಂದು ಆಶಯ ನುಡಿಗಳನ್ನಾಡಿದರು.

## ಕನ್ನಡ ತಂತ್ರಜ್ಞಾನದ ಭಾಷೆ ಆಗಬೇಕು: ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯ

**ಮಂಡ್ಯ(ಪ್ರಧಾನ ವೇದಿಕೆ, ಮೋಹನ್ ರಾಜ್):** ಕನ್ನಡ ಅನ್ನ, ಜ್ಞಾನ, ಭಾವದ ಭಾಷೆ ಆಗುವುದರ ಜೊತೆಗೆ ತಂತ್ರಜ್ಞಾನದ ಭಾಷೆ ಕೂಡ ಆಗಬೇಕು. ತಂತ್ರಜ್ಞಾನದಲ್ಲಿ ಕನ್ನಡ ಬಳಸಬೇಕು. ಸಮಕಾಲೀನ ಸವಾಲುಗಳಿಗೆ ಕನ್ನಡವನ್ನು ಸದೃಢಗೊಳಿಸಬೇಕು ಎಂದು ಹಿರಿಯ ವಿದ್ವಾಂಸ ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಹೇಳಿದರು.

87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ರಾಜಮಾತೆ ಕೆಂಪನಂಜಮಣ್ಣಿ ಮತ್ತು ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಧಾನ ವೇದಿಕೆಯಲ್ಲಿ ಆಯೋಜಿಸಿದ್ದ "ಕರ್ನಾಟಕ–50: ಹಿನ್ನೋಟ–ಮುನ್ನೋಟ, ಕನ್ನಡವೆಂದರೆ ಬರೀ ನುಡಿಯಲ್ಲ" ವಿಷಯದ ಗೋಷ್ಠಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಶಿಕ್ಷಣದಲ್ಲಿ ಕನ್ನಡ ಮಾಧ್ಯಮ ಅಳವಡಿಸಿಕೊಳ್ಳಬೇಕು. ಆಡಳಿತದಲ್ಲಿ ಕನ್ನಡ ಇರಬೇಕು. ಸಮಕಾಲೀನ ಸವಾಲುಗಳಿಗೆ ಕನ್ನಡವನ್ನು ಸದೃಢಗೊಳಿಸುವ ಕಾರ್ಯಕ್ಕೆ ಸರ್ಕಾರ ಮುಂದಾಗಬೇಕು. ಎಲ್ಲರೂ ಬಳಸುವ ಮೊಬೈಲ್‌ನಲ್ಲಿ ಕನ್ನಡ ತಂತ್ರಜ್ಞಾನ ಅಳವಡಿಸಿಕೊಳ್ಳಬೇಕು ಎಂದು ಹೇಳಿದರು.

ರಾಜಕಾರಣದ ಬೆಂಬಲ ಸಂಸ್ಕೃತಿ, ಸಾಹಿತ್ಯಕ್ಕೆ ಬೇಕು. ರಾಜಕೀಯ ಬೆಂಬಲ ಇಲ್ಲದೆ ಸಂಸ್ಕೃತಿ ಉಳಿವು ಸಾಧ್ಯವಿಲ್ಲ. ನೆಹರು, ಲೋಹಿಯಾ, ಗಾಂಧಿ ಸೇರಿದಂತೆ ಅನೇಕ ಗಣ್ಯರು ಸಾಹಿತಿಗಳ ಜೊತೆ ನಿಕಟ ಸಂಪರ್ಕ ಹೊಂದಿದ್ದರು. ಆದರೆ ಇಂದಿನ ರಾಜಕಾರಣಿಗಳು ಸಂಸ್ಕೃತಿ ಸಾಹಿತ್ಯದಿಂದ ದೂರ ಆಗುತ್ತಿದ್ದಾರೆ ಎಂದರು.

## ನಾಳೆ ಹಿರಿಯ ರೈತ ಹೋರಾಟಗಾರರಿಗೆ ಸನ್ಮಾನ

ಮೈಸೂರು, ಡಿ.21(ಜಿಎ)–ಕರ್ನಾಟಕ ರಾಜ್ಯ ರೈತ ಸಂಘಗಳ ಮಹಾ ಒಕ್ಕೂಟ, ಕರ್ನಾಟಕ ರಾಜ್ಯ ರೈತ ಸಂಘ ರೈತ ಬಣದ ವತಿಯಿಂದ ಡಿ.23ರಂದು ಬೆಳಗ್ಗೆ 11 ಗಂಟೆಗೆ ಮೈಸೂರಿನ ಟೌನ್‌ಹಾಲ್ ಆವರಣದಲ್ಲಿ ವಿಶ್ವ ರೈತ ದಿನಾಚರಣೆ ಅಂಗವಾಗಿ ಹಿರಿಯ ರೈತ ಹೋರಾಟಗಾರರಿಗೆ ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಅಧ್ಯಕ್ಷ ಇಂಗಲಗುಪ್ಪೆ ಕೃಷ್ಣೇಗೌಡ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುತ್ತೂರು ಶ್ರೀ ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಮಠದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಮೈಸೂರು ಶಾಖ ಮಠದ ಸೋಮನಾಥನಂದ ಸ್ವಾಮೀಜಿ, ಶ್ರೀ ರೇವಣ ಸಿದ್ದೇಶ್ವರ ಮಠದ ಶ್ರೀ ಡಾ.ಬಸವರಾಜ ದೇವರು ಸ್ವಾಮೀಜಿ ಅವರ ಉಪಸ್ಥಿತಿಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಸಚಿವರಾದ ಕೆ.ವೆಂಕಟೇಶ್, ಎನ್.ಚೆಲುವರಾಯಸ್ವಾಮಿ, ಸಂಸದ ಯದುವೀರ್ ಒಡೆಯರ್, ಶಾಸಕರಾದ ಜಿ.ಟಿ.ದೇವೇಗೌಡ, ಟಿ.ಎಸ್.ಶ್ರೀವತ್ಸ, ಕೆ.ಹರೀಶ್‌ಗೌಡ, ರಮೇಶ್ ಬಾಬು ಬಂಡಿಸಿದ್ದೇಗೌಡ, ದರ್ಶನ್ ಧ್ರುವನಾರಾಯಣ, ಮಾಜಿ ಶಾಸಕ ಸಾ.ರಾ.ಮಹೇಶ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ. ರಾಜ್ಯದ ವಿವಿಧ ಭಾಗಗಳಿಂದ 8 ಸಾವಿರಕ್ಕೂ ಅಧಿಕ ರೈತರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದರು. ರೈತರ ಸಾಲಮನ್ನಾ, ರೈತರು ಬೆಳೆಗಳಿಗೆ ಬೆಂಬಲ ಬೆಲೆ ನಿಗದಿಪಡಿಸುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಲಿದ್ದೇವೆ ಎಂದರು.

## ನೆಲಮಂಗಲ ಬಳಿ ಘೋರ ರಸ್ತೆ ದುರಂತ; ಕಾರಿನ ಮೇಲೆ ಕಂಟೇನರ್ ಉರುಳಿ

# ಒಂದೇ ಕುಟುಂಬದ 6 ಮಂದಿ ಸಾವು



ವಿಜಯಪುರ ಮೂಲದ ಚಂದ್ರ ಯೇಗಪ್ಪ ಗೋಳ್ ಅವರ ಕುಟುಂಬ



ನೆಲಮಂಗಲ, ಡಿ.21– ಎರಡು ಕಾರು, ಲಾರಿ, ಕಂಟೇನರ್, ಸ್ಕೂಲ್ ಬಸ್ ನಡುವಿನ ಸರಣಿ ಅಪಘಾತದಲ್ಲಿ ಕಾರಿನ ಮೇಲೆ ಕಂಟೇನರ್ ಉರುಳಿ ಬಿದ್ದ ಪರಿಣಾಮ ಐಟಿ ಉದ್ಯಮಿ ಕುಟುಂಬದ 6 ಮಂದಿ ದುರ್ಮರಣಕ್ಕೀಡಾಗಿದ್ದಾರೆ.

ಬೆಂಗಳೂರಿನಲ್ಲಿ ಐಟಿ ಕಂಪೆನಿ ನಡೆಸುತ್ತಿರುವ ವಿಜಯಪುರ ಮೂಲದ ಚಂದ್ರ ಯೇಗಪ್ಪ ಗೋಳ್(48), ಗೌರಾ ಬಾಯಿ(42), ದೀಕ್ಷಾ(12), ಗ್ಯಾನ್(16), ವಿಜಯಲಕ್ಷ್ಮಿ(36), ಆರ್ಯ(6) ಸಾವನ್ನಪ್ಪಿದ್ದಾರೆ. ಇಂದು ಬೆಳಗ್ಗೆ 11 ಗಂಟೆ ಸುಮಾರಿಗೆ ಬೆಂಗಳೂರು–ತುಮಕೂರು ಎನ್‌ಎಚ್ 48ರ ನೆಲಮಂಗಲ ಬಳಿ ಈ ಅಪಘಾತ ಸಂಭವಿಸಿದೆ. ಬೆಂಗಳೂರು ಕಡೆಯಿಂದ ತುಮಕೂರು ಕಡೆಗೆ ಈಚರ್ ಕ್ಯಾಂಟರ್ ಹೋಗುತ್ತಿತ್ತು. ಇದೇ ಕ್ಯಾಂಟರ್‌ನ ಹಿಂದೆ ಚಂದ್ರಮ್ ಅವರ ವೋಲ್ವೋ ಕಾರು ಚಲಿಸುತ್ತಿತ್ತು. ಇನ್ನು ಪಕ್ಕದ ರಸ್ತೆಯಲ್ಲಿ ಬೆಂಗಳೂರು ಕಡೆಗೆ ಕಂಟೈನರ್ ಲಾರಿಯೊಂದು ವೇಗವಾಗಿ ಹೋಗುತ್ತಿತ್ತು. ನಿಯಂತ್ರಣ ತಪ್ಪಿದ ಕಂಟೇನರ್ ಚಾಲಕ ರಸ್ತೆಯ ಮಧ್ಯದ ಡಿವೈಡರ್ ಮೇಲೆ ಗಾಡಿ ಹತ್ತಿಸಿದ್ದಾನೆ. ಪಕ್ಕದ ರಸ್ತೆಗೆ ಇಳಿದ ಕಂಟೇನರ್ ತುಮಕೂರು ಕಡೆ ಹೋಗುತ್ತಿದ್ದ ಕ್ಯಾಂಟರ್‌ಗೆ ಡಿಕ್ಕಿ ಹೊಡೆದಿದೆ. ನಂತರ ಅದರ ಹಿಂದೆಯೇ ಬರುತ್ತಿದ್ದ ವೋಲ್ವೋ ಕಾರ್‌ನ ಮೇಲೆ ಏಕಾಏಕಿ ಉರುಳಿ ಬಿದ್ದಿದೆ. ಕಂಟೇನರ್ ಬಿದ್ದ ಪರಿಣಾಮ ಇಡೀ ವೋಲ್ವೋ ಕಾರ್ ಅಪ್ಪಚ್ಚಿಯಾಗಿದೆ. ಆಗ ಕಾರಿನಲ್ಲಿದ್ದ 6 ಜನ ಸ್ಥಳದಲ್ಲಿಯೇ ಸಾವಿಗೀಡಾಗಿದ್ದಾರೆ. ಲಾರಿ ಹಾಗೂ ಕ್ಯಾಂಟರ್ ಚಾಲಕ ಇಬ್ಬರಿಗೂ ಸಣ್ಣಪುಟ್ಟ ಗಾಯವಾಗಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಚಂದ್ರಮ್ ಯೇಗಪ್ಪ ಗೋಳ ಅವರು ಐಟಿ ಉದ್ಯಮಿಯಾಗಿದ್ದು, ಆಟೋಮೊಬೈಲ್ ಇಂಡಸ್ಟ್ರಿಗೆ ಸಾಫ್ಟ್‌ವೇರ್ ಪ್ರೋಗ್ರಾಮಿಂಗ್ ಮಾಡಿಕೊಡುತ್ತಿದ್ದ ಐಎಎಸ್‌ಟಿ ಕಂಪನಿಯ ಮಾಲೀಕರಾಗಿದ್ದರು. ಹೊಸ ಆಫೀಸ್ ಓಪನ್ ಮಾಡಲು ನಿರ್ಧರಿಸಿದ್ದ ಚಂದ್ರಮ್ ಈ ನಿಟ್ಟಿನಲ್ಲಿ ಓಡಾಟ ನಡೆಸುತ್ತಿದ್ದರು. ಹೊಸ ಆಫೀಸ್ ಕೆಲಸವು ಕೂಡ ನಡೆಯುತ್ತಿತ್ತು. ಶುಕ್ರವಾರ ರಾತ್ರಿ ಸಿಬ್ಬಂದಿ ಜೊತೆ ಮೀಟಿಂಗ್ ಮಾಡಿದ್ದ ಚಂದ್ರಮ್, ಕೆಲ ದಿನಗಳು ಬರುವುದಿಲ್ಲ ಎಂದು ಹೇಳಿ ಹೋಗಿದ್ದರು. ಆದರೆ, ಈಗ ಬಾರದ ಲೋಕಕ್ಕೆ ಹೋಗಿದ್ದಾರೆ. ಬೆಂಗಳೂರಿನ ಎಚ್‌ಎಸ್‌ಆರ್ ಲೇಔಟ್‌ನಲ್ಲಿ ಕಂಪನಿಯ ಪ್ರಧಾನ ಕಚೇರಿಯಿದ್ದು, 200 ಮಂದಿ ಕೆಲಸ ಮಾಡುತ್ತಿದ್ದಾರೆ. ಯುರೋಪ್, ಚೀನಾ ಸೇರಿದಂತೆ ವಿವಿಧ ದೇಶಗಳ ಕ್ಲೈಂಟ್ಸ್‌ಗಳಿಗೆ ಸೇವೆ ನೀಡುತ್ತಿದ್ದರು. ನನ್ನ ಮುಂದಿದ್ದ ಕಾರಿನಲ್ಲಿದ್ದವರನ್ನು ಬಚಾವ್ ಮಾಡಲು ಹೋಗಿ ಹೀಗಾಯ್ತು ಎಂದು ನೆಲಮಂಗಲದಲ್ಲಿ ನಡೆದ ಸರಣಿ ಅಪಘಾತದ ಬಗ್ಗೆ ಕಂಟೇನರ್ ಚಾಲಕ ಆರೀಫ್ ಹೇಳಿದ್ದಾರೆ.

ಡಾಬಸ್‌ಪೇಟೆಯಿಂದ ಬೆಂಗಳೂರಿನ ಕಡೆಗೆ ನಾನು ಬರುತ್ತಿದ್ದೆ. ನನ್ನ ಮುಂದಿನ ಕಾರನ್ನು ಸೇಫ್ ಮಾಡಲು ಹೋಗಿ ಹೀಗೆ ಆಗಿದೆ. ಲಾರಿ ಡಿವೈಡರ್ ದಾಟಿ ಆ ರಸ್ತೆಯಲ್ಲಿ ಹೋಗುತ್ತಿದ್ದ ಕಾರಿನ ಮೇಲೆ ನನ್ನ ಲಾರಿ ಪಲ್ಟಿಯಾ ಗಿತ್ತು ಎಂದು ಬೇಸರದಿಂದಲೇ ತಿಳಿಸಿದ್ದಾರೆ.

**ಕಾರಲ್ಲಿ ಜಾಗ ಸಿಗದೇ ಬಚಾವ್ ಆದ ವೀಣಾ:** ಈ ಘಟನೆ ಬಗ್ಗೆ ಉದ್ಯಮಿ ಚಂದ್ರಮ್ ಯೇಗಪ್ಪ ಗೋಳ ಅವರ ಸಂಬಂಧಿ ವೀಣಾ ತೀವ್ರ ಆಘಾತ ವ್ಯಕ್ತಪಡಿಸಿದ್ದಾರೆ. ಚಂದ್ರಮ್ ನನ್ನ ದೊಡ್ಡಪ್ಪನ ಮಗ. ಅವರು, ನನಗೂ ಬಾ ಎಂದು ಕರೆದಿದ್ದರು. ಆದರೆ, ಕಾರಿನಲ್ಲಿ ಜಾಗ ಇರಲಿಲ್ಲ, ಇವತ್ತು ಬೆಳಗ್ಗೆ ಫೋನ್ ಮಾಡಿದಾಗ ನಾವು ತುಮಕೂರು ದಾಟಿ ಹೋಗುತ್ತಿದ್ದೀವಿ ಅಂದಿದ್ದರು. ಹಾಗಾಗಿ ನಾನು ಸಂಜೆ ಬಸ್‌ಗೆ ಹೋಗೋಣ ಅಂತ ಇದ್ದೆ, ಆದರೆ ಹೀಗೆ ಆಗಿದೆ. ಅವರು ಕ್ರಿಸ್ಮಸ್ ರಜೆಗಾಗಿ ಊರಿಗೆ ಹೋಗುತ್ತಿದ್ದರು. ವಿಜಯಪುರದವರಾದ ಇವರು ಕಳೆದ 20 ವರ್ಷದಿಂದ ಬೆಂಗಳೂರಿನಲ್ಲಿದ್ದಾರೆ. ಬೆಂಗಳೂರಿನಲ್ಲಿ ಒಂದು ಕಂಪನಿಯಿದೆ ಹಾಗೂ ಪುಣೆಯಲ್ಲಿ ಹೊಸದಾಗಿ ಶುರು ಮಾಡಿದ್ದರು. ಸದ್ಯ ನೆಲಮಂಗಲ ಪೊಲೀಸರು ಹಾಗೂ ಎಸ್‌ಪಿ ಸಿ.ಕೆ ಬಾಬಾ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ.

### ಎರಡು ತಿಂಗಳ ಹಿಂದಷ್ಟೇ ಕೋಟಿ ಕೊಟ್ಟು ಕಾರು ಖರೀದಿಸಿದ್ದರು

ಬೆಂಗಳೂರು, ಡಿ.21–ಅದು ಅಂತಿಥ ಕಾರಲ್ಲ, ವೋಲ್ವೋ ಕಂಪನಿಯ ಬರೋಬ್ಬರಿ 1.01 ಕೋಟಿ ರೂಪಾಯಿ ಮೌಲ್ಯದ ವೋಲ್ವೋ ಎಕ್ಸ್‌ಸಿ 90 ಬ್ರ್ಯಾಂಡ್‌ನ ಕಾರು. ಆದರೆ, ವಿಧಿಯಾಟದ ಮುಂದೆ ಅದೆಷ್ಟೇ ಮೊತ್ತದ, ಅದೆಷ್ಟೇ ಬ್ರ್ಯಾಂಡ್‌ನ ಕಾರು ಖರೀದಿ ಮಾಡಿದ್ದರೂ ಲೆಕ್ಕಕ್ಕೆ ಬರೋದಿಲ್ಲ. ನೆಲಮಂಗಲದಲ್ಲಿ ತುಮಕೂರು–ಬೆಂಗಳೂರು ನಡುವೆ ಶನಿವಾರ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಐಎಎಸ್‌ಟಿ ಸಾಫ್ಟ್‌ವೇರ್ ಸಲ್ಯೂಷನ್ಸ್ ಕಂಪನಿಯ ಮಾಲೀಕ ಹಾಗೂ ಸಿಇಒ ಚಂದ್ರಮ್ ಯೇಗಪ್ಪಗೋಳ ಹಾಗೂ ಅವರ ಇಡೀ ಕುಟುಂಬ ಸಾವು ಕಂಡಿದೆ. ಈ ನಡುವೆ ಅವರು ಎರಡು ತಿಂಗಳ ಹಿಂದಷ್ಟೇ ಖರೀದಿ ಮಾಡಿದ್ದ ವೋಲ್ವೋ ಕಾರಿನ ವಿಡಿಯೋ ವೈರಲ್ ಆಗಿದೆ.

## ಹಳೆ ಕಾರು ಮಾರಾಟದ ಮೇಲೂ ಜಿಎಸ್‌ಟಿ ಹೊರೆ

ಜೈಸಲ್ಮೇರ್, ಡಿ.21– ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ನೇತೃತ್ವದಲ್ಲಿ ರಾಜಸ್ಥಾನದ ಜೈಸಲ್ಮೇರ್‌ನಲ್ಲಿ ಶನಿವಾರ ನಡೆದ 55ನೇ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಕೌನ್ಸಿಲ್ ಸಭೆಯು ವಿಮಾ ಕಂತುಗಳ ಮೇಲಿನ ಜಿಎಸ್‌ಟಿಯನ್ನು ಕಡಿಮೆ ಮಾಡುವ ಬಹು ನಿರೀಕ್ಷಿತ ಪ್ರಸ್ತಾಪದ ಚರ್ಚೆಯನ್ನು ಮುಂದೂಡಿದೆ.

ಹಿರಿಯ ನಾಗರಿಕರನ್ನು ಹೊರತುಪಡಿಸಿ ಇತರ ವ್ಯಕ್ತಿಗಳಿಗೆ 5 ಲಕ್ಷ ರೂ.ವರೆಗಿನ ಆರೋಗ್ಯ ವಿಮೆಗೆ ಪಾವತಿಸುವ ಪ್ರೀಮಿಯಂ ಅನ್ನು ಜಿಎಸ್‌ಟಿಯಿಂದ ವಿನಾಯಿತಿ ನೀಡುವ ಪ್ರಸ್ತಾಪ ಇದೆ. 5 ಲಕ್ಷ ರೂ.ಗಿಂತ ಹೆಚ್ಚಿನ ಆರೋಗ್ಯ ವಿಮಾ ರಕ್ಷಣೆಯೊಂದಿಗೆ ಪಾಲಿಸಿಗಳಿಗೆ ಪಾವತಿಸಿದ ಪ್ರೀಮಿಯಂಗಳ ಮೇಲೆ ಶೇ.18 ಜಿಎಸ್‌ಟಿ ಮುಂದುವರಿಯಲಿದೆ. ಈ ಕುರಿತು ಪ್ರತಿಕ್ರಿಯಿಸಿರುವ ಬಿಹಾರ ಉಪ ಮುಖ್ಯಮಂತ್ರಿ ಸಾಮ್ರಾಟ್ ಚೌಧರಿ ಅವರು, ಕುಟುಂಬ, ವೈಯಕ್ತಿಕ ಮತ್ತು ಹಿರಿಯ ನಾಗರಿಕರ ಆರೋಗ್ಯ ವಿಮಾ ಮೇಲಿನ ತೆರಿಗೆ ಕಡಿತದ ಕುರಿತು ಸಚಿವರ ಗುಂಪಿನ(ಜಿಓಎಂ) ನೇತೃತ್ವದಲ್ಲಿ ಮತ್ತೊಂದು ಸಭೆ ನಡೆಯಲಿದೆ ಎಂದು ಹೇಳಿದ್ದಾರೆ.

ಆದಾಗ್ಯೂ, ಕೌನ್ಸಿಲ್ ಇತರ ಉತ್ಪನ್ನಗಳು ಮತ್ತು ಸೇವೆಗಳ ಬಗ್ಗೆ ನಿರ್ಧಾರ ತೆಗೆದುಕೊಂಡಿದ್ದು, ಅವುಗಳಲ್ಲಿ ಉಪ್ಪು ಮತ್ತು ಮಸಾಲೆಗಳೊಂದಿಗೆ ಬೆರೆಸಿದ ರೆಡಿ–ಟು–ಈಟ್ ಪಾಪ್ ಕಾರ್ನ್‌ನ ಮೇಲೆ ಶೇ.5ರಷ್ಟು ಜಿಎಸ್‌ಟಿ ಮತ್ತು ಪೂರ್ವ–ಪ್ಯಾಕೇಜ್ ಮಾಡಿದ ಮತ್ತು ಲೇಬಲ್ ಮಾಡಿದ ಪಾಪ್ ಕಾರ್ನ್‌ನ ಮೇಲೆ ಶೇ.12 ಜಿಎಸ್‌ಟಿ ಸೇರಿವೆ. ಕೌನ್ಸಿಲ್ ಕ್ಯಾರಮೆಲ್ ಪಾಪ್‌ಕಾರ್ನ್‌ನ ಮೇಲೆ ಶೇ.18ರಷ್ಟು ಜಿಎಸ್‌ಟಿ ಮತ್ತು ಫೋರ್ಟಿಫೈಡ್ ಅಕ್ಕಿ ಕಾಳುಗಳ ಮೇಲೆ ಶೇ.5ರಷ್ಟು ಜಿಎಸ್‌ಟಿಯನ್ನು ಪ್ರಸ್ತಾಪಿಸಲಾಗಿದೆ.

ಮತ್ತೊಂದು ಪ್ರಮುಖ ನಿರ್ಧಾರವೆಂದರೆ ಹಳೆಯ ಮತ್ತು ಬಳಸಿದ ಎಲೆಕ್ಟ್ರಿಕ್ ವಾಹನಗಳು(ಇವಿಗಳು) ಮತ್ತು ಪೆಟ್ರೋಲ್ ಮತ್ತು ಡೀಸೆಲ್ ಸಣ್ಣ ಕಾರುಗಳ ಮಾರಾಟದ ಮೇಲೆ ಶೇ.18ರಷ್ಟು ಜಿಎಸ್‌ಟಿ ವಿಧಿಸಲು ಸಭೆ ನಿರ್ಧರಿಸಿದೆ. ಇದು ಪ್ರಸ್ತುತ ಶೇ.12ರಷ್ಟು ಇದೆ.

## ಅರಮನೆ ಅಂಗಳದಲ್ಲಿ ಫಲಪುಷ್ಪ ಪ್ರದರ್ಶನ ಆರಂಭ



ಮೈಸೂರು ಅರಮನೆ ಆವರಣದಲ್ಲಿ ಆಯೋಜಿಸಿರುವ ಫಲಪುಷ್ಪ ಪ್ರದರ್ಶನವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಿ, ಬಳಿಕ ಗಣ್ಯರೊಡಗೂಡಿ ವೀಕ್ಷಿಸಿದರು.

ಮೂರನೇ ಪುಟದಿಂದ

ವಿಗ್ರಹ ಭಕ್ತಿಭಾವ ಮೂಡಿಸುತ್ತವೆ. ಮುಮ್ಮಡಿ ಕೃಷ್ಣರಾಜ ಒಡೆಯರ್ ಪ್ರತಿಕೃತಿ, ಕಾರ್ಗಿಲ್ ವಿಜಯಸ್ತಂಭ, ರಾಜ್ಯ ಸರ್ಕಾರದ ಪಂಚಗ್ಯಾರಂಟಿ, ನವಿಲು, ಗಂಡಭೇರುಂಡ, ಗರುಡ, ಹಸು, ಆನೆ, ಸಾರಂಗ, ಆಮೆ ಸೇರಿದಂತೆ ಪ್ರಾಣಿ–ಪಕ್ಷಿಗಳ ಕಲಾಕೃತಿಗಳು ಕಣ್ಮನ ಸೆಳೆಯುತ್ತವೆ. ಫೋಟೋ ತೆಗೆಸಿಕೊಂಡು ಸಂಭ್ರಮಿಸಲು ಟೊಪ್ಪಿ ಹಾಗೂ ಮಾವಿನ ಹಣ್ಣು ಮಾದರಿಯನ್ನು ಹೂಗಳಿಂದಲೇ ನಿರ್ಮಿಸಲಾಗಿದ್ದು, ಹೂವಿನ ದ್ವಾರಗಳೂ ಸುಂದರವಾಗಿವೆ.

ನವಗ್ರಹ ವನ, ಔಷಧೀಯ ಗಿಡಗಳು, ಗುಲಾಬಿ, ಸೇವಂತಿ, ಜಲಿಯ ಸಾಲ್ವಿಯ, ಚೆಂಡುಹೂ, ಸೂರ್ಯಕಾಂತಿ ಸೇರಿದಂತೆ ವಿವಿಧ ಬಗೆಯ 25 ಸಾವಿರಕ್ಕೂ ಹೆಚ್ಚು ಹೂವಿನ ಕುಂಡಗಳನ್ನು ಶಿಸ್ತಾಗಿ ಜೋಡಿಸಲಾಗಿದೆ. ಹಣ್ಣು–ತರಕಾರಿಗಳಲ್ಲಿ ದೇವರು ಹಾಗೂ ಗಣ್ಯರನ್ನು ಚಿತ್ರಿಸಿರುವುದು ಗಮನ ಸೆಳೆಯುತ್ತದೆ. ಈ ಬಾರಿಯೂ ಮೈಸೂರು ಅರಮನೆ ಮತ್ತು ರಾಜ ಮನೆತನದ ಇತಿಹಾಸಕ್ಕೆ ಸಂಬಂಧಿಸಿದ ವಿಶೇಷ ಛಾಯಾಚಿತ್ರಗಳು, ಸಾಕ್ಷ್ಯಚಿತ್ರ ಹಾಗೂ ವೈವಿಧ್ಯಮಯ ಬೊಂಬೆಗಳ ಪ್ರದರ್ಶನ ಫಲಪುಷ್ಪ ಪ್ರದರ್ಶನದ ಸೊಬಗು ಹೆಚ್ಚಿಸಿವೆ.

**ಪಾರಂಪರಿಕ ಕುಸ್ತಿ:** ಇದೇ ಮೊದಲ ಬಾರಿಗೆ ಅರಮನೆ ಫಲಪುಷ್ಪ ಪ್ರದರ್ಶನದಲ್ಲಿ ಒಂದು ದಿನದ ಪಾರಂಪರಿಕ ನಾಡಕುಸ್ತಿ ಪಂದ್ಯಾವಳಿ ಏರ್ಪಡಿಸಲಾಗಿತ್ತು. ಸುಂದರ ಹೂದೋಟದಲ್ಲಿ ಸಿದ್ಧಪಡಿಸಿದ್ದ ಕೆಮ್ಮಣ್ಣಿನ ಅಖಾಡದಲ್ಲಿ ಮೈಸೂರು, ಮಂಡ್ಯ, ಬೆಳಗಾವಿ ಸೇರಿದಂತೆ ವಿವಿಧೆಡೆಯಿಂದ ಆಗಮಿಸಿದ್ದ 13 ಜೋಡಿ ಪೈಲ್ವಾನರು ಸೆಣಸಾಡಿದರು.

**ಸಾಂಸ್ಕೃತಿಕ ಸೊಬಗು:** ಫಲಪುಷ್ಪ ಪ್ರದರ್ಶನದ ಅಂಗವಾಗಿ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದ್ದು, ದೀಪಾಲಂಕಾರದಿಂದ ಕಂಗೊಳಿಸುತ್ತಿದ್ದ ಅರಮನೆ ಅಂಗಳದ ಭವ್ಯ ವೇದಿಕೆಯಲ್ಲಿ ದೀಪ ಬೆಳಗುವ ಮೂಲಕ ಗಣ್ಯರು ಉದ್ಘಾಟಿಸಿದರು. ಬಳಿಕ ಮೊದಲ ಗಾಯಕ ಮಧುಬಾಲಕೃಷ್ಣನ್ ಹಾಗೂ ತಂಡದವರು 'ಸಂಗೀತ ರಸಸಂಜೆ' ನಡೆಸಿಕೊಟ್ಟರು. ನೆರೆದಿದ್ದ ಸಾವಿರಾರು ಮಂದಿ ಸುಮಧುರ ಸಂಗೀತವನ್ನು ಆಸ್ವಾಧಿಸಿ, ಆನಂದಿಸಿದರು. ಭಾನುವಾರ ಸಂಜೆ 6ರಿಂದ ರಾತ್ರಿ 9.30ರವರೆಗೆ ಖ್ಯಾತ ಗಾಯಕ ವಿಜಯ ಪ್ರಕಾಶ್ ಸಂಗೀತ ಸಂಜೆ ನಡೆಸಿಕೊಡಲಿದ್ದಾರೆ.

**ಸೊಬಗು ಸವಿದ ಗಣ್ಯರು:** ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರೊಂದಿಗೆ ಶಾಸಕರಾದ ಜಿ.ಟಿ.ದೇವೇಗೌಡರು, ಟಿ.ಎಸ್.ಶ್ರೀವತ್ಸ ಕೆ.ಹರೀಶ್‌ಗೌಡ, ವಿಧಾನ ಪರಿಷತ್ ಸದಸ್ಯರಾದ ಡಾ.ಡಿ.ತಿಮ್ಮಯ್ಯ, ಸಿ.ಎನ್.ಮಂಜೇಗೌಡ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜು, ಜಿಪಂ ಸಿಇಓ ಕೆ.ಎಂ.ಗಾಯತ್ರಿ, ನಗರ ಪೊಲೀಸ್ ಆಯುಕ್ತೆ ಸೀಮಾ ಲಾಟ್ಕರ್, ಪ್ರವಾಸೋದ್ಯಮ ಇಲಾಖೆ ಜಂಟಿ ನಿರ್ದೇಶಕಿ ಎಂ.ಕೆ.ಸವಿತಾ, ಮೈಸೂರು ಅರಮನೆ ಮಂಡಳಿಯ ಉಪ ನಿರ್ದೇಶಕ ಟಿ.ಎಸ್. ಸುಬ್ರಮಣ್ಯ, ಪುರಾತತ್ವ ಇಲಾಖೆ ಆಯುಕ್ತ ದೇವರಾಜು ಮತ್ತಿತರ ಗಣ್ಯರು ಪುಷ್ಪಕಾಶಿಯನ್ನು ಸುತ್ತುಹಾಕಿ ಕಣ್ತುಂಬಿಕೊಂಡರು.



ನಾಡಕುಸ್ತಿ ಪಂದ್ಯಾವಳಿಯಲ್ಲಿ ಮಹಿಳಾ ಕುಸ್ತಿಪಟುಗಳ ಹುರಿದುಂಬಿಸಿದ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್. ಶಾಸಕ ಕೆ.ಹರೀಶ್‌ಗೌಡರು, ಪೈ.ಮಹದೇವು ಮತ್ತಿತರರು ಚಿತ್ರದಲ್ಲಿದ್ದಾರೆ.

## ರವಿ ನಿಂದನಾತ್ಮಕ ಹೇಳಿಕೆ; ಆತ್ಮಸಾಕ್ಷಿಯೇ ನ್ಯಾಯ ನೀಡುತ್ತದೆ...

### ● ಡಿಸಿಎಂ ಡಿ.ಕೆ.ಶಿವಕುಮಾರ್ ನೀತಿ ಪಾಠ ● ಮಹಿಳೆಯರ ಕುರಿತ ಹೀನ ಮಾತುಗಳು ಬಿಜೆಪಿ ಸಂಸ್ಕೃತಿ ಹೇಳುತ್ತೆ



ಬೆಂಗಳೂರು, ಡಿ.21(ಕೆಎಂಶಿ)–ಮಹಿಳೆಯರಿಗೆ ಅಪಮಾನ, ಹೀನ ಮಾತುಗಳೇ ತಮ್ಮ ಸಂಸ್ಕೃತಿ ಎಂಬುದಾಗಿ ಬಿಜೆಪಿ ಒಪ್ಪಿಕೊಳ್ಳಲಿ. ನಾವು ತಕರಾರು ಮಾಡುವುದಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸಿ.ಟಿ.ರವಿ ಕೇವಲ ಲಕ್ಷ್ಮಿ ಹೆಬ್ಬಾಳ್ಕರ್ ಅವರ ಬಗ್ಗೆ ಮಾತ್ರ ಮಾತನಾಡಿಲ್ಲ, ಸಿದ್ದರಾಮಯ್ಯ ಅವರ ಬಗ್ಗೆಯೂ ಹೀನ ಮಾತು ಆಡಿದ್ದಾರೆ, ಸದನದಲ್ಲಿ ನಿತ್ಯ ಸುಮಂಗಲಿ ಎಂಬ ಪದ ಬಳಕೆ ಮಾಡಿದ್ದಾರೆ. ಅವರ ಮಾತುಗಳು ಸರಿಯೋ, ತಪ್ಪೋ ಬಿಜೆಪಿ ನಾಯಕರು ಆತ್ಮಾವಲೋಕನ ಮಾಡಿಕೊಳ್ಳಲಿ ಎಂದರು.

ಚಿಕ್ಕಮಗಳೂರು ಜನ ಎಂದರೆ ಸುಸಂಸ್ಕೃತ ಜನ, ಅಂತಹವರ ನಡುವಿನಿಂದ ಇಂತಹ ವ್ಯಕ್ತಿ ಬಂದಿರುವುದು ದುರಂತ. ನಮ್ಮ ಪಕ್ಷದ ಯಾವುದೇ ನಾಯಕರು ಈ ರೀತಿ ಮಾತನಾಡಿದ್ದರೆ ನಾನು ಖಂಡಿಸುತ್ತಿದ್ದೆ. ಬಿಜೆಪಿ ನಾಯಕರು ತಮ್ಮ ಪಕ್ಷದ ನಾಯಕರ ರಕ್ಷಣೆಗೆ ನಿಂತಿದ್ದಾರೆ. ಮುನಿರತ್ನ ಪ್ರಕರಣದಲ್ಲಿ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ್. ಎಫ್‌ಎಸ್‌ಎಲ್ ವರದಿಯಲ್ಲಿ ಸತ್ಯಾಂಶ ಬಂದ ನಂತರ ಪಕ್ಷದಿಂದ ಹೊರಹಾಕುವುದಾಗಿ ಹೇಳಿದ್ದರು.

ಈ ಪ್ರಕರಣದಲ್ಲಿ ಅವರು ಒಂದು ಭಾಗವಾಗಿದ್ದರೂ ಆತನನ್ನು ಸಮರ್ಥಿಸಿಕೊಳ್ಳುತ್ತಿದ್ದಾರೆ. ಇದೇ ಅವರ ನಾಯಕತ್ವ, ಅವರ ಮುತ್ತು ರತ್ನಗಳನ್ನು ಅವರೇ ಇಟ್ಟುಕೊಳ್ಳಲಿ. ಅವರ ಮನೆಯಲ್ಲಿ ಏನಾದರೂ ನಾನೇ ಕಾರಣ, ಅವರ ಪಕ್ಷದಲ್ಲಿ ಏನಾದರೂ ನಾನೇ ಕಾರಣ, ಹೊರಗಡೆ ಏನಾದರೂ ನಾನೇ ಕಾರಣ, ನನ್ನ ಸ್ಮರಿಸದಿದ್ದರೆ ಅವರಿಗೆ ನಿದ್ದೆ ಬರುವುದಿಲ್ಲ.

ನಿಂದನಾತ್ಮಕ ಮಾತು ಆಡಿಯಾಗಿದೆ, ಈಗ ಸರ್ಕಾರ ಹೇಗೆ ನ್ಯಾಯ ಕೊಡಿಸಲಿದೆ. ಆತ್ಮಸಾಕ್ಷಿಯೇ ನ್ಯಾಯ ನೀಡುತ್ತದೆ ಎಂದರು. ಇದಕ್ಕೆಲ್ಲ ಕೊನೆ ಹಾಡುತ್ತೇವೆ ಎಂಬ ಸಿ.ಟಿ ರವಿ ಹೇಳಿಕೆಗೆ ಪ್ರತಿಕ್ರಿಯಿಸಿ, ಇಂತಹ ಲೆಕ್ಕ ಚುಕ್ತಾಗಳನ್ನು ಬಹಳ ನೋಡಿದ್ದೇವೆ. ಬಹಳ ಸಂತೋಷ, ಅವರೊಬ್ಬರೇ ಲೆಕ್ಕ ಚುಕ್ತಾ ಮಾಡುತ್ತಾರಾ, ಎಲ್ಲರೂ ಅವರವರ ಸಾಮರ್ಥ್ಯಕ್ಕೆ ತಕ್ಕಂತೆ ಲೆಕ್ಕ ಚುಕ್ತಾ ಮಾಡುತ್ತಾರೆ.

ಮಾನ ಹಾನಿಕರ ಪದ ಬಳಕೆ ವಿಚಾರ ಚರ್ಚೆಗೆ ಬದಲು ಬಿಜೆಪಿಯವರು ತಮ್ಮ ಹೇಳಿಕೆ ಮುಚ್ಚಿಕೊಳ್ಳಲು ಪೊಲೀಸರ ಮೇಲೆ ಆರೋಪ ಮಾಡುತ್ತಿದ್ದಾರೆ. ಇವರ ಆಡಳಿತದಲ್ಲಿ ಪೊಲೀಸರನ್ನು ಹೇಗೆ ಬಳಸಿಕೊಂಡಿದ್ದರು ಎಂಬುದು ಗೊತ್ತಿದೆ ಎಂದರು.

## ನಾಳೆ ರಾಷ್ಟ್ರೀಯ ಗಣಿತ ದಿನ ಆಚರಣೆ

ಮೈಸೂರು, ಡಿ.21–ಜಿಲ್ಲಾ ಪಂಚಾಯಿತಿಯ ವತಿಯಿಂದ ಶಾಲಾ ಶಿಕ್ಷಣ ಇಲಾಖೆ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಪರಿಷತ್ ಸಹಯೋಗದೊಂದಿಗೆ ಡಿ.23 ರಂದು ಬೆಳಗ್ಗೆ 9.30 ಗಂಟೆಗೆ ಮೈಸೂರು ಗ್ರಾಮಾಂತರದ ಬೋಗಾದಿ ಸರ್ಕಾರಿ ಪ್ರೌಢಶಾಲೆಯಲ್ಲಿ ರಾಷ್ಟ್ರೀಯ ಗಣಿತ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರು (ಆಡಳಿತ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸಾಮಾನ್ಯ ಜ್ಞಾನ ಸ್ಪರ್ಧೆ: ಬಿವಿಬಿಗೆ ರೋಲಿಂಗ್ ಶೀಲ್ಡ್



ಮೈಸೂರಿನ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ನಡೆದ 51ನೇ ಆವೃತ್ತಿ ವಾರ್ಷಿಕ ಅಂತರ–ಪ್ರೌಢಶಾಲಾ ಸಾಮಾನ್ಯ ಜ್ಞಾನ ಸ್ಪರ್ಧೆಯಲ್ಲಿ ಮೈಸೂರಿನ ಭಾರತೀಯ ವಿದ್ಯಾಭವನ ರೋಲಿಂಗ್ ಶೀಲ್ಡ್ ಗೆದ್ದುಕೊಂಡಿದೆ. ಚಿತ್ರದಲ್ಲಿ (ಎಡದಿಂದ ಬಲಕ್ಕೆ): ಶ್ರೀಮತಿ ಬಿ.ಆರ್.ಚಂಪಕ (ಶಿಕ್ಷಕಿ), ಶ್ರೀಮತಿ ಲೇಖಾ ನಾಯರ್ ಎಸ್.(ಪ್ರಿನ್ಸಿಪಾಲ್), ಡಾ.ಸಿ.ನಾಗಣ್ಣ (ಉಪಾಧ್ಯಕ್ಷರು), ಡಾ. ಕೆ.ಬಿ. ಗಣಪತಿ (ಅಧ್ಯಕ್ಷರು), ಪಿ.ಎಸ್.ಗಣಪತಿ (ಕಾರ್ಯದರ್ಶಿ), ಪ್ರಫುಲ್ಲ ಹೆಚ್.ಎನ್. (ಉಪ ಪ್ರಿನ್ಸಿಪಾಲ್) ಮತ್ತು ಡಿ.ಆರ್. ಶಶಿಕಲಾ (ಶಿಕ್ಷಕಿ) ಅವರನ್ನು ವಿಜೇತ ವಿದ್ಯಾರ್ಥಿಗಳೊಂದಿಗೆ ಕಾಣಬಹುದು.

# ದೇಶ - ವಿದೇಶ

## ರಷ್ಯಾ ಮೇಲೆ ಉಕ್ರೇನ್ ಭಾರೀ ಡ್ರೋನ್ ದಾಳಿ: ಬೆಚ್ಚಿಬಿದ್ದ ಕಜಾನ್ ಜನತೆ



**ಕೀವ್:** ಕ್ಷಿಪಣಿ ದಾಳಿ ನಡೆಸಿದ್ದ ರಷ್ಯಾಗೆ ಡ್ರೋಣ್ ದಾಳಿ ಮೂಲಕ ಉಕ್ರೇನ್ ತಿರುಗೇಟು ನೀಡಿದ್ದು, ರಷ್ಯಾದ ಕಜಾನ್ ಜನತೆ ಬೆಚ್ಚಿ ಬಿದ್ದಿದ್ದಾರೆ.

ಉಕ್ರೇನ್‌ನ 8 ಸ್ಫೋಟಕ ಡ್ರೋನ್‌ಗಳು ರಷ್ಯಾದ ಕಜಾನ್ ನಗರದ ಮೇಲೆ ದಾಳಿ ನಡೆಸಿವೆ. ಇದೇ ನಗರದಲ್ಲಿ ಇತ್ತೀಚೆಗೆ ಬ್ರಿಕ್ಸ್ ರಾಷ್ಟ್ರಗಳ ಶೃಂಗಸಭೆ ನಡೆದಿದ್ದು, ಪ್ರಧಾನಿ ಮೋದಿ ಸೇರಿದಂತೆ ಹಲವು ವಿಶ್ವ ನಾಯಕರು ಆಗಮಿಸಿದ್ದರು. ಘಟನೆಯಲ್ಲಿ ಇಲ್ಲಿಯವರೆಗೆ ಯಾವುದೇ ಸಾವು ನೋವು ಸಂಭವಿಸಿದ ವರದಿಯಾಗಿಲ್ಲ. ಆದರೆ ದಾಳಿಯಲ್ಲಿ 3 ಕಟ್ಟಡಗಳು ಹಾನಿಗೊಳಗಾಗಿದ್ದು, ಜನರನ್ನು ಅಲ್ಲಿಂದ ಸ್ಥಳಾಂತರಿಸಿ ಸುರಕ್ಷಿತ ಸ್ಥಳಕ್ಕೆ ಕರೆದೊಯ್ಯಲಾಗಿದೆ. ಸ್ಥಳೀಯ ಆಡಳಿತವು ಜನರಿಗೆ ಊಟ, ಬಟ್ಟೆಗಳನ್ನು ಒದಗಿಸಿದೆ. ದಾಳಿ ನಂತರ ಕಜನ್ ವಿಮಾನ ನಿಲ್ದಾಣವು ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ. ಇಝೆವ್ಸ್ಕ್ ವಿಮಾನ ನಿಲ್ದಾಣದಲ್ಲಿ ನಿರ್ಬಂಧಗಳನ್ನು ಜಾರಿಗೊಳಿಸಲಾಗಿದೆ ಎಂದು ರಷ್ಯಾದ ವಾಯುಯಾನ ವಾಚ್‌ಡಾಗ್ ರೊಸಾವಿಯಾಟ್ಸಿಯಾ ಹೇಳಿದ್ದಾರೆ. ವೈರಲ್ ಆಗಿರುವ ವಿಡಿಯೋ ಸೆಪ್ಟೆಂಬರ್ 11, 2001ರಂದು ನ್ಯೂಯಾರ್ಕ್‌ನ ವರ್ಲ್ಡ್ ಟ್ರೇಡ್ ಸೆಂಟರ್ ಅವಳಿ ಗೋಪುರಕ್ಕೆ ವಿಮಾನದ ಮೂಲಕ ದಾಳಿ ನಡೆಸಿದ ಘಟನೆಯನ್ನು ಸ್ಮರಿಸುವಂತಿದೆ.

## ಅಸ್ಸಾಂ ಕಾಂಗ್ರೆಸ್ ನಾಯಕನಿಗೆ ಕಚ್ಚಿದ ಪೊಲೀಸ್ ಅಧಿಕಾರಿ!



**ಗುವಾಹಟಿ:** ಕಾಂಗ್ರೆಸ್ ನಾಯಕನೊಬ್ಬನಿಗೆ ಪೊಲೀಸ್ ಅಧಿಕಾರಿಯೊಬ್ಬರು ಕಚ್ಚಿರುವ ಆರೋಪ ಅಸ್ಸಾಂನಲ್ಲಿ ಕೇಳಿಬಂದಿದೆ.

ಬುಧವಾರ ನಡೆದ ರಾಜಭವನ ಚಲೋ ಮೆರವಣಿಗೆ ವೇಳೆ ಪೊಲೀಸರು ಅಶ್ರುವಾಯು ಪ್ರಯೋಗಿಸಿದ ಪರಿಣಾಮ ಅನಾರೋಗ್ಯಕ್ಕೆ ತುತ್ತಾಗಿ ನಿಧನರಾದ ಪಕ್ಷದ ನಾಯಕ ಮೃದುಲ್ ಇಸ್ಲಾಂ ಅವರ ಸಾವಿಗೆ ಪ್ರತಿಯಾಗಿ ಕಾಂಗ್ರೆಸ್ ಪ್ರತಿಭಟನಾ ಮೆರವಣಿಗೆ ಆಯೋಜಿಸಿತ್ತು. ಆಗ ನಮ್ಮನ್ನು ಪೊಲೀಸರು ತಡೆದರು. ತಕ್ಷಣವೇ ಅಸ್ಸಾಂ ಪೊಲೀಸ್ ಸೇವಾ ಅಧಿಕಾರಿಯೊಬ್ಬರು ನನ್ನನ್ನು ಎಳೆದು ನನ್ನ ಭುಜದ ಮೇಲೆ ಕಚ್ಚಿದ ನಾನು ಕೋಟ್ ಹಾಕಿಕೊಂಡಿದ್ದೆ ಎಂದು ಅಶ್ವಿನ್‌ಕುಮಾರ್ ಮಹಾಂತ ಆರೋಪಿಸಿದ್ದಾರೆ. ಅಶ್ವಿನ್‌ಕುಮಾರ್ ಘಟನೆಯನ್ನು ವಿವರಿಸುತ್ತಿರುವ ವೀಡಿಯೊವನ್ನು ಕಾಂಗ್ರೆಸ್ ಹಂಚಿಕೊಂಡಿದೆ. ಆತ ಪೊಲೀಸ್ ಅಧಿಕಾರಿ ತನಗೆ 'ಕಚ್ಚಿದ' ಸ್ಥಳವನ್ನು ನಿಖರವಾಗಿ ತೋರಿಸಿದ್ದು ನ್ಯಾಯಕ್ಕಾಗಿ ಒತ್ತಾಯಿಸಿದ್ದಾರೆ. ನನಗೆ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ. ಆದರೆ ಅವರ ಹೆಸರನ್ನು ನೆನಪಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಮಹಾಂತ ವೀಡಿಯೊದಲ್ಲಿ ಹೇಳಿದ್ದಾರೆ. ಈ ಆರೋಪಕ್ಕೆ ಪೊಲೀಸರು ಇನ್ನೂ ಪ್ರತಿಕ್ರಿಯೆ ನೀಡಿಲ್ಲ. ಪ್ರತಿಕ್ರಿಯೆಗೆ ಹಿರಿಯ ಅಧಿಕಾರಿಗಳು ಸಂಪರ್ಕಕ್ಕೆ ಸಿಗಲಿಲ್ಲ.

## ಜರ್ಮನ್‌ನ ಕ್ರಿಸ್‌ಮಸ್ ಮಾರುಕಟ್ಟೆಗೆ ನುಗ್ಗಿದ ಕಾರು: ಇಬ್ಬರು ಸಾವು



**ಮ್ಯಾಗ್ಡೆಬರ್ಗ್:** ಪೂರ್ವ ಜರ್ಮನಿಯ ಮ್ಯಾಗ್ಡೆಬರ್ಗ್ ನಗರದಲ್ಲಿ ಶುಕ್ರವಾರ ಜನನಿಬಿಡ ಕ್ರಿಸ್‌ಮಸ್ ಮಾರುಕಟ್ಟೆಗೆ ಕಾರೊಂದು ನುಗ್ಗಿ ಇಬ್ಬರು ಮೃತಪಟ್ಟು, ಕನಿಷ್ಠ 60 ಮಂದಿ ಗಾಯಗೊಂಡಿದ್ದಾರೆ, ಇದೊಂದು ಉದ್ದೇಶಪೂರ್ವಕ ದಾಳಿ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ವಾರಾಂತ್ಯ ವ್ಯಾಪಾರಿಗಳಿಂದ ತುಂಬಿ ತುಳುಕುತ್ತಿದ್ದಾಗ, ಕಳೆದ ರಾತ್ರಿ 7 ಗಂಟೆ ಸುಮಾರಿಗೆ ಮಾರುಕಟ್ಟೆಗೆ ಕಾರು ನುಗ್ಗಿದೆ. ಕೂಡಲೇ ಚಾಲಕನನ್ನು ಘಟನಾ ಸ್ಥಳದಲ್ಲಿ ಬಂಧಿಸಲಾಯಿತು. ಘಟನೆಯಲ್ಲಿ 15 ಜನರು ಗಂಭೀರವಾಗಿ ಗಾಯಗೊಂಡಿರುವ ಕಾರಣ ಸಾವಿನ ಸಂಖ್ಯೆ ಇನ್ನೂ ಹೆಚ್ಚಾಗುವ ಸಾಧ್ಯತೆಯಿದೆ. ಕ್ರಿಸ್‌ಮಸ್, ಹೊಸವರ್ಷ ಆಚರಣೆ ದಿನಗಳಲ್ಲಿ ಈ ಹಿಂಸಾಚಾರವು ನಗರ ಜನತೆಯನ್ನು ಬೆಚ್ಚಿಬೀಳಿಸಿದೆ. ಶತಮಾನಗಳ ಹಳೆಯ ಜರ್ಮನ್ ಸಂಪ್ರದಾಯದ ಭಾಗವಾಗಿರುವ ಹಬ್ಬದ ಕಾರ್ಯಕ್ರಮವನ್ನು ಘಟನೆ ಕೊಂದುಹಾಕಿದೆ. ಮುನ್ನೆಚ್ಚರಿಕೆಯಾಗಿ ವಾರಾಂತ್ಯದ ಕ್ರಿಸ್ಮಸ್ ಮಾರುಕಟ್ಟೆಗಳನ್ನು ಜರ್ಮನ್‌ನ ಇತರ ಪಟ್ಟಣಗಳಲ್ಲಿ ಬಂದ್ ಮಾಡಲಾಗಿದೆ. ಶಂಕಿತ ವ್ಯಕ್ತಿ 2006ರಲ್ಲಿ ಜರ್ಮನಿಗೆ ತೆರಳಿದ 50 ವರ್ಷದ ಸೌದಿ ಮೂಲದ ವೈದ್ಯ ಎಂದು ಸ್ಯಾಕ್ಸೋನಿ–ಅನ್ಹಾಲ್ಟ್ ರಾಜ್ಯದ ಆಂತರಿಕ ಸಚಿವ ತಮಾರಾ ಝಿಸ್ಚಾಂಗ್ ತಿಳಿಸಿದರು.

## ಹೆತ್ತವರ ಜೊತೆಗೂಡಿ ಪತ್ನಿ ಗುಪ್ತಾಂಗಕ್ಕೆ ಮೆಣಸಿನಪುಡಿ ಹಾಕಿದ

**ಭೋಪಾಲ್:** ಅಪ್ಪ–ಅಮ್ಮನ ಜತೆ ಸೇರಿಕೊಂಡು ವ್ಯಕ್ತಿಯೊಬ್ಬ ಪತ್ನಿಯ ಗುಪ್ತಾಂಗಕ್ಕೆ ಮೆಣಸಿನಕಾಯಿ ಪುಡಿ, ಕಾದ ಕಬ್ಬಿಣದ ರಾಡ್ ಹಾಕಿ ಚಿತ್ರಹಿಂಸೆ ಕೊಟ್ಟಿರುವ ಘಟನೆ ಮಧ್ಯಪ್ರದೇಶದಲ್ಲಿ ನಡೆದಿದೆ. ರಾಜಗಡದಲ್ಲಿರುವ ತಮ್ಮ ಮನೆಯಲ್ಲಿ ಸೊಸೆಯನ್ನು ಮತ್ತೊಬ್ಬ ವ್ಯಕ್ತಿಯ ಜತೆ ನೋಡಿದ್ದಾಗಿ ಹೇಳಿರುವ ಅತ್ತೆ ಮಾವ ಆಕೆಗೆ ಚಿತ್ರಹಿಂಸೆ ನೀಡಿದ್ದಾರೆ. ಅತ್ತೆ–ಮಾವನ ವಿರುದ್ಧ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಪತಿ, ಅತ್ತಿಗೆ, ಅತ್ತೆ ಮತ್ತು ಮಾವ ಎರಡು ಗಂಟೆಗಳ ಕಾಲ ಚಿತ್ರಹಿಂಸೆ ನೀಡಿದ್ದಾರೆ ಎಂದು ಆಕೆ ಆರೋಪಿಸಿದ್ದಾರೆ. ಆಕೆಯನ್ನು ಬೆತ್ತಲು ಮಾಡಿ ಆಕೆಯ ಗುಪ್ತಾಂಗಕ್ಕೆ ಖಾರದಪುಡಿ ಹಾಕಿದ್ದರು. ಸಂತ್ರಸ್ತೆಯ ಖಾಸಗಿ ಭಾಗಗಳು, ತೊಡೆಗಳು ಮತ್ತು ದೇಹದ ಇತರ ಭಾಗಗಳಿಗೆ ಅತ್ತೆ ಕಾದ ಕಬ್ಬಿಣದ ರಾಡ್‌ನಿಂದ ಸುಟ್ಟು ಹಾಕಿದ್ದಾರೆ, ಮಾವ ಆಕೆಯ ಖಾಸಗಿ ಭಾಗಗಳಿಗೆ ಮೆಣಸಿನ ಪುಡಿ ಹಾಕಿದ್ದಾರೆ. ಪತಿ ಮತ್ತು ಮಾವ ಸಂತ್ರಸ್ತೆಯನ್ನು ಬೈಕ್‌ನಲ್ಲಿ ಕರೆದೊಯ್ದು ಪೊಲೀಸ್ ಠಾಣೆ ಬಳಿ ಬಿಟ್ಟು ಹೋಗಿದ್ದಾರೆ. ರೋಹಿತ್ ರುಹೇಲಾ ಎಂಬ ವ್ಯಕ್ತಿ ಮಹಿಳೆಯ ಮನೆಗೆ ಬಂದು ಸ್ಟೀಮ್ ಯಂತ್ರ ಕೇಳಿದ್ದಾನೆ. ಸಂತ್ರಸ್ತೆ ಗೇಟ್ ಬಳಿ ಕಾಯಲು ಹೇಳಿದಾಗ ಅವನು ಬಾಗಿಲು ಮುಚ್ಚಿ, ಅವಳ ಕೋಣೆಗೆ ಪ್ರವೇಶಿಸಿ ಕಿರುಕುಳ ನೀಡಲು ಪ್ರಯತ್ನಿಸಿದ್ದ. ಈ ವೇಳೆ ಆಕೆಯ ಅತ್ತಿಗೆ ಕೊಠಡಿ ಪ್ರವೇಶಿಸಿದ್ದು, ಆರೋಪಿ ಪರಾರಿಯಾಗಿದ್ದಾನೆ

## ಬಾಂಗ್ಲಾದೇಶದಲ್ಲಿ ಮತ್ತೇ ಮೂರು ದೇವಾಲಯಗಳ ವಿಗ್ರಹಗಳು ಧ್ವಂಸ

**ಢಾಕಾ:** ಬಾಂಗ್ಲಾದೇಶದ ಮೈಮೆನ್‌ಸಿಂಗ್ ಮತ್ತು ದಿನಾಜ್‌ಪುರದಲ್ಲಿ ಮೂರು ಹಿಂದೂ ದೇವಾಲಯಗಳಲ್ಲಿ ಎಂಟು ವಿಗ್ರಹಗಳನ್ನು ಧ್ವಂಸಗೊಳಿಸಿದ್ದಾರೆ ಎಂದು ಮಾಧ್ಯಮವೊಂದು ವರದಿ ಮಾಡಿದೆ. ಮೈಮೆನ್‌ಸಿಂಗ್‌ನ ಹಲುಘಾಟ್ ಉಪಜಿಲ್ಲೆಯಲ್ಲಿ ಗುರುವಾರ ಮತ್ತು ಶುಕ್ರವಾರ ಎರಡು ದೇವಾಲಯಗಳ ಮೂರು ವಿಗ್ರಹಗಳನ್ನು ಧ್ವಂಸಗೊಳಿಸಲಾಗಿದೆ. ದೇವಸ್ಥಾನದ ಮೂಲಗಳು ಮತ್ತು ಸ್ಥಳೀಯರನ್ನು ಉಲ್ಲೇಖಿಸಿ, ಹಲುಘಾಟ್ ಪೊಲೀಸ್ ಠಾಣೆಯ ಅಧಿಕಾರಿ ಅಬುಲ್ ಖಯೇರ್ ಅವರು ಶುಕ್ರವಾರ ಮುಂಜಾನೆ ಹಲುಘಾಟ್‌ನ ಶಾಕುವಾಯ್ ಯೂನಿಯನ್‌ನಲ್ಲಿರುವ ಬೋಂಡರ್‌ಪಾರಾ ದೇವಾಲಯದ ಎರಡು ವಿಗ್ರಹಗಳನ್ನು ದುಷ್ಕರ್ಮಿಗಳು ಧ್ವಂಸ ಮಾಡಿದ್ದಾರೆ ಎಂದು ಹೇಳಿದ್ದಾರೆ. ಘಟನೆಗೆ ಸಂಬಂಧಿಸಿದಂತೆ ಯಾವುದೇ ಪ್ರಕರಣ ದಾಖಲಾಗಿಲ್ಲ ಮತ್ತು ಈ ಸಂಬಂಧ ಇನ್ನೂ ಯಾರನ್ನೂ ಬಂಧಿಸಲಾಗಿಲ್ಲ ಎಂದು ಖಯೇರ್ ಹೇಳಿದ್ದಾರೆ.

ಮತ್ತೊಂದು ಘಟನೆಯಲ್ಲಿ, ಗುರುವಾರ ಮುಂಜಾನೆ ಹಲುಘಾಟ್‌ನ ಬೀಲ್‌ದೊರಾ ಯೂನಿಯನ್‌ನಲ್ಲಿರುವ ಪೊಲಾಷ್‌ಕಂಡ ಕಾಳಿ ದೇವಸ್ಥಾನದಲ್ಲಿ ದುಷ್ಕರ್ಮಿಗಳು ವಿಗ್ರಹವನ್ನು ನಾಶಪಡಿಸಿದ್ದಾರೆ. ಘಟನೆ ಸಂಬಂಧ ಪೋಲಷ್ಕಂಡ ಗ್ರಾಮದ 27 ವರ್ಷದ ಯುವಕನನ್ನು ಪೊಲೀಸರು ಬಂಧಿಸಿ, ನ್ಯಾಯಾಲಯದ ಮುಂದೆ ಹಾಜರುಪಡಿಸಲಾಗಿದೆ ಎಂದು ಒಸು ಅದು ಅವರನ್ನು ಜೈಲಿಗೆ ಕಳುಹಿಸಿದೆ ಎಂದು ಹೇಳಿದರು.

ಮೂರನೇ ಪುಟದಿಂದ

## ಐವರ ದುರ್ಮರಣ

ಸ್ಕೂಟರ್‌ನಲ್ಲಿ ಡ್ರಾಪ್ ಮಾಡಲೆಂದು ಪಾಂಡವಪುರಕ್ಕೆ ತೆರಳುತ್ತಿದ್ದ ಸಂದರ್ಭದಲ್ಲಿ ಮಹದೇಶ್ವರಪುರ ಗೇಟ್ ಬಳಿ ನಾಗಮಂಗಲ ಕಡೆಯಿಂದ ವೇಗವಾಗಿ ಬಂದ ಈರುಳ್ಳಿ ತುಂಬಿದ್ದ ಲಾರಿ ಡಿಕ್ಕಿ ಹೊಡೆದಿದೆ. ಪರಿಣಾಮ ಸ್ಕೂಟರ್‌ನಲ್ಲಿ ತೆರಳುತ್ತಿದ್ದ ಶಿಲ್ಪಶ್ರೀ ಹಾಗೂ ಸಂಧ್ಯಾ ಅವರು ಸ್ಥಳದಲ್ಲಿಯೇ ಮೃಪಟ್ಟಿದ್ದಾರೆ. ಸಂಧ್ಯಾ ಅವರ ತಾಯಿ ಶೈಲಜಾ ಗಂಭೀರವಾಗಿ ಗಾಯಗೊಂಡಿದ್ದಾರೆ. ಗಾಯಾಳು ಶೈಲಜಾ ಅವರನ್ನು ಪಾಂಡವಪುರ ಸಾರ್ವಜನಿಕ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗೆ ಮೈಸೂರಿಗೆ ರವಾನಿಸಿದ್ದಾರೆ. ಮೃತ ಶಿಲ್ಪಶ್ರೀಗೆ ಇಬ್ಬರು ಮಕ್ಕಳಿದ್ದು, ಮೃತ ಯುವತಿ ಸಂಧ್ಯಾ ದ್ವಿತೀಯ ಪಿಯುಸಿ ಓದುತ್ತಿದ್ದಳು. ವಿಷಯ ತಿಳಿದು ಡಿವೈಎಸ್ಪಿ ಮುರುಳಿ, ಪಿಎಸ್ಐ ಪ್ರಮೋದ್ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿದ್ದಾರೆ. ಪಟ್ಟಣದ ಸಾರ್ವಜನಿಕ ಆಸ್ಪತ್ರೆಯ ಶವಗಾರದ ಎದುರು ಮೃತರ ಸಂಬಂಧಿಕರ ಆಕ್ರಂದನ ಮುಗಿಲು ಮುಟ್ಟಿತ್ತು. ಸ್ಥಳಕ್ಕೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಹಾಗೂ ಶಾಸಕ ದರ್ಶನ್ ಪುಟ್ಟಣ್ಣಯ್ಯ ಭೇಟಿ ನೀಡಿ ಮೃತರ ಕುಟುಂಬಸ್ಥರಿಗೆ ಸಾಂತ್ವನ ಹೇಳಿದರು. ಘಟನಾ ಸಂಬಂಧ ಮೇಲುಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಮನೆ ಯಜಮಾನನ ಭೀಕರ ಹತ್ಯೆ

'ನಿಮ್ಮ ಮನೆಯಿಂದಲೇ ಮರ ಕತ್ತರಿಸುವ ಗರಗಸಕ್ಕೆ ಆರ್ಡರ್ ಮಾಡಲಾಗಿದೆ... ತೆಗೆದುಕೊಳ್ಳಿ' ಎಂದು ಹೇಳಿದ್ದಾನೆ. ಯಶೋಧಮ್ಮನವರು ನಮ್ಮ ಮನೆಯಿಂದ ಆರ್ಡರ್ ಮಾಡಿಲ್ಲ ಎಂದು ಹೇಳುತ್ತಿದ್ದಂತೆಯೇ ಆತ ಮನೆಯ ಗೇಟ್ ಕಡೆಗೆ ಹೋಗಿದ್ದಾನೆ. ಆತನನ್ನು ಯಶೋಧಮ್ಮ ಹಿಂಬಾಲಿಸಿದ್ದಾರೆ (ಬಹುಶಃ ಆತ ಹೋದ ನಂತರ ಗೇಟ್ ಚಿಲಕ ಹಾಕೋಣ ಎಂಬ ದೃಷ್ಟಿಯಿಂದ ಅವರು ಹಿಂಬಾಲಿಸಿರಬಹುದು.) ಆದರೆ ಈ ಅಪರಿಚಿತ ಹಠಾತ್ತನೆ ಯಾಂತ್ರಿಕ ಗರಗಸವನ್ನು ಆನ್ ಮಾಡಿ, ಅದನ್ನು ಯಶೋಧಮ್ಮನವರ ಕತ್ತಿನ ಕಡೆಗೆ ತಂದಿದ್ದಾನೆ. ಗರಗಸ ಅವರ ಕೆನ್ನೆಗೆ ತಾಗಿ ರಕ್ತ ಚಿಮ್ಮುತ್ತಿದ್ದಂತೆ ಯಶೋಧಮ್ಮ ಪ್ರಜ್ಞೆ ತಪ್ಪಿ ಬಿದ್ದಿದ್ದಾರೆ.

ಅವರನ್ನು ಹಾಗೇ ಬಿಟ್ಟು ಮನೆ ಒಳಗೆ ಹೋದ ಹಂತಕ, ಪಾರ್ಶ್ವವಾಯು ಪೀಡಿತರಾಗಿ ಹಾಸಿಗೆ ಹಿಡಿದಿದ್ದ ಯಶೋಧಮ್ಮನವರ ಪತಿ ರಮೇಶ್ ಅವರನ್ನು ಗರಗಸದಿಂದ ಕೈ, ಕಾಲು, ತಲೆ ಕತ್ತರಿಸಿ ಭೀಕರವಾಗಿ ಹತ್ಯೆಗೈದಿದ್ದಾನೆ. ಅಷ್ಟರಲ್ಲೇ ಪ್ರಜ್ಞೆ ಮರಳಿದ ಯಶೋಧಮ್ಮ ಮನೆ ಒಳಗೆ ನೋಡಲಾಗಿ ಆತನ ಕ್ರೌರ್ಯ ಕಂಡು ಬಂದಿದೆ. ಕೆನ್ನೆಯಲ್ಲಿ ರಕ್ತ ಹರಿಯುತ್ತಿದ್ದರೂ ಸಮಯ ಪ್ರಜ್ಞೆ ಮೆರೆದ ಅವರು ಮನೆ ಬಾಗಿಲನ್ನು ಹೊರಗಿನಿಂದ ಚಿಲಕ ಹಾಕಿ ಅಕ್ಕಪಕ್ಕದ ಮನೆಯವರಿಗೆ ವಿಷಯ ತಿಳಿಸಿದ ಹಿನ್ನೆಲೆಯಲ್ಲಿ ಗ್ರಾಮಸ್ಥರು ತೋಟದ ಮನೆ ಮುಂದೆ ಗುಂಪುಗೂಡಿದ್ದಾರೆ. ಮನೆಯೊಳಗಿನ ಭೀಕರ ದೃಶ್ಯವನ್ನು ಕಂಡು ರೊಚ್ಚಿಗೆದ್ದ ಗ್ರಾಮಸ್ಥರು ಹಂತಕನಿಗೆ ಹಿಗ್ಗಾಮುಗ್ಗಾ ಥಳಿಸಿದ್ದಾರೆ. ಮಾಹಿತಿ ಪಡೆದ ಶ್ರೀರಂಗಪಟ್ಟಣ ಗ್ರಾಮಾಂತರ ಠಾಣೆಯ ಇನ್ಸ್‌ಪೆಕ್ಟರ್ ಬಿ.ಜಿ.ಕುಮಾರ್ ಅವರು ಸಿಬ್ಬಂದಿಯೊಂದಿಗೆ ಸ್ಥಳಕ್ಕೆ ತೆರಳಿ, ಗ್ರಾಮಸ್ಥರ ಹಲ್ಲೆಯಿಂದ ಗಾಯಗೊಂಡಿದ್ದ ಹಂತಕನನ್ನು ಬಂಧಿಸಿ, ಶ್ರೀರಂಗಪಟ್ಟಣ ಸಾರ್ವಜನಿಕ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದೊಯ್ದರು. ಗರಗಸದ ಏಟಿನಿಂದ ತೀವ್ರವಾಗಿ ಗಾಯಗೊಂಡಿರುವ ಯಶೋಧಮ್ಮ ಅವರನ್ನು ಮೈಸೂರಿನ ಆಸ್ಪತ್ರೆಗೆ ದಾಖಲಿಸಲಾಗಿದೆ. ಹಂತಕ ಯಶೋಧಮ್ಮನವರ ಮನೆಗೆ ಬಂದಿರುವುದು ಹಾಗೂ ಅವರೊಂದಿಗೆ ಮಾತನಾಡುತ್ತಿರುವ ದೃಶ್ಯ ಮನೆಯ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ. ಕ್ಯಾತನಹಳ್ಳಿ ಗ್ರಾಮ ಪಾಂಡವಪುರ ತಾಲೂಕಿಗೆ ಸೇರಿದೆಯಾದರೂ, ಅದು ಶ್ರೀರಂಗಪಟ್ಟಣ ಗ್ರಾಮಾಂತರ ಠಾಣಾ ವ್ಯಾಪ್ತಿಗೆ ಒಳಪಡುತ್ತದೆ. ಈ ಹಂತಕ ಯಾರು? ಯಾವ ಉದ್ದೇಶಕ್ಕಾಗಿ ಇಂತಹ ಕ್ರೌರ್ಯ ಮೆರೆದಿದ್ದಾನೆ? ಎಂಬುದರ ಬಗ್ಗೆ ಪೊಲೀಸರ ತನಿಖೆಯಿಂದ ಗೊತ್ತಾಗಬೇಕಾಗಿದೆ.

## ಅಸ್ಪೃಶ್ಯತೆಯಿಂದ ನೋಡಬೇಡಿ

ಜೊತೆಗೆ ರಾಜಕಾರಣಿಗಳು ಸಾಹಿತಿಯಾಗಿ ಕೃತಿ ರಚಿಸಿದರೆ ಮೂಲ ಸಾಹಿತಿಗಳು ಅದನ್ನು ಒಪ್ಪುವುದಿಲ್ಲ. ಹಾಗಾಗಿ ರಾಜಕಾರಣಿಗಳು ಸಾಹಿತಿಗಳಾಗಲು ಪ್ರೋತ್ಸಾಹದ ಅವಶ್ಯಕತೆ ಇದೆ ಎಂದು ಅಭಿಪ್ರಾಯಪಟ್ಟರು. ವಿಧಾನಸಭೆ, ವಿಧಾನಪರಿಷತ್‌ನಲ್ಲಿ ವಾಕ್ಚಾತುರ್ಯವುಳ್ಳ ರಾಜಕೀಯ ಮುಖಂಡರು ಮಾತನಾಡುವುದನ್ನು ಸಾಹಿತ್ಯಿಕವಾಗಿ ಮೇಲೆತ್ತಬೇಕು. ಅವುಗಳನ್ನು ಪುಸ್ತಕಗಳ ರೂಪದಲ್ಲಿ ಹೊರತರುವ ಕೆಲಸಗಳಾಗಬೇಕು. ಇಂದಿರಾಗಾಂಧಿ ಸದನದಲ್ಲಿ ಮಾತನಾಡಿದ ಒಂದು ಪ್ರಮುಖ ಅಂಶ ಪುಸ್ತಕ ರೂಪದಲ್ಲಿ ಹೊರಬಂದಿದೆ. ಇದು ನಮ್ಮಲ್ಲೂ ಆಗಬೇಕು ಎಂದು ಅವರು ಹೇಳಿದರು.

ರಾಜಕೀಯದಿಂದ ಸಾಹಿತ್ಯವನ್ನು ಬೇರ್ಪಡಿಸುವ ಕೆಲಸವಾಗಬಾರದು. ಹಾಗೆಯೇ ಪತ್ರಕರ್ತರು ಸಹ ಜನರ ಧ್ವನಿಯಾಗಿ ಕೆಲಸ ಮಾಡಬೇಕು. ರಾಜಕಾರಣಿಗಳನ್ನು ಪ್ರತಿಪಕ್ಷದವರಂತೆ ಬರವಣಿಗೆ ಮೂಲಕ ಸದಾ ಎಚ್ಚರಿಸಬೇಕು ಎಂದು ತಿಳಿಸಿದರು.

ಮಾಜಿ ಶಾಸಕ ಡಾ.ಕೆ.ಅನ್ನದಾನಿ ಮಾತನಾಡಿ, ಸಾಹಿತ್ಯ- ರಾಜಕೀಯ ಹಾಲು ಜೇನಿನಂತಿದೆ. ಸಾಹಿತ್ಯವಿಲ್ಲದೇ ರಾಜಕೀಯವಿಲ್ಲ, ರಾಜಕೀಯವಿಲ್ಲದೇ ಸಾಹಿತ್ಯವಿಲ್ಲದಂತಾಗಿದೆ. ಹಾಗಾಗಿ ರಾಜಕೀಯ ಸಮಾಜದಲ್ಲಿ ಹಾಸುಹೊಕ್ಕಾಗಿದೆ. ರಾಜಕೀಯ ಇಲ್ಲದೇ ಏನು ಮಾಡಲು ಆಗುವುದಿಲ್ಲ. ಸಂವಿಧಾನ ಜಾರಿಗೆ ಬಂದ ಮೇಲೆ ರಾಜಕೀಯದಲ್ಲಿ ಎಲ್ಲರಿಗೂ ಅಧಿಕಾರ ಸಿಗಲು ಸಾಧ್ಯವಾಯಿತು ಎಂದು ಹೇಳಿದರು.

ಬಸವಣ್ಣ ಸಹ ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಯಾಗಿ ಕೆಲಸ ಮಾಡುತ್ತಾ ಸಮಾಜ ಸುಧಾರಣೆಗಾಗಿ ಅನುಭವ ಮಂಟಪ ಸ್ಥಾಪನೆ ಮಾಡಿ, ದೇಶದ ಮೊದಲ ಸಂಸತ್‌ನ್ನಾಗಿ ಅನುಭವ ಮಂಟಪವನ್ನು ಧಾರೆಯೆರೆದರು. ದೇಶದಲ್ಲಿ ತಾರತಮ್ಯ, ಕಂದಾಚಾರ ಹೋಗಲಾಡಿಸಲು ಅಂದಿನ ಕಾಲದಲ್ಲೇ ತನ್ನ ವಚನ ಸಾಹಿತ್ಯದ ಮೂಲಕ ಹೋರಾಟ ನಡೆಸಿದ ಕೀರ್ತಿ ಬಸವಣ್ಣನಿಗೆ ಸಲ್ಲುತ್ತದೆ ಎಂದರು. ಅನೇಕ ರಾಜಕಾರಣಿಗಳು ಸಹ ಸಾಹಿತ್ಯ ಕ್ಷೇತ್ರದಲ್ಲಿ ಗಮನ ಸೆಳೆದಿದ್ದಾರೆ. ಈ ಪೈಕಿ ಅಗ್ರಗಣ್ಯರೆಂದರೆ ಅದು ನಿತ್ಯ ಸಚಿವ ಕೆ.ವಿ.ಶಂಕರಗೌಡ. ಗೌಡರು ಶಿಕ್ಷಕರಾಗಿ, ಬರಹಗಾರರಾಗಿ, ರಾಜಕೀಯ ವ್ಯಕ್ತಿಯಾಗಿ ಮಾಡದ ಸಾಧನೆಗಳಿಲ್ಲ. ಅವರು ನಮಗೆಲ್ಲರಿಗೂ ಪ್ರೇರಕ ಎಂದು ಪ್ರಶಂಸಿಸಿದರು. ವಿಧಾನಪರಿಷತ್ ಮಾಜಿ ಸಭಾಪತಿ ಬಿ.ಎಲ್.ಶಂಕರ್ ಮಾತನಾಡಿ, ಸಮಾಜದಲ್ಲಿ ರಾಜಕಾರಣ ಬೇರೆ, ಸಾಹಿತ್ಯ ಬೇರೆ ಎಂದು ಪರಿಗಣಿಸಲು ಸಾಧ್ಯವಿಲ್ಲ. ಮನುಷ್ಯ ಮೂಲತ: ರಾಜಕೀಯ ಜೀವಿ ಎಂದು ತತ್ವಜ್ಞಾನಿ ಅರಿಸ್ಟಾಟಲ್ ವಿಶ್ಲೇಷಿಸಿದ್ದಾನೆ. ಕೌಟಿಲ್ಯನ ಅರ್ಥಶಾಸ್ತ್ರ ರಾಜಕಾರಣಿಗೆ ಮಾದರಿಯಾಗಿದ್ದು, ಅರ್ಥಶಾಸ್ತ್ರವು ರಾಜನೀತಿಯನ್ನು ಅಚ್ಚುಕಟ್ಟಾಗಿ ಇಂದಿನ ರಾಜಕಾರಣಿಗಳಿಗೆ ನಿರೂಪಣೆ ಮಾಡಿದೆ ಎಂದರು.

ರೈತರು, ಕನ್ನಡಪರರು, ಕಾರ್ಮಿಕರು, ದಲಿತರು, ವಿದ್ಯಾರ್ಥಿ ಚಳವಳಿಯಲ್ಲಿ ಸಾಹಿತ್ಯದ ಪಾತ್ರವಿದೆ. ಗಾಂಧೀಜಿ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಸಾಹಿತ್ಯ ಮತ್ತು ರಾಜಕಾರಣದ ಮೇಲೆ ದೊಡ್ಡ ಪ್ರಭಾವ ಬೀರಿದ ವ್ಯಕ್ತಿಗಳಾಗಿದ್ದಾರೆ. ಜೊತೆಗೆ ಇವರು ಸಾಹಿತಿಗಳು ಮತ್ತು ರಾಜಕಾರಣಿಗಳಿಗೆ ಪ್ರೇರಣಾ ಶಕ್ತಿಯಾಗಿದ್ದಾರೆ. ಅವರ ವಿಚಾರಧಾರೆಗಳನ್ನು ನಾವು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕು. ದೇಶದ ಮಹಾನ್ ರಾಜಕಾರಣಿಗಳಾದ ವಾಜಪೇಯಿ, ವೀರಪ್ಪಮೊಯ್ಲಿ, ಶಶಿ ತರೂರ್ ಸೇರಿದಂತೆ ಹಲವರು ರಾಜಕಾರಣದ ಜತೆಗೆ ಸಾಹಿತ್ಯವನ್ನು ಮೈಗೂಡಿಸಿಕೊಂಡವರು. ಹೀಗೆ ರಾಜಕಾರಣಿಗಳು ಸಹ ಸಾಹಿತ್ಯಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ ಎಂದು ಹೇಳಿದರು. ವೇದಿಕೆಯಲ್ಲಿ ಸಮ್ಮೇಳನಾಧ್ಯಕ್ಷ ಗೊ.ರು.ಚನ್ನಬಸಪ್ಪ, ಕೇಂದ್ರ ಕಸಾಪ ಅಧ್ಯಕ್ಷ ಡಾ. ಮಹೇಶ್ ಜೋಷಿ, ರಾಜಕೀಯ ವಿಶ್ಲೇಷಕ ರವೀಂದ್ರ ರೇಷ್ಮೆ, ವಿಧಾನಪರಿಷತ್ ಸದಸ್ಯೆ ಉಮಾಶ್ರೀ, ಮಾಜಿ ಶಾಸಕ ಡಿ.ಆರ್.ಪಾಟೀಲ್, ಜಿಲ್ಲಾಧಿಕಾರಿ ಡಾ. ಕುಮಾರ, ಜಿ.ಪಂ. ಸಿಇಓ ಶೇಕ್ ತನ್ವೀರ್ ಆಸೀಫ್, ಅಪರ ಜಿಲ್ಲಾಧಿಕಾರಿ ಬಿ.ಸಿ. ಶಿವಾನಂದಮೂರ್ತಿ ಉಪಸ್ಥಿತರಿದ್ದರು.

## ಇಂದು ಮಂಡ್ಯದ ಅಕ್ಷರ ಜಾತ್ರೆಗೆ ತೆರೆ

ಸನ್ಮಾನಿಸಲಿದ್ದಾರೆ. ಮಧ್ಯಾಹ್ನ 3:30 ರಿಂದ 4:30 ಗಂಟೆಯವರೆಗೆ ಬಹಿರಂಗ ಅಧಿವೇಶನ ನಡೆಯಲಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಾಡೋಜ ಡಾ.ಮಹೇಶ ಜೋಶಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕೋಶಾಧ್ಯಕ್ಷ ಬಿ.ಎಂ.ಪಟೇಲ್ ಪಾಂಡು ನಿರ್ಣಯ ಮಂಡನೆ ಮಾಡಲಿದ್ದಾರೆ.

**ಸಮಾರೋಪ ಸಮಾರಂಭ:** ಭಾನುವಾರ ಸಂಜೆ ಸಂಜೆ 4:30 ರಿಂದ 7:30 ಗಂಟೆಯವರೆಗೆ ಸಾಹಿತ್ಯ ಸಮ್ಮೇಳನದ ಸಮರೋಪ ಸಮಾರಂಭ ನಡೆಯಲಿದೆ. ಶ್ರೀ ಕ್ಷೇತ್ರ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷರಾದ ಶ್ರೀ ಡಾ ನಿರ್ಮಲಾನಂದನಾಥ ಮಹಾಸ್ವಾಮೀಜಿ ಅವರು ದಿವ್ಯ ಸಾನಿಧ್ಯ ವಹಿಸಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಘನ ಉಪಸ್ಥಿತಿಯಲ್ಲಿ ನವದೆಹಲಿಯ ಭಾರತ ಲೋಕಪಾಲ್‌ನ ನ್ಯಾಯಾಂಗ ಸದಸ್ಯ ನ್ಯಾಯಮೂರ್ತಿ ಎಲ್.ನಾರಾಯಣ ಸ್ವಾಮಿ, ಕೇಂದ್ರದ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಉಪಮುಖ್ಯಮಂತ್ರಿ ಡಿಕೆ ಶಿವಕುಮಾರ್, ಜಿಲ್ಲಾ ಉಸ್ತುವಾರಿ ಸಚಿವ ಹಾಗೂ ಸಮ್ಮೇಳನ ಸ್ವಾಗತ ಸಮಿತಿಯ ಅಧ್ಯಕ್ಷ ಎನ್. ಚಲುವರಾಯಸ್ವಾಮಿ ಕಾರ್ಯಕ್ರಮದಲ್ಲಿ ಉಪಸ್ಥಿತರಿರುವರು. ಸಮಾರೋಪ ಭಾಷಣಕಾರರಾಗಿ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್ ಹಾಗೂ ಸಮ್ಮೇಳನಾಧ್ಯಕ್ಷ ನಾಡೋಜ ಡಾ.ಗೊ.ರು. ಚನ್ನಬಸಪ್ಪ ಆಗಮಿಸಲಿದ್ದು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನಾಡೋಜ ಡಾ. ಮಹೇಶ ಜೋಶಿ ವಹಿಸಲಿದ್ದಾರೆ.

ಕಾರ್ಯಕ್ರಮಕ್ಕೆ ಗೌರವ ಅತಿಥಿಗಳಾಗಿ ವಿಧಾನ ಪರಿಷತ್ತಿನ ಸಭಾಪತಿ ಬಸವರಾಜ ಹೊರಟ್ಟಿ, ಸಮಾಜ ಕಲ್ಯಾಣ ಸಚಿವ ಹಾಗೂ ಸಮ್ಮೇಳನ ಸ್ವಾಗತ ಸಮಿತಿಯ ಉಪಾಧ್ಯಕ್ಷ ಡಾ.ಹೆಚ್.ಸಿ.ಮಹದೇವಪ್ಪ, ಕನ್ನಡ ಮತ್ತು ಸಂಸ್ಕೃತಿ ಸಚಿವ ಹಾಗೂ ಸಮ್ಮೇಳನ ಸ್ವಾಗತ ಸಮಿತಿಯ ಉಪಾಧ್ಯಕ್ಷ ಶಿವರಾಜ ತಂಗಡಗಿ, ವಿಧಾನ ಪರಿಷತ್ತಿನ ವಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ, ವಿಧಾನ ಪರಿಷತ್ತಿನ ಉಪಸಭಾಪತಿ ಎಂ.ಕೆ.ಪ್ರಾಣೇಶ್, ವಿಧಾನ ಪರಿಷತ್ತಿನ ಆಡಳಿತ ಪಕ್ಷದ ಮುಖ್ಯ ಸಚೇತಕ ಸಲೀಂ ಅಹಮದ್, ವಿಧಾನಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್, ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ಶಾಸಕ ಹಾಗೂ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತದ ಅಧ್ಯಕ್ಷ ಎ.ಬಿ.ರಮೇಶ ಬಂಡಿ ಸಿದ್ದೇಗೌಡ ಉಪಸ್ಥಿತರಿರುವರು.

# ಕಾಡಾನೆಗಳ ದಾಳಿಯಿಂದ ಕಾಫಿ, ಅಡಿಕೆ, ಬಾಳೆ, ಭತ್ತದ ಫಸಲು ನಾಶ

### ರೈತರು ಕಂಗಾಲು, ಆನೆ ಹಾವಳಿ ತಡೆಗೆ ಆಗ್ರಹ



ಕಾಡಾನೆಗಳ ದಾಳಿಯಿಂದ ಕಾಫಿ, ಅಡಿಕೆ, ಬಾಳೆ, ಭತ್ತದ ಫಸಲು ನಾಶಗೊಂಡಿರುವುದು.

ಮಡಿಕೇರಿ,ಡಿ.21– ಮರಿಯಾನೆ ಸೇರಿದಂತೆ 4 ಕಾಡಾನೆಗಳ ಹಿಂಡು ಕಾಫಿ, ಅಡಿಕೆ, ಬಾಳೆ, ಭತ್ತ ಸೇರಿದಂತೆ ಕೃಷಿ ಫಸಲುಗಳನ್ನು ನಾಶಗೊಳಿಸಿರುವ ಘಟನೆ ಪೊನ್ನಂಪೇಟೆ ತಾಲೂಕಿನ ಗೋಣಿಕೊಪ್ಪ– ಅರ್ವತೋಕ್ಲು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗರಿಕೇರಿಯಲ್ಲಿ ಸಂಭವಿಸಿದೆ.

ಗ್ರಾಮದ ಕಾಡ್ಯಮಾಡ ಕೆ.ರವಿ ಪೆಮ್ಮಯ್ಯ ಅವರಿಗೆ ಸೇರಿದ ಫಸಲು ಭರಿತ 40ರಿಂದ 50 ಅಡಿಕೆ ಸಸಿಗಳನ್ನು ಕಾಡಾನೆಗಳ ಹಿಂಡು ನಾಶಪಡಿಸಿದೆ. ಅಲ್ಲದೇ ಕಟಾವಿಗೆ ಬಂದಿದ್ದ ಭತ್ತದ ಫಸಲನ್ನು ತುಳಿದು ಧ್ವಂಸಗೊಳಿಸಿವೆ. ವರ್ಷಪೂರ್ತಿ ಕಷ್ಟಪಟ್ಟು ಬೆಳೆದ ಕೃಷಿ ಫಸಲುಗಳು ಕಾಡಾನೆಗಳ ಪಾಲಾಗುತ್ತಿರುವುದರಿಂದಾಗಿ ಕೃಷಿಕರ ಪಾಲಿಗೆ ಕೈಗೆ ಬಂದ ತುತ್ತು ಬಾಯಿಗಿಲ್ಲ ಎಂಬಂತಾಗಿದೆ. ಈ ಕುರಿತು ಮಾತನಾಡಿದ ಬೆಳೆಗಾರರಾದ ಕಾಡ್ಯಮಾಡ ಕೆ.ರವಿ ಪೆಮ್ಮಯ್ಯ, ಕಳೆದ ನಾಲ್ಕೈದು ವರ್ಷಗಳಿಂದ ಕಾಡಾನೆಗಳ ಹಿಂಡು ಆಗಾಗ್ಗೆ ಕಾಫಿ ತೋಟ ಹಾಗೂ ಭತ್ತದ ಗದ್ದೆಗಳಿಗೆ ಲಗ್ಗೆ ಇಟ್ಟು ಕೃಷಿ ಫಸಲುಗಳನ್ನು ಧ್ವಂಸಗೊಳಿಸುತ್ತಿವೆ. ಕಾಫಿ ಗಿಡಗಳು ಸೇರಿದಂತೆ ಅಡಿಕೆ ಮರಗಳನ್ನು ನಾಶಗೊಳಿಸಿರುವ ಕಾಡಾನೆಗಳ ಹಿಂಡು ಕಟಾವಿಗೆ ಬಂದಿದ್ದ ಭತ್ತದ ಗದ್ದೆಯನ್ನು ತುಳಿದು ಸಂಪೂರ್ಣ ನಾಶಗೊಳಿಸಿದ್ದು, ಇದರಿಂದಾಗಿ ಸುಮಾರು 10ರಿಂದ 12 ಕ್ವಿಂಟಾಲ್ ಭತ್ತ ನಾಶವಾಗಿದೆ. ಅಲ್ಲದೇ ಕಾಫಿ ಹಾಗೂ ಭತ್ತದ ಗದ್ದೆಯ ಕೆಲಸಕ್ಕೆ ಬರಲು ಕಾರ್ಮಿಕರು ಹಿಂದೇಟು ಹಾಕುತ್ತಿದ್ದು, ಅರಣ್ಯ ಇಲಾಖೆ ಕೂಡಲೇ ಕಾಡಾನೆಗಳನ್ನು ಕಾಡಿಗಟ್ಟುವ ಜತೆಗೆ ಬೆಳೆ ನಾಶಕ್ಕೆ ಸೂಕ್ತ ಪರಿಹಾರ ನೀಡುವಂತೆ ಒತ್ತಾಯಿಸಿದರು.

ಅಲ್ಲದೇ ಕಾಡಾನೆಗಳ ಹಿಂಡು ಗ್ರಾಮದ ಚೋಡುಮಾಡ ಕ್ಯಾಟ್ ಕರುಂಬಯ್ಯ ಹಾಗೂ ಕಬ್ಬಚ್ಚೀರ ಬಿದ್ದು ಉತ್ತಪ್ಪ ಎಂಬವರಿಗೆ ಸೇರಿದ ಕಟಾವಿಗೆ ಬಂದಿರುವ ಭತ್ತ ಮತ್ತು ಕಾಫಿ ಫಸಲನ್ನು ಧ್ವಂಸಗೊಳಿಸಿವೆ. ಮರಿಯಾನೆ ಸಹಿತ ನಾಲ್ಕು ಕಾಡಾನೆಗಳ ಹಿಂಡು ಕೃಷಿ ಪ್ರದೇಶಗಳಿಗೆ ಲಗ್ಗೆ ಇಡುತ್ತಿರುವ ದೃಶ್ಯ ಮನೆಯೊಂದರ ಸಿಸಿ ಕ್ಯಾಮರಾದಲ್ಲಿ ಸೆರೆಯಾಗಿದೆ.

ಸ್ಥಳಕ್ಕೆ ಪೊನ್ನಂಪೇಟೆ ಉಪವಲಯ ಅರಣ್ಯ ಅಧಿಕಾರಿ ಬಿ.ಎಂ.ಶಂಕರ್, ದಿವಾಕರ್, ಆರ್‌ಆರ್‌ಟಿ ತಂಡ ಹಾಗೂ ಈಟಿಎಫ್ ತಂಡದ ಸಿಬ್ಬಂದಿಗಳು ಭೇಟಿ ನೀಡಿ ಕಾಡಾನೆಗಳ ಹಿಂಡನ್ನು ಕಾಡಿಗಟ್ಟುವ ಕಾರ್ಯಾಚರಣೆ ನಡೆಸಿದರೂ ಯಾವುದೇ ಪ್ರಯೋಜನವಾಗುತ್ತಿಲ್ಲ ಎಂದು ಕೃಷಿಕರು ದೂರಿದ್ದಾರೆ.

ಪೊನ್ನಂಪೇಟೆ ಉಪವಲಯ ಅರಣ್ಯ ಅಧಿಕಾರಿ ಬಿ.ಎಂ.ಶಂಕರ್ ಮಾತನಾಡಿ, ಅರಣ್ಯ ಇಲಾಖೆ ಹಾಗೂ ಆನೆ ಕಾರ್ಯಪಡೆಯ ಸಿಬ್ಬಂದಿ ಕಾಡಾನೆಗಳನ್ನು ಕಾಡಿಗಟ್ಟುವ ಕಾರ್ಯಾಚರಣೆ ಕೈಗೊಂಡಿದ್ದು, ಗ್ರಾಮಸ್ಥರು, ಕಾರ್ಮಿಕರು ಹಾಗೂ ವಿದ್ಯಾರ್ಥಿಗಳು ಎಚ್ಚರ ವಹಿಸುವಂತೆ ಮನವಿ ಮಾಡಿದರು. ಫಸಲು ಕಳೆದುಕೊಂಡ ಕೃಷಿಕರಿಗೆ ಪರಿಹಾರ ಒದಗಿಸಲು ಮೇಲಾಧಿಕಾರಿಗಳ ಗಮನಕ್ಕೆ ತರಲಾಗುವುದು ಎಂದರು.

## ವಿ.ಪೇಟೆಯಲ್ಲಿ ಪುತ್ತರಿ ಕೋಲಾಟ್, ಜನಪದ ಪ್ರದರ್ಶನ



ಪುತ್ತರಿ ಕೋಲಾಟ್, ಕೊಡವ ಪೂಮಾಲೆ ಮಂದ್ ಹಾಗೂ ವಿವಿಧ ಜನಪದ ಪ್ರದರ್ಶನ ನಡೆಯಿತು.

ವಿರಾಜಪೇಟೆ, ಡಿ.21– ತಾಲೂಕಿನ ಆರಾಯಿರ ನಾಡ್ ಬೈರನಾಡ್, ಎಡೆನಾಡ್, ಬೇಟೋಳಿನಾಡ್ ಮತ್ತು ಪೆರುವನಾಡ್ ಎಂಬ ನಾಲ್ಕು ನಾಡುಗಳಾಗಿ ವಿಂಗಡಣೆಗೊಂಡು 17 ಗ್ರಾಮಗಳ ಒಕ್ಕೂಟದ ನಾಡಿನ ಗ್ರಾಮಸ್ಥರು ಸೇರಿ ವಿರಾಜಪೇಟೆ ಕೊಡವ ಸಮಾಜದ ಬಳಿಯ ಪೂಮಾಲೆ ಮಂದ್‌ನಲ್ಲಿ ಪುತ್ತರಿ ಕೋಲಾಟ್ ಹಾಗೂ ವಿವಿಧ ಜನಪದ ಪ್ರದರ್ಶನವನ್ನು ನಡೆಸಿದರು.

ಕೊಡಗಿನ ಸಂಪ್ರದಾಯಕ ಉಡುಗೆಗಳನ್ನು ತೊಟ್ಟು ಕೈಯಲ್ಲಿ ಬೆತ್ತ ಹಿಡಿದು ವಿವಿಧ ಗ್ರಾಮಗಳಿಂದ ಆಗಮಿಸಿದ ಗ್ರಾಮಸ್ಥರಿಗೆ ಕೊಡಗಿನ ಸಂಪ್ರದಾಯದ ವಾಲಗದ ಸ್ವಾಗತ ಕೋರಲಾಯಿತು. ಮಂದ್‌ನಲ್ಲಿರುವ ಆರಳಿಕಟ್ಟೆಗೆ ಹಿರಿಯರು ಪ್ರಥಮವಾಗಿ ಪೂಜೆ ಸಲ್ಲಿಸಿದ ಬಳಿಕ ನಾಲ್ಕು ಭಾಗದಿಂದ ಕೋಲಾಟ ಪ್ರದರ್ಶನ ನಡೆಯಿತು. ವಾರ್ಷಿಕ ಕೋಲಾಟಕ್ಕೆ ಒಂದೆಡೆ ಸೇರಿ ಚಾಲನೆ ನೀಡಲಾಯಿತು.

ಪೂಮಾಲೆ ಮಂದ್‌ನಲ್ಲಿ ಮೂರು ಸುತ್ತಿನ ಕೋಲಾಟ, ಏಳು ಜೋಡಿಯ ಪರಿಯಕಳಿ, ವಾಲಗತ್ತಾಟ್ ನಡೆಯಿತು. ಕೋಲಾಟದ ಪ್ರಕಾರಗಳನ್ನು ಪ್ರದರ್ಶನ ಮಾಡುವವರು ವಾಲಗ ನುಡಿಸುವವರ ವಾದ್ಯಕ್ಕೆ ತಕ್ಕಂತೆ ಹೆಜ್ಜೆ ಹಾಕುತಿದ್ದರು. ಪ್ರಥಮ ಬಾರಿಗೆ ಉತ್ತಮ ಕೋಲಾಟ್ ಪ್ರದರ್ಶನ ನೀಡಿದವರಿಗೆ ರೋಲಿಂಗ್ ಟ್ರೋಫಿಯನ್ನು ಕಬ್ಬಚ್ಚೀರ ಕಾರ್ಯಪ್ಪ ಅವರ ಜ್ಞಾಪಕಾರ್ಥ ಮಕ್ಕಳಾದ ಬೋಪಣ್ಣ ಮತ್ತು ನಂಜಪ್ಪ ಅವರು ನೀಡಿರುವ ರೋಲಿಂಗ್ ಟ್ರೋಫಿಯನ್ನು ಮಗ್ಗುಲ ಗ್ರಾಮದ ಚೋವಂಡ ನಿಖಿಲ್ ಪಡೆದುಕೊಂಡರು, ಪರಿಯ ಕಳಿ ಸ್ಪರ್ಧೆಯಲ್ಲಿ ಬೇಟೋಳಿ ಗ್ರಾಮದ ಬೊಪ್ಪಚಂಡ ಮಾಚಯ್ಯ ಮತ್ತು ಕಬ್ಬಚ್ಚೀರ ಮಾಚಯ್ಯ ಪ್ರಥಮ ಸ್ಥಾನ ಪಡೆದುಕೊಂಡರು. ಕೊಡವ ಸಮಾಜದ ತ್ರಿವೇಣಿ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳಿಂದ ಚೌರಿ ಆಟ್ ಮತ್ತು ಬಾಲಕಿಯರಿಂದ ಉಮ್ಮತಾಟ್ ಪ್ರದರ್ಶನ ಜನಮನ್ನಣೆ ಪಡೆಯಿತು. ವಿವಿಧ ಕೋಲಾಟ ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾದವರಿಗೆ ಆರಾಯಿರ ನಾಡ್ ಕೋಲ್ ಮಂದ್ ಅಯೋಜಕರ ಸಮಿತಿಯಿಂದ ನಗದು ಬಹುಮಾನ ನೀಡಿ ಗೌರವಿಸಲಾಯಿತು.

ಪೂಮಾಲೆ ಮಂದ್ ಸಮಿತಿಯ ಅಧ್ಯಕ್ಷ ಅಜ್ಜಿನಿಕಂಡ ಸುಧೀರ್, ಉಪಾಧ್ಯಕ್ಷ ವಾಟೇರಿರ ಶಂಕರಿ ಪೂವಯ್ಯ, ಮರಣ ಫಂಡ್ ಅಧ್ಯಕ್ಷರಾದ ಚೇಂದಂಡ ಪೊನ್ನಪ್ಪ, ಕ್ರೀಡಾ ಸಮಿತಿ ಅಧ್ಯಕ್ಷರಾದ ಪುಗ್ಗೇರ ನಂದಾ, ಮಂದ್ ಸಮಿತಿ ಸದಸ್ಯರು ಸೇರಿದಂತೆ ಬೈರನಾಡ್ ಹಾಲುಗುಂದ, ಒಂಟಿಅಂಗಡಿ, ದೇವಣಗೇರಿ, ತಲಗಟ್ಟಕೇರಿ, ಹಚ್ಚಿನಾಡು ಗ್ರಾಮಗಳು, ಎಡೆನಾಡು ಕುಕ್ಲೂರು, ಚೆಂಬೆಬೆಳ್ಳೂರು, ಐಮಂಗಲ, ಮಗ್ಗುಲ, ವೈಪಡ ಗ್ರಾಮಗಳು, ಬೇಟೊಳಿನಾಡ್ ಅರ್ಜಿ ಬೇಟೋಳಿ ಗ್ರಾಮಗಳು, ಪೆರುವನಾಡ್ ಬಿಟ್ಟಂಗಾಲ, ನಾಂಗಾಲ, ಬಾಳುಗೋಡು ಗ್ರಾಮಸ್ಥರು, ಸಾರ್ವಜನಿಕರು ಅಪಾರ ಸಂಖ್ಯೆಯಲ್ಲಿ ಅಗಮಿಸಿದ್ದರು.

## ಬೇತು ಶ್ರೀ ಮಕ್ಕಿ ಶಾಸ್ತಾವು ದೇವಾಲಯದ ವಾರ್ಷಿಕ ಉತ್ಸವ ಸಂಪನ್ನ

**ನಾಪೋಕ್ಲು:** ಸಮೀಪದ ಬೇತು ಗ್ರಾಮದಲ್ಲಿರುವ ನಿಸರ್ಗ ರಮಣೀಯ ತಾಣಗಳಲ್ಲಿ ಒಂದಾದ ಶ್ರೀ ಮಕ್ಕಿ ಶಾಸ್ತಾವು ದೇವಾಲಯದ ವಾರ್ಷಿಕ ಉತ್ಸವವದ ಅಂಗವಾಗಿ ಅಧಿಕ ಸಂಖ್ಯೆಯ ಭಕ್ತರು ಪಾಲ್ಗೊಳ್ಳುವುದರೊಂದಿಗೆ ಉತ್ಸವ ಸಂಪನ್ನಗೊಂಡಿತು.

ಶ್ರೀ ಮಕ್ಕಿಶಾಸ್ತಾವು ಉತ್ಸವ ಕಾರ್ಯಕ್ರಮ ಡಿ.15 ರಂದು ಭಗವತ್ ಭಕ್ತರು ಹರಕೆಯ ಮಣ್ಣಿನ ನಾಯಿ ಪ್ರತಿಕೃತಿಯನ್ನು ಒಪ್ಪಿಸಿದರೊಂದಿಗೆ ಪ್ರಾರಂಭವಾಗಿ ಕೊಟ್ಟಿಪಾಡುವೊ ಕಾರ್ಯಕ್ರಮ ಬುಧವಾರ ರಾತ್ರಿ ಜರುಗಿ, ಗುರುವಾರ ರಾತ್ರಿ ದೀಪಾರಾಧನೆ ನೆರವೇರಿ ಭೂತಾರಾಧನೆಗಳು ಜರುಗಿದವು. ಶುಕ್ರವಾರ ಬೆಳಿಗ್ಗೆ ಅಜ್ಜಪ್ಪ ಕೋಲ ಹಾಗೂ ಮಧ್ಯಾಹ್ನ ಅನ್ನ ಸಂತರ್ಪಣೆ ಜರುಗಿದ ನಂತರ ವಿಷ್ಣುಮೂರ್ತಿ ಕೋಲ ಕೆಂಡದ ರಾಶಿಯ ಮೇಲೆ ಬೀಳುವಾಗ ಭಕ್ತಾದಿಗಳು ಭಕ್ತಿ ಪರವಶರಾಗಿ ರೋಮಾಂಚನಗೊಂಡರು.

ಈ ಸಂದರ್ಭ ದೇವಾಲಯದ ತಕ್ಕಮುಖ್ಯಸ್ಥರು ಆಡಳಿತ ಮಂಡಳಿ ಪದಾಧಿಕಾರಿಗಳು ಸದಸ್ಯರು ಉಪಸ್ಥಿತರಿದ್ದು, ಊರ ಮತ್ತು ಪರ ಊರಿನ ಭಕ್ತಾದಿಗಳು ಅಧಿಕ ಸಂಖ್ಯೆಯಲ್ಲಿ ಭಾಗವಹಿಸಿದ್ದರು. ಅರ್ಚಕ ಮಕ್ಕಿ ದಿವಾಕರ ಪೂಜಾ ವಿಧಿವಿಧಾನಗಳನ್ನು ನೆರವೇರಿಸಿದರು.



ಹೂವಿನ ಅಲಂಕಾರದಲ್ಲಿ ಬೇತು ಗ್ರಾಮದ ಶ್ರೀ ಮಕ್ಕಿ ಶಾಸ್ತಾವು.

## ಎಚ್.ಜೆ.ಮಹೇಶ್ ನಿಧನ



**ಕುಶಾಲನಗರ:** ಸಮೀಪದ ಹೆಬ್ಬಾಲೆ ಗ್ರಾಮದ ಕನಕ ಬ್ಲಾಕ್ ನಿವಾಸಿ ನಾಪೋಕ್ಲು ಠಾಣೆಯಲ್ಲಿ ಕರ್ತವ್ಯದಲ್ಲಿದ್ದ ಸಹಾಯಕ ಪೊಲೀಸ್ ಆರಕ್ಷಕ ಎಚ್.ಜೆ.ಮಹೇಶ್(59) ಅವರು ಶನಿವಾರ ಬೆಳಿಗ್ಗೆ ನಿಧನ ಹೊಂದಿದರು. ಮೃತರು ಓರ್ವ ಪುತ್ರ ಹಾಗೂ ಪುತ್ರಿ ಸೇರಿದಂತೆ ಅಪಾರ ಬಂಧುಮಿತ್ರರನ್ನು ಅಗಲಿದ್ದಾರೆ. ಮೃತರ ಅಂತ್ಯಸಂಸ್ಕಾರ ಹೆಬ್ಬಾಲೆ ಗ್ರಾಮದಲ್ಲಿ ಶನಿವಾರ ಸಂಜೆ ನೆರವೇರಿಸಲಾಯಿತು.

ಈ ಸಂದರ್ಭ ನಾಪೋಕ್ಲು ಠಾಣಾಧಿಕಾರಿ ಮಂಜುನಾಥ್ ಹಾಗೂ ಎಎಸ್ಐ ಚನ್ನಕೇಶವ ನೇತೃತ್ವದಲ್ಲಿ ಪೊಲೀಸ್ ಸಿಬ್ಬಂದಿಗಳಿಂದ ಗೌರವ ವಂದನೆ ಸಲ್ಲಿಸಲಾಯಿತು.

# ಜಯಣ್ಣ ಅಪಾರ ಅಭಿಮಾನಿ ಬಳಗ ಹೊಂದಿದ್ದ ಜನನಾಯಕ

### ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ.ಹೆಚ್.ಸಿ.ಮಹದೇವಪ್ಪ



ನುಡಿನಮನ ಕಾರ್ಯಕ್ರಮವನ್ನು ಸಚಿವ ಹೆಚ್.ಸಿ.ಮಹದೇವಪ್ಪ ಉದ್ಘಾಟಿಸಿದರು.

ಕೊಳ್ಳೇಗಾಲ, ಡಿ.21– ಮಾಜಿ ಶಾಸಕ ಜಯಣ್ಣ ಅವರು ಅಪಾರ ಅಭಿಮಾನಿ ಬಳಗ ಹೊಂದಿದ್ದ ಜನನಾಯಕ ಎಂದು ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ. ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ಪಟ್ಟಣದ ಭ್ರಮರಾಂಬ ಕಲ್ಯಾಣ ಮಂದಿರದಲ್ಲಿ ಬ್ಲಾಕ್ ಕಾಂಗ್ರೆಸ್ ವತಿಯಿಂದ ಆಯೋಜಿಸಿದ್ದ ಮಾಜಿ ಶಾಸಕ ಎಸ್.ಜಯಣ್ಣ ಅವರ ನುಡಿನಮನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ದೊಡ್ಡ ಆಲದಮರದಂತಿದ್ದ ಜಯಣ್ಣ ಅವರು ಅವರನ್ನು ನಂಬಿದವರಿಗೆ ನೆರಳಾಗಿದ್ದರು. ಅವರ ಅಧಿಕಾರಾವಧಿಯಲ್ಲಿ ಸಾಕಷ್ಟು ಜನಪರ ಕಾರ್ಯಗಳನ್ನು ಮಾಡಿರುವ ಅವರು ಸಮರ್ಥ ವಿವೇಚನೆಯುಳ್ಳ, ಚಿಂತನಾ ಶೀಲ ವ್ಯಕ್ತಿ. ಜನರನ್ನು ಪ್ರೀತಿಸುವ ಜೊತೆ ಜೊತೆಗೆ, ಭಾವನೆಗಳನ್ನು ಗೌರವಿಸುತ್ತಿದ್ದರು. ಜನರ ನೋವಿಗೆ ಮಿಡಿಯುವ ಉದಾತ್ತ ಗುಣವುಳ್ಳವರಾಗಿದ್ದರು. ರಾಜಕೀಯ ಸೇವೆಗೆ ಮೀಸಲಾಗಿರುವ ಅಮೂಲ್ಯವಾದ ಕ್ಷೇತ್ರ ಎಂಬುದನ್ನು ನೈಜವಾಗಿ ಮಾಡಿ ತೋರಿಸಿದವರು ಜಯಣ್ಣ ಎಂದು ವ್ಯಾಖ್ಯಾನಿಸಿದರು.

ಶಾಸಕ ಎ.ಆರ್.ಕೃಷ್ಣಮೂರ್ತಿ ಮಾತನಾಡಿ, ನಾನು ಶಾಸಕನಾಗಿ ಆಯ್ಕೆಯಾಗಲು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಎಸ್.ಜಯಣ್ಣ ಕಾರಣ. ಜಯಣ್ಣನವರು ಅನಾರೋಗ್ಯದ ಕಾರಣ 2018ರ ಚುನಾವಣೆಯಲ್ಲಿ ಸ್ಪರ್ಧಿಸಲು ನನಗೆ ಅವಕಾಶ ಮಾಡಿಕೊಟ್ಟರು. ಅಲ್ಲದೇ ಕಳೆದ ಚುನಾವಣೆಯಲ್ಲಿ ಸಿದ್ದರಾಮಯ್ಯನವರ ಮಾತಿಗೆ ಬದ್ಧರಾಗಿ ನನಗೆ ಸ್ಪರ್ಧಿಸುವ ಅವಕಾಶ ಮಾಡಿಕೊಟ್ಟು ನನ್ನ ಗೆಲುವಿಗೆ ಕಾರಣರಾದರು. ಅವರ ಆತ್ಮಕ್ಕೆ ಭಗವಂತ ಶಾಂತಿ ಕರುಣಿಸಲಿ ಎಂದರು.

ಕಾರ್ಯಕ್ರಮದ ಸಾನ್ನಿಧ್ಯವನ್ನು ಮನೋರಖ್ಖಿತ ಬಂತೇಜಿ ವಹಿಸಿದ್ದರು. ಶಾಸಕರಾದ ಪುಟ್ಟರಂಗಶೆಟ್ಟಿ, ಗಣೇಶ್ ಪ್ರಸಾದ್, ದರ್ಶನ್, ಎಂಎಲ್‌ಸಿ ತಿಮ್ಮಯ್ಯ, ಕಾಡಾ ಅಧ್ಯಕ್ಷ ಮರಿಸ್ವಾಮಿ, ಮಾಜಿ ಶಾಸಕರಾದ ಆರ್.ನರೇಂದ್ರ, ಜಿ.ಎನ್.ನಂಜುಂಡಸ್ವಾಮಿ, ಜಿಪಂ ಮಾಜಿ ಸದಸ್ಯ ಯೋಗೇಶ್, ಕೆ.ಪಿ.ಸದಾಶಿವಮೂರ್ತಿ, ಮುಖಂಡರಾದ ನಂಜೇಗೌಡ, ನರಸಿಂಹನ್, ಜಯಣ್ಣ ಅವರ ಭಾವ ಸಿದ್ದರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ನಗರಸಭಾಧ್ಯಕ್ಷೆ ರೇಖಾ, ಉಪಾಧ್ಯಕ್ಷ ಎ.ಪಿ.ಶಂಕರ್, ಪ್ರಭುಪ್ರಸಾದ್, ನಾಗರಾಜ್, ನಗರಸಭೆ ಮಾಜಿ ಅಧ್ಯಕ್ಷರಾದ ಮಲ್ಲಿಕಾರ್ಜುನ, ಶಾಂತರಾಜು, ರಮೇಶ್, ಸದಸ್ಯರಾದ ರಾಘವೇಂದ್ರ, ಸುಮಾ, ಮಾಜಿ ಉಪಾಧ್ಯಕ್ಷ ಅಕ್ಮಲ್ ಪಾಷ, ಸ್ವಾಮಿ ನಂಜಪ್ಪ, ಯುವ ಮುಖಂಡ ಸಿಗ್ಬತ್ ಉಲ್ಲಾ, ರಾಜೇಂದ್ರ ಕುಮಾರ್, ಫೈರೋಜ್ ಪಾಶಾ, ಜಗದೀಶ, ಕುಮಾರ ಇನ್ನಿತರಿದ್ದರು.

> ಅಭಿವೃದ್ಧಿ ಬಗ್ಗೆ ಸದಾ ಚಿಂತಿಸುತ್ತಿದ್ದ ಜಯಣ್ಣ ಅವರು ಸರಳ ಸಜ್ಜನ ರಾಜಕಾರಣಕ್ಕೆ ಹೆಸರಾದ ವ್ಯಕ್ತಿ. ಸಿಎಂ ಸಿದ್ದರಾಮಯ್ಯನವರಿಗೆ ಆಪ್ತರಾಗಿದ್ದ ಅವರು ತಮ್ಮ ಅಧಿಕಾರಾವಧಿಯಲ್ಲಿ ನೆನಪಿನಲ್ಲಿ ಉಳಿಯುವಂತಹ ಕಾರ್ಯಗಳನ್ನು ಮಾಡಿದವರು. ಮೃದು ಸ್ವಭಾವದವರಾಗಿದ್ದ ಅವರು ಜನರ ಸಮಸ್ಯೆ, ಜೀವನದ ಬಗ್ಗೆ ಚರ್ಚಿಸುತ್ತಿದ್ದರು. ಅಲ್ಲದೇ ಸಮಸ್ಯೆಗಳನ್ನು ಸೂಕ್ಷ್ಮವಾಗಿ ಬಗೆಹರಿಸುವ ಜಾಣ್ಮೆ ಅವರದಾಗಿತ್ತು. ಅವರ ರಾಜಕೀಯ ಚಿಂತನೆಗಳು ಎಲ್ಲರಿಗೂ ಮಾರ್ಗದರ್ಶನವಾಗಿರಲಿ, ಅವರ ಆದರ್ಶ ಗುಣಗಳು, ಉದಾತ್ತ ಚಿಂತನೆಗಳು ಎಲ್ಲರಿಗೂ ಮಾದರಿಯಾಗಲಿ.
>
> – ಕೆ.ವೆಂಕಟೇಶ್, ಜಿಲ್ಲಾ ಉಸ್ತುವಾರಿ ಸಚಿವ.

## ಚಾ.ನಗರದಲ್ಲಿ ವಿಜೃಂಭಣೆಯ ಹನುಮ ಜಯಂತಿ

### ಪ್ರಮುಖ ಬೀದಿಗಳಲ್ಲಿ ಶ್ರೀರಾಮ, ಆಂಜನೇಯ ಮೂರ್ತಿಗಳ ಮೆರವಣಿಗೆ



ಚಾಮರಾಜನಗರದಲ್ಲಿ ಹನುಮ ಜಯಂತಿ ವಿಜೃಂಭಣೆಯಿಂದ ನಡೆಯಿತು.

ಚಾಮರಾಜನಗರ, ಡಿ.21– ಹನುಮ ಜಯಂತಿ ಅಂಗವಾಗಿ ಹನುಮ ಜಯಂತ್ಯುತ್ಸವ ಸಮಿತಿಯಿಂದ ಶನಿವಾರ 3ನೇ ವರ್ಷದ ಶ್ರೀರಾಮ ಮತ್ತು ಶ್ರೀಆಂಜನೇಯ ಮೂರ್ತಿಗಳ ಮೆರವಣಿಗೆ ನಗರದಲ್ಲಿ ವಿಜೃಂಭಣೆಯಿಂದ ನೆರವೇರಿತು.

ನಗರದ ಹಳೇ ಖಾಸಗಿ ಬಸ್ ನಿಲ್ದಾಣದ ಬಳಿಯ ಅಭಯ ಕಾರ್ಯಸಿದ್ಧಿ ಆಂಜನೇಯಸ್ವಾಮಿ ದೇವಾಲಯದ ಆವರಣದಲ್ಲಿ ಶನಿವಾರ ಸಂಜೆ ಶ್ರೀರಾಮ ಮತ್ತು ಶ್ರೀಆಂಜನೇಯ ಮೂರ್ತಿಗಳಿಗೆ ಮಹಾಮಂಗಳಾರತಿ ನೆರವೇರಿಸುವ ಮೂಲಕ ಮೆರವಣಿಗೆಗೆ ವಿಧ್ಯುಕ್ತ ಚಾಲನೆ ನೀಡಲಾಯಿತು. ಈ ವೇಳೆ ನೆರೆದಿದ್ದ ಸಾವಿರಾರು ಹನುಮ ಭಕ್ತರು ಶ್ರೀರಾಮ, ಆಂಜನೇಯನಿಗೆ ಜೈಕಾರ ಕೂಗಿದರು.

ದೇವಾಲಯದಿಂದ ಹೊರಟ ಮೆರವಣಿಗೆ ನೃಪತುಂಗ ಸರ್ಕಲ್, ಚಿಕ್ಕ ಅಂಗಡಿಬೀದಿ, ಸಂತೇಮರಹಳ್ಳಿ ವೃತ್ತ, ಆದಿಶಕ್ತಿ ದೇವಸ್ಥಾನ, ಸಂತೇಮರಹಳ್ಳಿ ವೃತ್ತ, ಡಿವಿಯೇಷನ್ ರಸ್ತೆ, ಭುವನೇಶ್ವರಿ ವೃತ್ತ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ, ವಾಣಿಯರ್ ರಸ್ತೆ, ಗುಂಡ್ಲುಪೇಟೆ ವೃತ್ತ, ದೊಡ್ಡ ಅಂಗಡಿ ಬೀದಿ, ಹಳೇ ತರಕಾರಿ ಮಾರ್ಕೆಟ್ ಸರ್ಕಲ್, ವೀರಭದ್ರಸ್ವಾಮಿ ದೇವಸ್ಥಾನ ಮೂಲಕ ಮಾರಿಗುಡಿ ಮುಂಭಾಗ ಮುಕ್ತಾಯವಾಯಿತು. ಮೆರವಣಿಗೆಗೆ ನಾದಸ್ವರ, ವೀರಗಾಸೆ, ಡೊಳ್ಳುಕುಣಿತ, ನಾಸಿಕ್ ಡೋಲು, ಚಂಡೆ, ನಗಾರಿ, ತಮಟೆ, ನಂದಿಧ್ವಜ, ರಾಕ್ಷಸ ವೇಷಧಾರಿಗಳು ಮೆರುಗು ನೀಡಿದರು. ಇದೇ ವೇಳೆ ಅಲಂಕೃತ ಎತ್ತುಗಳಿಗೆ ಪೂಜೆ ಸಲ್ಲಿಸಲಾಯಿತು.

ಮೆರವಣಿಗೆ ಸಾಗುವ ಮಾರ್ಗದಲ್ಲಿ ಕೇಸರಿ ಬಣ್ಣದ ಬಂಟಿಂಗ್ಸ್ ಕಟ್ಟಲಾಗಿತ್ತು. ನಗರದ ಭುವನೇಶ್ವರಿ ವೃತ್ತದಲ್ಲಿ ಹನುಮನ ಭಾವಚಿತ್ರವುಳ್ಳ ಫ್ಲೆಕ್ಸ್‌ಗಳು ರಾರಾಜಿಸಿದವು. ಯಾವುದೇ ಅಹಿತಕರ ಘಟನೆ ನಡೆಯದಂತೆ ಪೊಲೀಸ್ ಇಲಾಖೆಯಿಂದ ಸೂಕ್ತ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಅಲ್ಲದೇ ಮೆರವಣಿಗೆ ಸಾಗುವ ಮಾರ್ಗದಲ್ಲಿ ಬಸ್‌ಗಳ ಸಂಚಾರ ನಿಷೇಧಿಸಿ, ಪರ್ಯಾಯ ಮಾರ್ಗಗಳ ಮೂಲಕ ವಾಹನಗಳ ಸಂಚಾರಕ್ಕೆ ಅವಕಾಶ ಕಲ್ಪಿಸಲಾಗಿತ್ತು.

## ಅಮಿತ್ ಶಾ ವಿರುದ್ಧ ಜಿಲ್ಲಾ ಕಾಂಗ್ರೆಸ್ ಪ್ರತಿಭಟನೆ



ಅಮಿತ್ ಶಾ ವಿರುದ್ಧ ಜಿಲ್ಲಾ ಕಾಂಗ್ರೆಸ್ ವತಿಯಿಂದ ಪ್ರತಿಭಟನೆ ನಡೆಸಲಾಯಿತು.

**ಚಾಮರಾಜನಗರ:** ಡಾ.ಬಿ.ಆರ್.ಅಂಬೇಡ್ಕರ್ ಕುರಿತು ಅವಹೇಳನಕಾರಿ ಹೇಳಿಕೆ ನೀಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ಜಿಲ್ಲಾ ಕಾಂಗ್ರೆಸ್ ಸಮಿತಿಯಿಂದ ನಗರದಲ್ಲಿ ಪ್ರತಿಭಟನೆ ನಡೆಸಲಾಯಿತು.

ನಗರದ ಚಾಮರಾಜೇಶ್ವರ ದೇವಾಲಯದ ಉದ್ಯಾನವನದ ಆವರಣದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಪಿ.ಮರಿಸ್ವಾಮಿ ನೇತೃತ್ವದಲ್ಲಿ ಜಮಾಯಿಸಿದ ಕಾರ್ಯಕರ್ತರು, ಮುಖಂಡರು, ಪದಾಧಿಕಾರಿಗಳು ಅಲ್ಲಿಂದ ಮೆರವಣಿಗೆಯಲ್ಲಿ ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಕೆಲಕಾಲ ಪ್ರತಿಭಟನೆ ನಡೆಸಿ ಅಮಿತ್ ಶಾ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಬಳಿಕ ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಮೂಲಕ ಪ್ರಧಾನಿ ಮೋದಿ ಅವರಿಗೆ ಮನವಿ ಸಲ್ಲಿಸಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಮಾತನಾಡಿ, ಅಮಿತ್ ಶಾ ಅವರು ಅಂಬೇಡ್ಕರ್ ಕುರಿತು ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ. ಹೀಗಾಗಿ ಪ್ರಧಾನಿ ಮೋದಿ ಅವರು ಅಮಿತ್ ಶಾ ಅವರನ್ನು ಸಚಿವ ಸಂಪುಟದಿಂದ ವಜಾ ಮಾಡಬೇಕು ಎಂದರು.

ಪ್ರತಿಭಟನೆಯಲ್ಲಿ ಜಿಪಂ ಮಾಜಿ ಸದಸ್ಯ ಆರ್.ಬಾಲರಾಜು, ಜಿಲ್ಲಾ ಉಪಾಧ್ಯಕ್ಷ ಬಿ.ಕೆ. ರವಿಕುಮಾರ್, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಲತಾರಾಜಶೇಖರ್ ಜತ್ತಿ, ಚುಡಾ ಅಧ್ಯಕ್ಷ ಮಹಮದ್ ಅಸ್ಗರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಚಿಕ್ಕಮಹದೇವು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎ.ಎಸ್.ಗುರು ಸ್ವಾಮಿ, ನಗರಸಭೆ ಸದಸ್ಯರಾದ ಚಿನ್ನಮ್ಮ, ಕಲಾವತಿ, ಜಿಪಂ ಮಾಜಿ ಸದಸ್ಯರಾದ ಕೆನವೀನ್, ಕಾವೇರಿ ಶಿವಕುಮಾರ್, ರಮೇಶ್ ಇತರರಿದ್ದರು.

## ಬಾಲಚಂದ್ರ ನಿಧನ



ಕೊಳ್ಳೇಗಾಲ, ಡಿ.21–ಕೊಳ್ಳೇಗಾಲ ನಗರದ ದೇವಾಂಗಪೇಟೆ ನಿವಾಸಿ, ಪಿಎಲ್‌ಡಿ ಬ್ಯಾಂಕ್ ನಿವೃತ್ತ ಅಧಿಕಾರಿ ಬಾಲಚಂದ್ರ(76) ಅವರು ಇಂದು (ಶನಿವಾರ) ಸಂಜೆ ಮೈಸೂರಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ನಾಳೆ (ಭಾನುವಾರ) ಕೊಳ್ಳೇಗಾಲದ ದೇವಾಂಗ ಜನಾಂಗದ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ವಾರದ ಮಿತ್ರ
ಸಾಪ್ತಾಹಿಕ ಪುರವಣಿ

ಮೈಸೂರು ಮಿತ್ರ

ಭಾನುವಾರ 22-12-2024




# ಹರಯದಲ್ಲೇ ಅರಿಯೋ ಹಿರಿಯ...!?

■ ಮಿರ್ಲೆ ಚಂದ್ರಶೇಖರ
ಮೊ: 9916129654



ಹಿರಿಯ ನಾಗರಿಕರ ವಿಶ್ರಾಂತ ಜೀವನ ಬಲು ಸೊಗಸು. ಒತ್ತಡಗಳಿಲ್ಲದ ಕಾಲಘಟ್ಟ, ಯಾವುದಕ್ಕೂ ಅರಿಬಿರಿ ಇಲ್ಲ. ಇವರನ್ನು ನಿಯಂತ್ರಿಸುವವರಿಲ್ಲ ಅಂತ ಸಾಕಷ್ಟು ಬಾರಿ ನನ್ನ ಹಿರಿಯ ನಾಗರಿಕ ಸ್ನೇಹಿತರ ಬಳಿ ಹೇಳಿಕೊಂಡಿದ್ದಿದೆ. ಆದಾಗ್ಯೂ ಬದುಕು ವಿಶ್ರಾಂತ ಸ್ಥಿತಿಯಲ್ಲಿ ಸುಖವನ್ನು ಅನುಭವಿಸುತ್ತಿರುವ ಇವರುಗಳಿಗೆ ಕೆಲವೊಂದು ಕೆಲಸಗಳಿಗೆ ಸಮಯವೇ ಸಾಕಾಗುತ್ತಿಲ್ಲ. ನಾನಂದುಕೊಂಡಿದ್ದ ನನ್ನ ನಂಬಿಕೆಯ ಭ್ರಮೆಯು ದಿಗ್ಭ್ರಮೆಯಾಗಿ ಬದಲಾಗಲು ಬಹಳ ಸಮಯವೇನು ಬೇಕಾಗಲಿಲ್ಲ. ಸರ್ಕಾರಿ ನೌಕರಿಯಲ್ಲಿದ್ದು ಈಗ ಪಿಂಚಣಿ ಪಡೆಯುತ್ತಿರುವವರಿಗೆ, ಸಾಕಷ್ಟು ಹಣ-ಆಸ್ತಿ ಮಾಡಿದವರಿಗೆ ಮಾತ್ರ ಇಲ್ಲಿಯವರೆಗೆ ನಾನಂದುಕೊಂಡಿದ್ದ ಭ್ರಮೆಯ ನಂಬಿಕೆಯು ಸೂಕ್ತವಾಗಿತ್ತು. ಆದರೆ ಇಲ್ಲಿಯೂ ಕಷ್ಟದಲ್ಲಿ ಕೈತೊಳೆಯುವವರೂ ಇದ್ದಾರೆ. ಪಿಂಚಣಿ, ಆಸ್ತಿ-ಪಾಸ್ತಿ ಏನೂ ಇಲ್ಲದ ಉಳಿದವರ ಪಾಡೇನು?. ಅದರ ಹುಡುಕಾಟದಲ್ಲಿ ಇರುವಾಗ ಬಹಳಷ್ಟು ನೋವಿನ ಸಂಗತಿಗಳು ನನ್ನ ಕಣ್ಣು ಹಾಗೂ ಮನಸ್ಸಿನ ಅರಿವಿಗೆ ಬಂದವು.

ಈ ದುಬಾರಿ ಜೀವನವನ್ನು ಮಾಸಿಕ ಪಿಂಚಣಿ ಇಲ್ಲದೆ, ನಯಾಪೈಸೆಯಷ್ಟು ಆರ್ಥಿಕ ಮೂಲ ಇಲ್ಲದವರು ಹೊಟ್ಟೆ ತುಂಬಿಸಿಕೊಳ್ಳುವುದಕ್ಕೆ ಇನ್ನೂ ದುಡಿಯುತ್ತಿರುವವರ ಸ್ಥಿತಿ-ಗತಿಗಳನ್ನು ನೋಡಿದರೆ ಪಿಂಚಣಿ ಪಡೆಯುತ್ತಿರುವ ಅದೃಷ್ಟವಂತರೇ ಸುಖಿಗಳು ಎಂದೆನಿಸದೆ ಇರದು. ನಗರಗಳ ಸಿಗ್ನಲ್‌ಗಳಲ್ಲಿ, ಹೋಟೇಲ್‌ಗಳ ಸಮೀಪ, ದೇವಸ್ಥಾನಗಳ ದ್ವಾರಗಳಲ್ಲಿ ಅದೆಷ್ಟು ನಿರ್ಗತಿಕ ವೃದ್ದರು ಒಂದೊತ್ತಿನ ತುತ್ತಿಗಾಗಿ ಕೈಯೊಡ್ಡಿ ನಿಂತಿರುತ್ತಾರೆ. ಅವರಲ್ಲಿ ಚೆನ್ನಾಗಿಯೇ ಬದುಕಿಬಾಳಿದವರೂ ಬಹಳಮಂದಿ ಇರುತ್ತಾರೆ. ಈ ಸ್ಥಿತಿಗೆ ಬರುವುದಕ್ಕೆ ಕಾರಣ ಭವಿಷ್ಯದ ಬಗ್ಗೆ ಚಿಂತಿಸದೆ ದುಡಿಯುವಾಗ ಒಂದಷ್ಟು ಉಳಿಸಿರುವುದನ್ನು ಅಥವಾ ಸಂಪಾದಿಸಿದ ಆಸ್ತಿ-ಹಣವನ್ನು ನಂಬಿಕೆಯಿಂದ ಮಕ್ಕಳಿಗೆ ಕೊಟ್ಟು ಮಾಡಿದ ತಪ್ಪು ಅವರನ್ನು ಈ ದುಸ್ಥಿತಿಗೆ ತಳ್ಳಿರುತ್ತದೆ.

ಮಕ್ಕಳು ಎಷ್ಟೇ ಒಳ್ಳೆಯವರಿರಬಹುದು. ಆದರೆ ನಂಬಿಕೆಗೆ ಅರ್ಹರಿಲ್ಲದಂತೆ ಮಾಡಿಬಿಡುತ್ತದೆ ಈ ಹಣ ಮತ್ತು ಆಸ್ತಿ. ನಿಯಂತ್ರಣದಲ್ಲಿ ಇರುವವರೆಗೂ ಇರಲಿ ನಮ್ಮ ಹೆಸರಿಗೆ, ಸತ್ತ ನಂತರ ಅವರಿಗೇ ಅಲ್ಲವೇ ಸೇರುವುದು. ಇದ್ದದ್ದನ್ನು ಕೊಟ್ಟು ಕೈಚಾಚುವ ಸ್ಥಿತಿಗೆ ಬರುವುದು ಏಕೆ?, ಮಗ ಇಲ್ಲವೆ ಮಗಳು ನಮ್ಮವರಾದರೂ ಸೊಸೆ ಇಲ್ಲವೆ ಅಳಿಯ ನಮ್ಮವರಾಗಬೇಕಲ್ಲ. ಎಲ್ಲವೂ ಇದ್ದು ವಯೋಸಹಜ ಕಾಯಿಲೆಗಳಿಗೆ ಚಿಕಿತ್ಸೆ ಪಡೆಯುವುದಕ್ಕೂ ಹಣ ಇಲ್ಲದೆ ನರಳಿ.. ನರಳಿ.. ಸಾಯುವುದು ಎಷ್ಟು ಸರಿ?. ಸರ್ಕಾರಗಳು ಹಿರಿಯರಿಗೆ ಬಹಳಷ್ಟು ಯೋಜನೆಗಳನ್ನು ಕಲ್ಪಿಸಿಕೊಟ್ಟಿವೆ. ಆದರೂ ನೆಮ್ಮದಿ ಇಲ್ಲದೆ ಹಿರಿಯರು ಇತ್ತ ಬದುಕಲೂ ಆಗದೆ, ಅತ್ತ ಸಾಯಲೂ ಆಗದೆ ಜೀವಂತ ಶವಗಳಾಗಿ ನಮ್ಮ ನಡುವೆ ಇದ್ದಾರೆ, ನಾವಾದರೂ ಏನು ಮಾಡಲಿಕ್ಕೆ ಆಗುತ್ತೆ ಅಂತೀರಾ?, ನೆನಪಿರಲಿ ಮುಂದೆ ನಿಮ್ಮಲ್ಲಿ ಬಹುತೇಕರ ಸ್ಥಿತಿಯೂ ಹಾಗೇ ಆಗುತ್ತದೆ(ಹಾಗಾಗದಿರಲಿ ಎಂಬುದು ನನ್ನ ಆಶಯ).

ವರದಿಯ ಪ್ರಕಾರ ಭಾರತದಲ್ಲಿ 2000ರಲ್ಲಿದ್ದಂತೆ ಹಿರಿಯ ನಾಗರಿಕರ ಸಂಖ್ಯೆ 76 ಮಿಲಿಯನ್ ಇದ್ದದ್ದು 2050ಕ್ಕೆ 324 ಮಿಲಿಯನ್ ಆಗುವುದೆಂದು ಅಂದಾಜಿಸಲಾಗಿದೆ. ವೈದ್ಯಕೀಯ ಕ್ಷೇತ್ರದ ಅದ್ಭುತ ಸಂಶೋಧನಾ ಫಲವಾಗಿ ಮನುಷ್ಯನ ಜೀವಿತಾವಧಿ ಏರಿಕೆಯಾಗಿದೆ, ಪರಿಣಾಮ ವೃದ್ಧರ ಸಂಖ್ಯೆಯಲ್ಲಿ ಗಣನೀಯವಾಗಿ ಹೆಚ್ಚಳವಾಗುತ್ತಿದೆ. ಸಾಯುವುದನ್ನು ಮುಂದಕ್ಕೆ ಹಾಕುವ ಸಾಮರ್ಥ್ಯ ಇರುವ ನಮಗೆ ಹಿರಿಯ ಜೀವಗಳನ್ನು ಸುಖವಾಗಿ ನೋಡಿಕೊಳ್ಳಲು ಸಾಧ್ಯವಾಗುತ್ತಿಲ್ಲವೇಕೆ?

ವಿಶ್ವ ಆರೋಗ್ಯ ಸಂಸ್ಥೆಯು ಹೇಳುವಂತೆ ಮಾನಸಿಕ ರೋಗವು ಬಹುತೇಕ ಹಿರಿಯ ನಾಗರಿಕರನ್ನು ಕಾಡುತ್ತಿದೆಯಂತೆ. ಮಾನಸಿಕ ಒತ್ತಡಕ್ಕೆ ಕಾರಣ ಮನೆಯೊಳಗೇ ನಿರ್ಲಕ್ಷ್ಯಕ್ಕೆ ಒಳಗಾಗಿರುವುದು. ಒಬ್ಬ ವ್ಯಕ್ತಿ ತನ್ನೆಲ್ಲ ಮೌಲ್ಯವನ್ನು ಕಳೆದುಕೊಂಡು ತುಚ್ಛ ಸ್ಥಿತಿಗೆ ಬರುವುದಕ್ಕೆ ಅಧಿಕಾರ ಹಾಗೂ ದುಡಿಮೆ ಇಲ್ಲದಿರುವುದು. ದುಡಿಮೆ ಇಲ್ಲದಿದ್ದರೂ ಓಕೆ ಆದರೆ ಅವನ ಹೆಸರಿನಲ್ಲಿ ಹಣ, ಆಸ್ತಿಯಾದರೂ ಇರಬೇಕು. ಇವುಗಳೇ ಇಳಿವಯಸ್ಸಿನ ನಾಗರಿಕರ ಬದುಕು ಹೇಗಿರಬೇಕು ಎಂಬುದನ್ನು ನಿರ್ಧರಿಸುವುದು. ಅದಕ್ಕೇ ಹೇಳಿದ್ದು ವಯೋಸಹಜ ಕಾರಣದಿಂದ ದುಡಿಯಲು ಆಗುವುದಿಲ್ಲ, ಮಾಡಿಟ್ಟ ಹಣ-ಆಸ್ತಿಯನ್ನಾದರೂ ಬೇಕಾದವರಿಗೆ ಕಾನೂನುಬದ್ಧವಾಗಿ ಹಂಚಿಕೆಯ ವಿಲ್ ಮಾಡಿಸಿ ಸಾಯುವವರೆಗೂ ನಿಮ್ಮ ಹೆಸರಿನಲ್ಲಿ ಇರಲೆಂದು. ಆಗ ಮಾತ್ರ ಕಿರಿಯರು 'ಮಾಗಿದ ಬದುಕಿಗೆ ಮಾನಸಿಕ ನೆಮ್ಮದಿ' ನೀಡುವುದು.

ಕಿರಿಯರಲ್ಲಿ ಒಂದು ಮನವಿ; ವೃದ್ಧರನ್ನು ಒಂಟಿತನಕ್ಕೆ ದೂಡಬೇಡಿ. ಅವರಿಗೆ ಒಂಟಿತನ ಕಾಡಿತೆಂದರೆ ಯಾವುದಕ್ಕೂ ಆಸಕ್ತಿ ಇರುವುದಿಲ್ಲ, ನಿದ್ದೆ ಬರೋಲ್ಲ, ಊಟ ಸೇರೊಲ್ಲ. ಕೆಲವೊಮ್ಮೆ ಜೀವ ಯಾಕಿರಬೇಕು ಅನ್ನಿಸುತ್ತೆ. ನನ್ನವರು ಎಲ್ಲರೂ ಇದ್ದಾಗ್ಯೂ ಯಾರೂ ಇಲ್ಲವಲ್ಲ ಎಂದು ಚಡಪಡಿಸುತ್ತಾರೆ.

ಹಿರಿಯರನ್ನು ಯಾವ ರೀತಿ ಖುಷಿ ಪಡಿಸಬಹುದೆಂಬುದನ್ನು ಅರಿತುಕೊಳ್ಳಿ, ವರ್ಷಕ್ಕೊಮ್ಮೆ ಹೆತ್ತವರನ್ನು ವೃದ್ಧಾಶ್ರಮದಿಂದ ಕರೆತಂದು ವಿಶ್ವ ಹಿರಿಯ ನಾಗರಿಕರ ದಿನವನ್ನು ಆಚರಿಸಿ, ಮತ್ತೇ ವಾಪಸ್ಸು ಬಿಟ್ಟು ಬರದೆ ಜೊತೆಯಲ್ಲಿ ಇರಿಸಿಕೊಂಡು ಸೇವೆ ಮಾಡಿ. ಏಕೆಂದರೆ ಅವರೀಗ ತಮ್ಮ ಮನಸ್ಥಿತಿ ಹಾಗೂ ನಡವಳಿಕೆಗಳಲ್ಲಿ ಮಕ್ಕಳಾಗಿಬಿಟ್ಟಿರುತ್ತಾರೆ.

ಅವರನ್ನು ಎಂದಿಗೂ ನಮ್ಮ ದಾರಿಗೆ ತರಲಾಗದು, ಅದಕ್ಕೆ ನಾನಾ ಕಾರಣಗಳಿವೆ. ನೀವೇ ಅವರ ದಾರಿಯಲ್ಲಿ ನಡೆದು ಖುಷಿಗೊಳಿಸಿ, ಇದರಲ್ಲಿ ಕಳೆದುಕೊಳ್ಳುವುದು ಏನೂ ಇಲ್ಲ. ಇಲ್ಲಿಯವರೆಗೆ ಅವರಿಂದಲೇ ಎಲ್ಲವನ್ನೂ ಪಡೆದಿದ್ದೀರಿ. ನಿಮ್ಮ ದುಡಿಮೆಯ ಹಣದಲ್ಲಿ ಅವರಿಗೆ ಉಡುಗೊರೆ ತಂದುಕೊಡಿ. ಇದರಿಂದ ಅವರಿಗಾಗುವ ಆನಂದ ನೋಡಿ. ಹಾಗೆಯೇ ಖರ್ಚಿಗೆಂದು ಹಣ ಕೊಟ್ಟು ನೋಡಿ, ಅವರಲ್ಲಿ ಸಂತಸದ ಬದಲಾವಣೆ ಹೇಗಿರುತ್ತದೆ ಎಂಬುದನ್ನು ಕಾಣಿ. ಅವರಲ್ಲಿ ಇರುವ ಕೂಡಿಟ್ಟ ಹಣ ಯಾರಿಗೆ?, ನಿಮಗೇ ಅಲ್ಲವೇ?.

ಅವಿಭಕ್ತ ಕುಟುಂಬಗಳು ಕ್ಷೀಣಿಸಿ ವಿಭಕ್ತ ಕುಟುಂಬಗಳಾಗಿವೆ. ಅದನ್ನೂ ವಿಭಾಗಿಸಿ ಗಂಡ ಒಂದು ಕಡೆ ಹೆಂಡತಿಯಾದವಳು ಬೇರೆಲ್ಲೋ ವಾಸಿಸುತ್ತಿರುವ ಇಂದು ಹಿರಿಯರಾದವರು ಎಲ್ಲಿ ಬದುಕಬೇಕು. ಮುಪ್ಪಿನಲ್ಲಿ ಗಂಡ-ಹೆಂಡತಿ ಇಬ್ಬರೂ ಒಟ್ಟಿಗಿದ್ದರೆ ಚೆನ್ನ. ಅಕಸ್ಮಾತ್ ಇಬ್ಬರಲ್ಲಿ ಒಬ್ಬರಿಲ್ಲದಿದ್ದರೂ ಅದರ ಗೋಳು ಒಂದೆರಡು ಪುಟಗಳನ್ನು ಬರೆದು ತಿಳಿಸುವಷ್ಟು ಸುಲಭದ್ದಲ್ಲ.

ಒಟ್ಟಿನಲ್ಲಿ ಮುಪ್ಪು ಜೀವನಚಕ್ರದಲ್ಲಿ ಅಂತಿಮ ಘಟ್ಟ, ಆ ಹಂತದಲ್ಲಿ ಎಲ್ಲರೂ ಆರೋಗ್ಯವಾಗಿದ್ದು, ತಮ್ಮ ಕುಟುಂಬದೊಟ್ಟಿಗೆ ಇರಲಿ, ಹೊಸ ಚಿಗುರು ಹಳೆ ಬೇರಿನೊಟ್ಟಿಗೆ ಬೆರೆತು ಬಾಳಲಿ. ಜನ್ಮ ಕೊಟ್ಟವರನ್ನು ಇರಿಸಿಕೊಂಡು ಶ್ರದ್ಧೆಯಿಂದ ಸೇವೆ ಮಾಡುವ ಶ್ರವಣಕುಮಾರನ ಅನುಯಾಯಿಗಳಾಗಿ ದಿನವೂ ಅವರನ್ನು ಪೂಜಿಸುವಂತಾಗಲಿ. ಹಾಂ.. ಪೂಜಿಸುವುದಿರಲಿ ಮೊದಲು ಎರಡೊತ್ತು ಬಿಸಿಬಿಸಿಯಾದ ಊಟ ಹಾಕಿ ಸಾಕು ಅಂತೀರಾ...?!.

## ಮೈಸೂರ್ ಪಾಕ್ ಮೈಪಾಕಲ್ಲ...!



ಈ ತೂತು ತೂತಿನ ಖಟುಂ ಮೈಸೂರು ಪಾಕಿನ ಮುಂದೆ, ಈಗಿನ ಮೆತ್ತನೆ ತೊಪ್ಪೆ ಮೈಸೂರು ಪಾಕನ್ನು ನಿವಾಳಿಸಬೇಕು.

ತುಪ್ಪ ತೊನೆಯುವ ಪೆಷಲ್‌ಮೈಪಾಕಿಗೆ ಹಾರ್ಲಿಕ್ಸ್, ಬಾದಾಮಿ, ಮಣ್ಣು ಮಸಿ ಹಾಕಿ ಅದನ್ನೂ ಮೈಸೂರು ಪಾಕ್ ಅನ್ನುತ್ತಾರೆ. ಅದನ್ನು ಗಟ್ಟಿ ಹಲ್ವಾ, ಬರ್ಫಿ ಅನ್ನಬಹುದೇ ಹೊರತು ನಮ್ಮ ಹೆಮ್ಮೆಯ ಮೈಸೂರು ಪಾಕು ಅನ್ನಲಾಗುವುದಿಲ್ಲ.

ಜರಡಿ ತೂತುಗಳ ಮೈಪಾಕನ್ನು ಬಾಯಿಗಿಟ್ಟೊಡನೆ, ಝಿಲ್ಲನೆ ಜೊಲ್ಲು ಸ್ಫುರಿಸುತ್ತದೆ. ಅದರ ಖಟುಂ ಖಟುಂ, ಕಡಲೆಯ ವಿಶಿಷ್ಟ ರುಚಿಯನ್ನು ಪರಿಚಯಿಸುತ್ತದೆ. ಮಾಡಿದ ದಿನವೇ ಗರಿಗರಿ ತಿಂದರೆ ಅದರ ಸೊಗಸೋ ಸೊಗಸು!

ಅದರಲ್ಲೂ ಮದುವೆ ಮನೆಗಳಲ್ಲಿ ಆಗಿನ್ನೂ ಪಾಕ ಕೊಯ್ದಿಟ್ಟಿದ್ದ ಮೈಪಾಕು! ಇನ್ನೇನು ಆರುತ್ತಿರುವ ಬಿಸಿ. ಪೂರ್ತಿ ಸೋರದೆ ಅಲ್ಲಲ್ಲಿ ಇಣುಕುವ ಡಾಲ್ಡಾತುಪ್ಪ. ಆಹಾ! ಅದರ ರುಚಿಯೇ ರುಚಿ! ಹೈಸ್ಕೂಲಿನಲ್ಲಿದ್ದ ನಾವು ಭಟ್ಟರಿಗೆ ಪೂಸಿ ಹೊಡೆದು ಎರಡು ನಾಲ್ಕು ಆರು ಪಾಕ್‌ಗಳನ್ನು ಅದು ಹೇಗೋ ಮೆದ್ದಿರುತ್ತಿದ್ದೆವು. ಪಾಕನ್ನು ಕೊಯ್ದ ತಟ್ಟೆ ಪಕ್ಕ ಬಿದ್ದಿದ್ದ ಪುಡಿ ಪುಡಿಯನ್ನ ಗೋರಿಕೊಂಡು ಹೋಗಿ ಜೂನಿಯರ್ ಹುಡುಗರಿಗೂ ಚೂರ್ ಪಾರು ಕೊಡುತ್ತಿದ್ದೆವು. ಈಗಿನ ತುಪ್ಪದ ಪಾಕೂ ಚೆಂದ ಈ ರುಚಿಯೇ ಬೇರೆ. ಆದರೆ ಇದು ಆ ಮೈಪಾಕಲ್ಲ!




– ಜೆ.ಬಿ.ರಂಗಸ್ವಾಮಿ, ವಿಶ್ರಾಂತ ಪೊಲೀಸ್ ಅಧಿಕಾರಿ, ಮೈಸೂರು

## ಮಕ್ಕಳ ಚಿತ್ರಕಥೆ

# 'ನಾನೇ ಶ್ರೇಷ್ಠ ಎಂಬ ಅಹಂ...!'

■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199

1



ಮಹಾಭಾರತದ ಯುದ್ಧ ಸಂದರ್ಭದಲ್ಲಿ ಅರ್ಜುನ ಹಾಗೂ ಕರ್ಣನ ನಡುವೆ ಭಯಂಕರ ಹೋರಾಟ ನಡೆಯುತ್ತಿರುತ್ತದೆ. ಕರ್ಣನು ಬಿಡುತ್ತಿದ್ದ ಬಾಣವು ಅರ್ಜುನನ ರಥವನ್ನು ಸುಮಾರು ಐದು ಗಜಗಳಷ್ಟು ಹಿಂದಕ್ಕೆ ತಳ್ಳುತ್ತಿರುತ್ತದೆ. ಆದರೆ, ಅರ್ಜುನನು ಬಿಟ್ಟ ಬಾಣದಿಂದ ಕರ್ಣನ ರಥವು ಹತ್ತು ಗಜಗಳಷ್ಟು ಹಿಂದಕ್ಕೆ ಸರಿಯುತ್ತಿರುತ್ತದೆ.

2




ಪ್ರತಿ ಬಾರಿ ಕರ್ಣನು ಬಿಟ್ಟ ಬಾಣವನ್ನು ಕಂಡು ಶ್ರೀಕೃಷ್ಣನು "ಎಂತಹ ಪರಾಕ್ರಮಶಾಲಿ, ಎಂತಹ ಪೌರುಷ" ಎಂದೆಲ್ಲಾ ಹೊಗಳುತ್ತಿರುತ್ತಾನೆ. ಇದನ್ನು ಕಂಡ ಅರ್ಜುನ ಇರಿಸು-ಮುರಿಸಿಗೊಳಗಾಗಿ "ನೀನು ನನ್ನ ಸಾರಥಿ, ಅವನನ್ನೇಕೆ ಹೊಗಳುತ್ತೀಯಾ...? ನಾನು ಬಿಟ್ಟ ಬಾಣವು ಆತನ ರಥವನ್ನು ಹತ್ತು ಗಜಗಳಷ್ಟು ಹಿಂದಕ್ಕೆ ಸರಿಸುತ್ತಿದೆ. ಅವನು ಬಿಟ್ಟ ಬಾಣದಿಂದ ನಮ್ಮ ರಥವು ಹೆಚ್ಚೆಂದರೆ ನಾಲ್ಕರಿಂದ ಐದುಗಜಗಳಷ್ಟು ಮಾತ್ರ ಹಿಂದಕ್ಕೆ ಚಲಿಸುತ್ತಿದೆ".

3




ಅರ್ಜುನ ತನ್ನ ಮಾತನ್ನು ಮುಂದುವರೆಸುತ್ತಾ, "ಹೀಗಿರುವಾಗ ನೀನು ನನ್ನನ್ನು ಹೊಗಳಬೇಕಿತ್ತು ಆದರೆ ಅವನನ್ನೇ ಏಕೆ ಹೊಗಳುತ್ತಿದ್ದಿಯಾ...?"ಎಂದು ಪ್ರಶ್ನಿಸುತ್ತಾನೆ. ಆಗ ಶ್ರೀಕೃಷ್ಣ "ಅರ್ಥ ಮಾಡಿಕೋ... ಅಲ್ಲಿರುವುದು ಕರ್ಣನೊಬ್ಬನೇ... ಆದ್ದರಿಂದ ನೀನು ಬಿಟ್ಟ ಬಾಣವು ಆತನ ರಥವನ್ನು ಹತ್ತು ಗಜಗಳಷ್ಟು ಹಿಂದಕ್ಕೆ ಸರಿಯುವಂತೆ ಮಾಡಿದೆ.

4




ಶ್ರೀಕೃಷ್ಣ ತನ್ನ ಮಾತನ್ನು ಮುಂದುವರೆಸುತ್ತಾ, "ಆದರೆ ಇಲ್ಲಿ ಅರ್ಜುನ ಮತ್ತು ಇಡೀ ಜಗತ್ತನ್ನೇ ನಡೆಸುವ ಪರಮಾತ್ಮ ಅಂದರೆ ನಾನು ನಿನ್ನ ಸಾರಥಿಯಾಗಿದ್ದೇನೆ ಹಾಗೂ ಜಗತ್ತಿನಲ್ಲೇ ಅತ್ಯಂತ ಹೆಚ್ಚು ಬಲಶಾಲಿ ಮಹಾ ಪರಾಕ್ರಮಿಯಾದ ಹನುಮನು ಕೂಡ ನಿನ್ನ ಪತಾಕೆಯಲ್ಲಿದ್ದಾನೆ. ಇಂತಹ ರಥವನ್ನೂ ಸಹ ಆತ ನಾಲ್ಕರಿಂದ ಐದುಗಜಗಳಷ್ಟು ಹಿಂದೆ ಸರಿಯುವಂತೆ ತನ್ನ ಬಾಣದ ಪ್ರದರ್ಶನ ನೀಡುತ್ತಿದ್ದಾನೆ. ಆತನ ಪೌರುಷ ಎಂತಹದ್ದು ಸ್ವಲ್ಪ ಯೋಚಿಸು...!" ಎನ್ನುತ್ತಾನೆ.

5



ಅರ್ಜುನನಿಗೆ ತಾನು ಸ್ವಲ್ಪ ಅವಮಾನಕ್ಕೀಡಾದಂತಾಗಿ "ನೀನು ನನ್ನ ಪರಾಕ್ರಮವನ್ನು ಅನುಮಾನಿಸಿ ನೋಡುತ್ತಿದ್ದೀಯಾ...?" ಎಂದು ಕೇಳುತ್ತಾನೆ. ಆಗ ಶ್ರೀಕೃಷ್ಣನು "ನೀನು ರಥದಿಂದ ಕೆಳಗೆ ಇಳಿ..!" ಎಂದು ಆದೇಶಿಸುತ್ತಾನೆ. ಆಗ ಅರ್ಜುನನು "ಏತಕ್ಕೆ...?" ಎಂದು ಪ್ರಶ್ನಿಸಲು ಶ್ರೀಕೃಷ್ಣನು ಮತ್ತೊಮ್ಮೆ "ನೀನು ರಥದಿಂದ ಮೊದಲು ಕೆಳಗೆ ಇಳಿ.. ನಂತರ ನಾನು ಹೇಳುತ್ತೇನೆ...!" ಎಂದ.


6



ತಕ್ಷಣ ಅರ್ಜುನ ರಥದಿಂದ ಕೆಳಗೆ ಇಳಿಯುತ್ತಾನೆ. ನಂತರ ಶ್ರೀಕೃಷ್ಣನು "ನೀನು ಸ್ವಲ್ಪ ದೂರ ನಿಲ್ಲು" ಎನ್ನುತ್ತಾನೆ. ಅದಕ್ಕೆ ಅರ್ಜುನನು "ಏತಕ್ಕೇ...?"ಎಂದು ಪ್ರಶ್ನಿಸಲು, ಶ್ರೀಕೃಷ್ಣನು "ನಾನು ಹೇಳಿದಂತೆ ಕೇಳು, ಮೊದಲು ರಥದಿಂದ ಸ್ವಲ್ಪ ದೂರ ನಿಲ್ಲು" ಎನ್ನುತ್ತಾನೆ ಹಾಗೆಯೇ ಅರ್ಜುನನು ಸ್ವಲ್ಪ ದೂರ ನಿಲ್ಲುತ್ತಾನೆ. ನಂತರ ಶ್ರೀಕೃಷ್ಣನೂ ಕೂಡ ರಥದಿಂದ ಜಿಗಿದು ದೂರ ನಿಲ್ಲುತ್ತಾನೆ. ಆ ಕೂಡಲೇ ರಥವು ಮುರಿದುಬಿದ್ದು ಬೂದಿಯಾಗಿಬಿಡುತ್ತದೆ. ಈ ದೃಶ್ಯ ಕಂಡು ಬೆದರಿದ ಅರ್ಜುನ, "ಏಕೆ ಹೀಗಾಯಿತು...?" ಎಂದು ಪ್ರಶ್ನಿಸುತ್ತಾನೆ. ಆಗ ಶ್ರೀಕೃಷ್ಣನು "ಅದು ಅವನು ಬಿಟ್ಟ ಬಾಣಗಳ ಪರಿಣಾಮ...ಈ ರಥದಲ್ಲಿ ನಾನು ಕುಳಿತಿದ್ದೆ ಎಂಬ ಕಾರಣಕ್ಕಷ್ಟೇ ಉಳಿದಿತ್ತು" ಎಂದ. ಆಗ ಅರ್ಜುನನಿಗೆ ಜ್ಞಾನೋದಯವಾಗಿ ಶ್ರೀಕೃಷ್ಣನಿಗೆ ಕೈ ಮುಗಿದ.

ನೀತಿ:- ಇದರಿಂದ ಕಲಿಯುವ ನೀತಿ ಪಾಠವೇನೆಂದರೆ, ರಥ ಎಂಬುದು ದೇಹ. ಅರ್ಜುನ ಎಂಬುದು ನಮ್ಮಲ್ಲಿರುವ "ಅಹಂ" ಅಂದರೆ, "ನಾನೇ ಶ್ರೇಷ್ಠ ಎಂಬ ಅಹಂ". ಸಾರಥಿಯಾಗಿ ಕುಳಿತು ಮುನ್ನಡೆಸುತ್ತಿದ್ದನಲ್ಲ, ಅವನೇ ಶ್ರೀಕೃಷ್ಣ. ಅವನೇ ನಮ್ಮ ಆತ್ಮ. ಯಾವಾಗ ಶ್ರೀಕೃಷ್ಣ ರಥಬಿಟ್ಟು ಇಳಿಯುತ್ತಾನೆಯೋ..ಅಂದರೆ ನಮ್ಮ ದೇಹ ಬಿಟ್ಟು ಆತ್ಮ ಹೋಗುತ್ತದೆಯೋ ಆಗ ಸುಟ್ಟೇ ಬಿಡುತ್ತಾನೆ. ಇಷ್ಟೇ ಜೀವನ....!

# ವಾರಭವಿಷ್ಯ



22.12.2024 ರಿಂದ 28.12.2024

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:- ರವಿ-ಧನುಸ್ಸು, ಚಂದ್ರ-ಸಿಂಹ, ಕನ್ಯಾ, ತುಲಾ, ವೃಶ್ಚಿಕ, ಬುಧ-ವೃಶ್ಚಿಕ, ಧನುಸ್ಸು, ಗುರು-ವೃಷಭ, ಶುಕ್ರ-ಮಕರ, ಶನಿ-ಕುಂಭ, ರಾಹು-ಮೀನ ಮತ್ತು ಕೇತು-ಕನ್ಯಾ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ.9740973224, 9739548720



### ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ಭಾಗ್ಯ ಬಂದಾಗ ಕಣ್ಣು ಮುಚ್ಚಿ ಕೂರಬೇಡಿ. ಉದ್ಯೋಗ ಸಂಬಂಧಿ ಸಂದರ್ಶನಗಳು ಸಫಲವಾಗಿ, ಆರ್ಥಿಕ ಮುನ್ನಡೆಯನ್ನು ಕಾಣುವಿರಿ. ನೆರೆಹೊರೆಯಲ್ಲಿ ಒಳ್ಳೆಯ ಮಾತಿನಿಂದ ಸಮಸ್ಯೆಯ ಪರಿಹಾರ. ಉತ್ತರ ದಿಕ್ಕಿನ ಪ್ರಯಾಣದಿಂದ ಅನುಕೂಲ. ಷೇರು ವ್ಯವಹಾರದಲ್ಲಿ ಲಾಭವನ್ನು ಹೊಂದಬಹುದು. ನಿಮ್ಮ ಯೋಜನೆಗಳಿಗೆ ಸಹೋದರ ಸಂಬಂಧಿಗಳ ಅಡ್ಡಗಾಲು.

ಶ್ರೀ ವಿನಾಯಕ ಅರ್ಚನೆ. ಶುಭ ಸಂಖ್ಯೆ-3

### ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಸ್ನೇಹಿತರೊಡನೆ ವ್ಯವಹಾರದ ಮಾತುಕತೆಗಳು ಫಲಪ್ರದವಾಗಲಿದೆ. ಕೈ ತುಂಬಾ ಹಣ ಸೇರುವುದು, ಮಿತವ್ಯಯಿಗಳಾಗಿರಿ. ಭವಿಷ್ಯದಲ್ಲಿ ಅನುಕೂಲವಾಗುವುದು. ಹೊಸ ಒಡಂಬಡಿಕೆಗಳಿಗೆ ಸಹಿ ಹಾಕಲು ಗ್ರಹ ಬಲವಿದೆ. ಹಲವರಿಗೆ ವಿದೇಶ ಪ್ರಯಾಣದ ಯೋಗವಿದೆ. ಮನೆಯಲ್ಲಿ ಶಾಂತಿ ಕಾಪಾಡಿಕೊಳ್ಳಿ. ಸಮಾಧಾನ ಚಿತ್ತರಾಗಿರಿ. ಅಧಿಕ ಕೋಪದಿಂದ ಕಾರ್ಯಗೇಡು. ಆರೋಗ್ಯ ಅಷ್ಟಕ್ಕಷ್ಟೇ.

ಶ್ರೀ ಶಕ್ತಿ ದೇವತಾ ಪೂಜೆ. ಶುಭ ಸಂಖ್ಯೆ -8

### ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ನೀವು ಯಶಸ್ವಿ ಆಗಬೇಕೆಂದರೆ ವಿರಮಿಸುತ್ತಾ ಕೂರಬೇಡಿ, ಅಂತಹವರಿಗೆ ದೈವ ಸಹಾಯವೂ ಒದಗಲ್ಲ. ಅನಿರೀಕ್ಷಿತ ದುಂದುವೆಚ್ಚಗಳಿಂದ ಜೇಬು ಖಾಲಿ. ವ್ಯಾಪಾರದಲ್ಲಿ ಹೊಸ ಯೋಜನೆಯನ್ನು ಅಳವಡಿಸಿಕೊಳ್ಳಬಹುದು. ವಾರದ ಉತ್ತರಾರ್ಧಕ್ಕೆ ಬಹು ನಿರೀಕ್ಷಿತ ಕೆಲಸಗಳು ಸಫಲತೆಯ ಹಾದಿಯಲ್ಲಿ ಸಾಗುವುದು. ಕಟ್ಟಡ ಗುತ್ತಿಗೆದಾರರಿಗೆ ಉತ್ತಮ ಕೆಲಸಗಳು ದೊರೆಯಲಿದೆ.

ಶ್ರೀಮನ್ನಾರಾಯಣ ಸ್ತುತಿ. ಶುಭ ಸಂಖ್ಯೆ-7

### ಕಟಕ (ಹೀ.ಹು.ಹೆ.ಹೊ.ಡ.ಡಿ.ಡು)

ಸೆಟ್ ಬ್ಯಾಕ್ ನಂತರ ಕಮ್ ಬ್ಯಾಕ್ ಇದ್ದೇ ಇರುತ್ತದೆ. ಯತ್ನ ಕಾರ್ಯದಲ್ಲಿ ಯಶಸ್ಸನ್ನು ಹೊಂದುವಿರಿ. ಸಮಾಜದಲ್ಲಿ ಪ್ರತಿಷ್ಠಿತ ಸ್ಥಾನಮಾನ ಲಭಿಸಲಿದೆ. ಉನ್ನತ ಶಿಕ್ಷಣಕ್ಕೆ ವಿದೇಶಕ್ಕೆ ಹೋಗುವ ಯೋಗ ಹಲವರಿಗೆ ಉಂಟು. ನೂತನ ವಾಹನ ಖರೀದಿಯ ಯೋಗವಿದೆ. ಧಾರ್ಮಿಕ ಉತ್ಸವಾದಿಗಳಲ್ಲಿ ಭಾಗವಹಿಸುವಿರಿ. ಮನೆಯಲ್ಲಿ ಹಿರಿಯ ಚೇತನರಿಗೆ ಅನಾರೋಗ್ಯ ಉಂಟಾದೀತು.

ಶ್ರೀದುರ್ಗಾಷ್ಟಕ ಪಠಿಸಿ. ಶುಭ ಸಂಖ್ಯೆ-2

### ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ವಾರದಾರಂಭಕ್ಕೆ ನಿಮ್ಮ ರಾಶಿಗೆ ಬರುವ ಚಂದ್ರ ಗಜಕೇಸರಿ ಯೋಗವನ್ನು ನೀಡಲಿದ್ದಾನೆ. ಮನಸ್ಸು ಹಾಗೂ ಮಾತು ಸ್ವಚ್ಛವಾಗುತ್ತದೆ. ಮನೋವಾಂಛಿತ ಬಯಕೆಗಳು ಪೂರ್ಣಗೊಳ್ಳಲಿದೆ. ಪ್ರೀತಿ-ಪ್ರಣಯ ವಿಷಯಗಳು ಗುಪ್ತವಾಗಿರದು. ಸಮಾಜ ಸೇವೆಯಿಂದ ಗೌರವ ಪ್ರಾಪ್ತಿ. ಮನೆಯಲ್ಲಿ ಧಾರ್ಮಿಕ ಕಾರ್ಯಗಳು ನಡೆಯುವುದು. ಮಂಡಿ ನೋವು ಕಾಡಬಹುದು.

ಶ್ರೀ ಮಾರುತಿ ವಂದನೆ. ಶುಭ ಸಂಖ್ಯೆ-4

### ಕನ್ಯಾ (ಟೊ.ಪ.ಪಿ.ಪು.ಷ.ಣ.ಠ.ಪೆ.ಪೊ)

ಭಾಗ್ಯಸ್ಥಾನದಲ್ಲಿ ಗುರು, ವಿಕ್ರಮ ಸ್ಥಾನದಲ್ಲಿ ಶನಿದೇವ ಸಂಚರಿಸುವಾಗ ನಿಮ್ಮ ಭಾಗ್ಯದ ಬಾಗಿಲು ತೆರೆದಿದೆ. ವ್ಯಾಪಾರ-ವ್ಯವಹಾರಗಳು ಸುಗಮವಾಗಿ ಸಾಗುವುದರ ಜೊತೆಗೆ ಹೇರಳ ಧನಲಾಭವಾಗುವುದು. ಎಳ್ಳು ಹಾಗೂ ದ್ವಿದಳ ಧಾನ್ಯ ವ್ಯಾಪಾರಿಗಳಿಗೆ ಉತ್ತಮ ಆದಾಯವಾಗುವುದು. ಹಲವರಿಗೆ ಹಳೆಯ ಕಾಯಿಲೆಗಳಿಂದ ಮುಕ್ತಿ ದೊರೆಯಲಿದೆ. ಆತುರದ ಡ್ರೈವಿಂಗ್ ಬೇಡ.

ಶ್ರೀ ಅಷ್ಟಾಕ್ಷರಿ ಮಂತ್ರ ಜಪಿಸಿ. ಶುಭ ಸಂಖ್ಯೆ-8

### ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಕಷ್ಟಗಳು ಒಂದರ ಮೇಲೆ ಒಂದರಂತೆ ಬರಬಹುದು. ಧೃತಿಗೆಡುವ ಅಗತ್ಯವಿಲ್ಲ. ದೈನಂದಿನ ಕೆಲಸಗಳು ಸುಗಮವಾಗಿ ಸಾಗಲಿದೆ. ಮಧುರ ಮಾತಿನಿಂದ ಎದುರಾಳಿಗಳ ಮನಸ್ಸನ್ನು ಗೆಲ್ಲುವಿರಿ. ಸರ್ಕಾರಿ ನೌಕರರು ಕಾನೂನುಬಾಹಿರ ಕೆಲಸವನ್ನು ಮಾಡಿ ಸಂಕಷ್ಟಕ್ಕೆ ಗುರಿಯಾಗುವರು. ಗ್ರಹಗತಿಗಳು ಅಶುಭವಿರುವ ಕಾರಣ ಯಾವುದೇ ಕೆಲಸವನ್ನು ಸುದೀರ್ಘವಾಗಿ ಆಲೋಚನೆ ಮಾಡಿ. ಮಹಿಳೆಯರು ಮಾಂಗಲ್ಯ ಸರ ಮುಚ್ಚಿಕೊಂಡು ಓಡಾಡಲಿ.

ಶ್ರೀ ಲಕ್ಷ್ಮೀ ಅಷ್ಟಕ ಪಠಿಸಿ. ಶುಭ ಸಂಖ್ಯೆ-1

### ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯ.ಯಿ.ಯ)

ಮನೆಯಲ್ಲಿ ಶುಭ ಕಾರ್ಯಕ್ಕೆ ನಾಂದಿ. ಒಳ್ಳೆಯ ಮಾತಿನಿಂದ ಸಮಸ್ಯೆ ಪರಿಹಾರವಾಗುವುದು. ಷೇರು ವ್ಯವಹಾರದಲ್ಲಿ ಲಾಭ ಉಂಟಾಗುವುದು. ತತ್ವ ವಿಚಾರಗಳನ್ನು ಅರಿಯುವ ಆಸಕ್ತಿ. ಗುರು ದರ್ಶನದಿಂದ ಗುರಿ ಸಾಧನೆ. ದಾಂಪತ್ಯ ಕಲಹಗಳು ಮನೆಯಲ್ಲೇ, ಸಮಾಧಾನವಾಗುವುದು. ಸರ್ಕಾರಿ ಅಧಿಕಾರಿಗಳಿಂದ ತೊಂದರೆ. ಸ್ಥಿರಾಸ್ತಿ ಮಾರಾಟದಲ್ಲಿ ವಿಳಂಬ. ವಾರಾಂತ್ಯಕ್ಕೆ ದೇಹದಲ್ಲಿ ಅಸಮತೋಲನ.

ಶ್ರೀ ಗಣಪತಿ ವಂದನೆ. ಶುಭ ಸಂಖ್ಯೆ-5

### ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ವಾರದಾರಂಭಕ್ಕೆ ಹಿತೈಷಿಗಳೊಂದಿಗೆ ಸಮಾಗಮ. ಸ್ತ್ರೀಯರೊಬ್ಬರ ಸಹಾಯದಿಂದ ಗೃಹ ಸಮಸ್ಯೆ ಪರಿಹಾರ. ವಿದ್ಯಾಸಂಸ್ಥೆಗಳಿಗೆ ಜವಾಬ್ದಾರಿಗಳು ಹೆಚ್ಚಾಗುವುದು. ಕೃಷಿ ಮಾಡುವುದರಿಂದ ದುರ್ಭಿಕ್ಷವಿರದು. ಆಸ್ತಿ ವಿಭಾಗ ವಿಚಾರದಲ್ಲಿ ಗಣ್ಯ ವ್ಯಕ್ತಿಗಳ ಮಧ್ಯಸ್ಥಿಕೆಯಿಂದ ಅನುಕೂಲ. ವನಿತಾಮಣಿಯರು ಮಾಂಗಲ್ಯ ಮುಚ್ಚಿಕೊಂಡು ಓಡಾಡಲಿ. ವಾಹನ ಡ್ರೈವ್ ಮಾಡುವಾಗ ಜಾಗ್ರತೆ ತಪ್ಪಿದರೆ ಜಾರುತ್ತೀರಿ.

ಶ್ರೀ ಸಾಯಿಬಾಬಾ ಉಪಾಸನೆ. ಶುಭ ಸಂಖ್ಯೆ-4

### ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ವಾರದ ಆದಿಗೆ ಸಮಾಜ ಸೇವೆಯಿಂದ ಖ್ಯಾತಿ, ಪ್ರಸಿದ್ಧಿ. ಸರ್ಕಾರಿ ಕೆಲಸಗಳು ನಿಮ್ಮ ಅನುಕೂಲಕ್ಕೆ ತಕ್ಕಂತೆ ಆಗುವುದು. ಕೃಷಿ ಉಪಕರಣ ಮಾರಾಟಗಾರರಿಗೆ ಬಂಪರ್ ವ್ಯಾಪಾರ ಹಾಗೂ ಧನಲಾಭ. ಹಣಕಾಸಿನ ಬಿಕ್ಕಟ್ಟು ಉಂಟಾದರೂ ಜಯಿಸಿಕೊಳ್ಳುವಿರಿ. ನೌಕರಿಯಲ್ಲಿ ನಿರುತ್ಸಾಹ. ಅಧಿಕ ತಿರುಗಾಟದಿಂದ ದೇಹಾಯಾಸ, ವಿಶ್ರಾಂತಿಯ ಅಗತ್ಯವಿದೆ. ವಾರದ ಕಡೆಗೆ ಮಠಾಧಿಪತಿಗಳ ಶುಭಾಶೀರ್ವಾದ ದೊರೆಯುವುದು.

ಶ್ರೀ ಹನುಮಾನ್ ಚಾಲೀಸ ಪಠಿಸಿ. ಶುಭ ಸಂಖ್ಯೆ-9

### ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಗುರು-ಹಿರಿಯರ ಮಾರ್ಗದರ್ಶನ ದೊರೆತು ಮನಸ್ಸಿಗೆ ನೆಮ್ಮದಿ ನೀಡುವ ಹೊಸ ಮಾರ್ಗವೊಂದು ಗೋಚರಿಸಲಿದೆ. ಮನೆಯಲ್ಲೂ, ಕಚೇರಿಯಲ್ಲೂ ಉಂಟಾಗುವ ಬದಲಾವಣೆಗಳಿಗೆ ತಯಾರಾಗಿರಿ. ವಾರ ಮಧ್ಯೆ ಹಣಕಾಸಿನ ಪರಿಸ್ಥಿತಿ ಸುಧಾರಿಸುತ್ತದೆ. ಸಾಲಗಾರರ ಒತ್ತಡವೂ ಇರುತ್ತದೆ. ಮನೆಯ ಆಂತರಿಕ ಕಲಹಗಳು ಬೀದಿಗೆ ಬಾರದಿರಲಿ. ವಾಹನದಲ್ಲಿ ಸಾಹಸ ತೋರಲು ಹೋಗಿ ತೊಂದರೆಗೆ ಗುರಿಯಾಗುವಿರಿ.

ಶ್ರೀ ವಿಷ್ಣುನಾಮ ಜಪ. ಶುಭ ಸಂಖ್ಯೆ-3

### ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ಹೊಸ ವ್ಯಾಪಾರ ಆರಂಭದ ಪ್ರಯತ್ನಗಳು ಮುಂದುವರೆಯಲಿ. ಧನುರ್ಮಾಸ ನಂತರ ಫಲಪ್ರದವಾಗುವುದು. ಹೊಸ ಹೂಡಿಕೆಗಳನ್ನು ಮಾಡಲು ಅಡ್ಡಿ ಇಲ್ಲ. ಪ್ರಯತ್ನಶೀಲರಿಗೆ ದೈವ ಸಹಾಯವೂ ಒದಗುತ್ತದೆ. ರಫ್ತು ವ್ಯಾಪಾರಿಗಳಿಗೆ ಉತ್ತಮ ವ್ಯವಹಾರ ಕುದುರುತ್ತದೆ. ಸಮಾಜ ವಿರೋಧಿ ವ್ಯಕ್ತಿಗಳ ಸಹವಾಸದಿಂದ ಸಂಕಷ್ಟಕ್ಕೆ ಸಿಲುಕುವಿರಿ. ರಾಹು-ಕೇತುಗಳ ಗ್ರಹ ಸ್ಥಿತಿಯಿಂದ ಆತಂಕಕಾರಿ ಪರಿಣಾಮಗಳು ಉದ್ಭವಿಸುತ್ತವೆ.

ಶ್ರೀ ಗುರ್ವಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-1.

ನಮ್ಮೂರ ಹನುಮೋತ್ಸವ ಅಂಗವಾಗಿ

# ಕೆ.ಆರ್.ನಗರದಲ್ಲಿ ವಿಜೃಂಭಣೆಯ ಶೋಭಾಯಾತ್ರೆ


ಶೋಭಾಯಾತ್ರೆಗೆ ಶಾಸಕ ಡಿ.ರವಿಶಂಕರ್ ಚಾಲನೆ ನೀಡಿದರು.

ಕೆ.ಆರ್‌ನಗರ, ಡಿ.21– ಪಟ್ಟಣದಲ್ಲಿ ನಮ್ಮೂರ ಹನುಮೋತ್ಸವ ಅಂಗವಾಗಿ ಶೋಭಾಯಾತ್ರೆ ಸಾವಿರಾರು ಹನುಮ ಭಕ್ತರ ಸಮ್ಮುಖದಲ್ಲಿ ಶನಿವಾರ ವಿಜೃಂಭಣೆಯಿಂದ ನಡೆಯಿತು.

ಬೆಳಗ್ಗೆ 11 ಗಂಟೆಗೆ ಪಟ್ಟಣದ ಆಂಜನೇಯಸ್ವಾಮಿ ದೇವಾಲಯದ ಆವರಣದಲ್ಲಿ ಗಾವಡಗೆರೆ ಗುರುಲಿಂಗ ಜಂಗಮ ಮಠದ ನಟರಾಜ ಸ್ವಾಮೀಜಿ ಮತ್ತು ಶಾಸಕ ಡಿ.ರವಿಶಂಕರ್ ಪೂಜೆ ಸಲ್ಲಿಸುವ ಮೂಲಕ ಶೋಭಾಯಾತ್ರೆಗೆ ಚಾಲನೆ ನೀಡಿದರು.

ಬಳಿಕ ಆಂಜನೇಯಸ್ವಾಮಿ ಭವ್ಯ ಮೂರ್ತಿವುಳ್ಳ ಶೋಭಾಯಾತ್ರೆ ಬಜಾರ್ ರಸ್ತೆ, ಗರುಡಗಂಭ ವೃತ್ತ, ಹಾಸನ–ಮೈಸೂರು ರಸ್ತೆ, ಪುರಸಭೆ ವೃತ್ತ ಮತ್ತು ಸಿಎಂ ರಸ್ತೆಯಲ್ಲಿ ಸಾಗಿ ದೇವಾಲಯಕ್ಕೆ ತಲುಪಿತು. ಈ ವೇಳೆ ನಗಾರಿ, ಪೂಜಾ ಕುಣಿತ, ವೀರಗಾಸೆ ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳು ಭಾಗವಹಿಸಿದ್ದವು. ಶೋಭಾಯಾತ್ರೆಯಲ್ಲಿ ಸಾಲಿಗ್ರಾಮ ಮತ್ತು ಕೆ.ಆರ್.ನಗರ ತಾಲೂಕಿನ ಸಾವಿರಾರು ಮಂದಿ ಶ್ರೀರಾಮ ಮತ್ತು ಆಂಜನೇಯಸ್ವಾಮಿ ಭಜನೆ ಮಾಡಿದರಲ್ಲದೆ ದೇವರ ನಾಮಗಳಿಗೆ ಕುಣಿದು ಭಕ್ತಿ ಪರಾಕಾಷ್ಠೆ ಮೆರೆದರು. ಮೆರವಣಿಗೆ ಸಾಗುವ ರಸ್ತೆಗಳ ಇಕ್ಕೆಲಗಳಲ್ಲಿ ಕೇಸರಿ ಬಾವುಟ, ಬ್ಯಾನರ್ ಹಾಗೂ ತಳಿರು ತೋರಣ ಕಟ್ಟಲಾಗಿತ್ತು.

**ಭಾವೈಕ್ಯತೆ ಮೆರೆದ ಮುಸ್ಲಿಂ ಬಾಂಧವರು:** ಮೆರವಣಿಗೆ ಗರುಡಗಂಭ ವೃತ್ತಕ್ಕೆ ಬಂದ ವೇಳೆ ಮುಸ್ಲಿಂ ಬಾಂಧವರು ಹನುಮ ಭಕ್ತರಿಗೆ ಹಣ್ಣು, ಸಿಹಿ ಜೊತೆಗೆ ಮಜ್ಜಿಗೆ ವಿತರಿಸಿ, ದೇವರಿಗೆ ನಮಿಸಿ ಭಾವೈಕ್ಯತೆ ಮೆರೆದರು.

ರಾಜಸ್ಥಾನ ಸಮಾಜದವರು, ಗಿರವಿ ಅಂಗಡಿಗಳ ಮಾಲೀಕರು, ಮಿಲ್ಟ್ರಿ ಹೋಟೆಲ್ ಮಾಲೀಕರ ಸಂಘದ ಪದಾಧಿಕಾರಿಗಳು ಮತ್ತು ಇತರ ಸಂಘ ಸಂಸ್ಥೆಯವರು ಶೋಭಾಯಾತ್ರೆಯಲ್ಲಿ ಭಾಗವಹಿಸಿದ್ದ ಸಾವಿರಾರು ಮಂದಿಗೆ ಪ್ರಸಾದ ಮತ್ತು ಮಜ್ಜಿಗೆ ವಿತರಿಸಿದರು.

ಕೇಶಾಲಂಕಾರಿಗಳು ಮತ್ತು ಮಂಗಳವಾದ್ಯಗಾರರ ಸಂಘದವರು ಮೆರವಣಿಗೆ ಉದ್ದಕ್ಕೂ ದೇವರ ನಾಮ ನುಡಿಸುವ ಮೂಲಕ ಉಚಿತ ಸೇವೆ ಸಲ್ಲಿಸಿ ಹರಕೆ ತೀರಿಸಿದರು. ಪಟ್ಟಣದಲ್ಲಿ ನಡೆದ ಶೋಭಾಯಾತ್ರೆ ಅಂಗವಾಗಿ ಎಲ್ಲೆಡೆ ಕೇಸರಿ ಬಾವುಟಗಳು ಹಾರಾಡಿದ್ದರಿಂದ ಇಡೀ ನಗರವೇ ಕೇಸರಿಮಯವಾಗಿ ಕಂಗೊಳಿಸಿತು. ಮುನ್ನೆಚ್ಚರಿಕೆ ಕ್ರಮವಾಗಿ ಡಿವೈಎಸ್ಪಿ ಕರೀಂ ರಾವತ್ತರ್, ಪೊಲೀಸ್ ಇನ್ಸ್‌ಪೆಕ್ಟರ್ ಎಸ್.ಶಿವಪ್ರಕಾಶ್ ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಮಾರುತಿ ಯುವಕರ ಸಂಘದ ಅಧ್ಯಕ್ಷ ಗೌತಮ್ ಜಾಧವ್, ಗೌರವಾಧ್ಯಕ್ಷ ಎಸ್.ಯೋಗಾನಂದ, ವೇಣುಗೋಪಾಲ್, ಕಾರ್ಯದರ್ಶಿ ವಿನಯ್, ಖಜಾಂಚಿ ಮಂಜು ಕೆಂಚಿ, ಪದಾಧಿಕಾರಿಗಳಾದ ಲೋಕೇಶ್, ಶ್ರೀನಿವಾಸ್, ದರ್ಶನ್, ಅರುಣ್, ಪುನೀತ್, ಉಜ್ವಲ್ ಘೋಷ್, ಪುಟ್ಟಸ್ವಾಮಿ, ನರಸಿಂಹರಾಜು, ಜಯರಾಮ್, ನವನಗರ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್, ಹನುಮ ಜಯಂತಿ ಉತ್ಸವ ಸಮಿತಿ ಅಧ್ಯಕ್ಷ ಯು.ಕೃಷ್ಣಭಟ್, ಸಂಚಾಲಕ ಪವನ್, ಪುರಸಭೆ ಸದಸ್ಯರಾದ ಕೆ.ಜಿ.ಸುಬ್ರಮಣ್ಯ, ಶಿವುನಾಯಕ್, ಉಮೇಶ್, ನಟರಾಜು, ಶಂಕರ್ ಸ್ವಾಮಿ, ತಾಲೂಕು ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸಿ.ಪಿ.ರಮೇಶ್ ಕುಮಾರ್, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಮಹೇಶ್, ಮಾಜಿ ಅಧ್ಯಕ್ಷ ವೈ.ಎಸ್.ಕುಮಾರ್, ದೊಡ್ಡೇಕೊಪ್ಪಲು ಗ್ರಾಪಂ ಸದಸ್ಯ ಕೆ.ಪಿ.ಜಗದೀಶ್ ಮತ್ತಿತರರಿದ್ದರು.

## ಚಿಕ್ಕನೇರಳೆಯಲ್ಲಿ ಅದ್ದೂರಿ ಹನುಮ ಜಯಂತಿ


ಮೆರವಣಿಗೆಗೆ ಮಾಜಿ ಸಂಸದ ಪ್ರತಾಪ್ ಸಿಂಹ ಚಾಲನೆ ನೀಡಿದರು.

ಬೆಟ್ಟದಪುರ, ಡಿ.21– ಇಲ್ಲಿಗೆ ಸಮೀಪದ ಚಿಕ್ಕನೇರಳೆ ಗ್ರಾಮದಲ್ಲಿ ಶನಿವಾರ ಹನುಮ ಜಯಂತಿ ಅದ್ದೂರಿಯಾಗಿ ನಡೆಯಿತು.

ಹನುಮ ಜಯಂತಿ ಅಂಗವಾಗಿ ಗ್ರಾಮದ ಆಂಜನೇಯಸ್ವಾಮಿ ದೇವಾಲಯದಲ್ಲಿ ಮುಂಜಾನೆಯೇ ಅಭಿಷೇಕ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು. ಬಳಿಕ ಬಗೆ ಬಗೆಯ ಹೂಗಳಿಂದ ಅಲಂಕರಿಸಿ, ಮಂಗಳಾರತಿ ನೆರವೇರಿಸಿ ಸಾರ್ವಜನಿಕರ ದರ್ಶನಕ್ಕೆ ಅನುವು ಮಾಡಿ ಕೊಡಲಾಗಿತ್ತು. ಬಳಿಕ 6ಕ್ಕೂ ಹೆಚ್ಚು ಹನುಮ ಮೂರ್ತಿಗಳನ್ನು ಒಳಗೊಂಡ ಮೆರವಣಿಗೆಗೆ ಮಾಜಿ ಸಂಸದ ಪ್ರತಾಪ್ ಸಿಂಹ ಚಾಲನೆ ನೀಡಿದರು. ನಂತರ ನಡೆದ ಮೆರವಣಿಗೆಯಲ್ಲಿ ವಿವಿಧ ಜಾನಪದ ಕಲಾತಂಡಗಳು ಭಾಗವಹಿಸಿದ್ದವು. ಯುವಕರು ಕುಣಿದು ಕುಪ್ಪಳಿಸಿದರು. ಗ್ರಾಮದ ಮಹಿಳಾ ಸಂಘದ ಸದಸ್ಯರು ಭಜನೆ ಹಾಗೂ ನೃತ್ಯಗಳನ್ನು ಮಾಡುತ್ತಾ ಸಾಗಿದರು. ಅಲ್ಲದೇ ಭಕ್ತರಿಗೆ ಅನ್ನಸಂತರ್ಪಣೆ ಹಮ್ಮಿಕೊಳ್ಳಲಾಗಿತ್ತು ಈ ಸಂದರ್ಭ ಮುಸ್ಲಿಂ ಸಮಾಜದವರು ಪಾನಕ ವಿತರಿಸಿದರು.

ಈ ವೇಳೆ ಮಾಜಿ ಶಾಸಕ ಕೆ.ಮಹದೇವ್, ಮೈಮುಲ್ ಮಾಜಿ ಅಧ್ಯಕ್ಷ ಪಿ.ಎಂ.ಪ್ರಸನ್ನ, ಮುಖಂಡರಾದ ಬಿಜೆಪಿ ತಾಲೂಕು ಅಧ್ಯಕ್ಷ ರಾಜೇಂದ್ರ, ಹುಣಸೂರು ಪಿಡಿಓ ಮಂಜುನಾಥ್, ಕಾರ್ಯದರ್ಶಿ ಪ್ರಕಾಶ್, ಮುಖಂಡರಾದ ಶಶಿ, ರಘು, ದೀಕ್ಷಿತ್, ಮಾಧು, ಪ್ರಕಾಶ್, ಗ್ರಾಪಂ ಮಾಜಿ ಅಧ್ಯಕ್ಷ ವೆಂಕಟೇಶ್, ತಾಲೂಕು ಬಿಜೆಪಿ ಮಾಜಿ ಅಧ್ಯಕ್ಷ ಎಂ.ರಾಜೇಗೌಡ ತಾಪಂ ಮಾಜಿ ಸದಸ್ಯ ಪುಟ್ಟಸ್ವಾಮಿ, ಗ್ರಾಪಂ ಮಾಜಿ ಅಧ್ಯಕ್ಷ ಲೋಕೇಶ್, ಗೋವಿಂದ, ಮೋಹನ್, ಸಿದ್ದಲಿಂಗೇಗೌಡ, ರಾಜ ಶೇಖರ್, ಕುಬೇರ, ಸೇರಿದಂತೆ ಸುತ್ತ ಮುತ್ತಲ ಗ್ರಾಮಸ್ಥರು ಭಾಗವಹಿಸಿದ್ದರು.

ಡಿವೈಎಸ್ಪಿಗೋಪಾಲ ಕೃಷ್ಣ, ಸಿಪಿಐ ದೀಪಕ್, ಬೆಟ್ಟದಪುರ ಎಸ್ಐ ಶಿವಶಂಕರ್, ಬೈಲುಕುಪ್ಪ ಎಸ್ಐ ಅಜಯ್ ಕುಮಾರ್ ನೇತೃತ್ವದಲ್ಲಿ ಪೊಲೀಸ್ ಬಂದೋಬಸ್ತ್ ಕಲ್ಪಿಸಲಾಗಿತ್ತು.

## ಶರಣರ ಕಾಯಕ ನಿಷ್ಠೆ ಅಳವಡಿಸಿಕೊಳ್ಳಿ


ಸಮಾರಂಭದಲ್ಲಿ ತೋಂಟದಾರ್ಯಸ್ವಾಮೀಜಿ ಕ್ಯಾಲೆಂಡರ್ ಬಿಡುಗಡೆ ಮಾಡಿದರು.

ಸರಗೂರು, ಡಿ.21– ಸೇವೆ ಪ್ರಚಾರದ ಸರಕಲ್ಲ. ಅದು ಗುಪ್ತ ಶಕ್ತಿ. ವ್ಯಕ್ತಿಯನ್ನು ಆರೋಗ್ಯವಾಗಿಡುವ ಸಂಜೀವಿನಿ ಎಂದು ಡಾ.ಶ್ರೀಶಿವಕುಮಾರಸ್ವಾಮೀಜಿ ತಮ್ಮ ಸಂದೇಶದಲ್ಲಿ ತಿಳಿಸಿದ್ದರು ಎಂದು ಹಂಚೀಪುರ ಮಠದ ತೋಂಟದಾರ್ಯ ಸ್ವಾಮೀಜಿ ತಿಳಿಸಿದರು.

ತಾಲೂಕಿನ ಬಿ.ಮಟಕೆರೆ ಗ್ರಾಮದ ಶ್ರೀಮಾರಮ್ಮ ತಾಯಿ ದೇವಾಲಯದ ಆವರಣದಲ್ಲಿ ನಡೆದ ವೀರಶೈವ ಲಿಂಗಾಯತ ತ್ರಿವಿಧ ದಾಸೋಹಿ ಡಾ.ಶಿವಕುಮಾರಸ್ವಾಮಿಗಳ ಸೇವಾ ಬಳಗದ 4ನೇ ವರ್ಷದ ವಾರ್ಷಿಕೋತ್ಸವ ಹಾಗೂ ಕ್ಯಾಲೆಂಡರ್ ಬಿಡುಗಡೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದುಡಿದು ತಿನ್ನಬೇಕು. ಅಗತ್ಯಕ್ಕಿಂತ ಹೆಚ್ಚಿದ್ದನ್ನು ಸಮಾಜಕ್ಕೆ ವಿನಿಯೋಗ ಮಾಡಬೇಕು ಎಂಬ ಅವರ ತಾತ್ವಿಕ ನೆಲೆಗಟ್ಟಿನ ಚಿಂತನೆಯನ್ನು ನಾವೆಲ್ಲ ಅಳವಡಿಸಿಕೊಳ್ಳಬೇಕು. ಭಾವನಾತ್ಮಕವಾಗಿ ನಾವೆಲ್ಲಾ ಒಂದೇ ಎಂದು ಸಾರಲು ಒಟ್ಟಾಗಿ ಆಚರಿಸುತ್ತಿರುವ ಈ ಕಾರ್ಯಕ್ರಮ ಸಾಕ್ಷಿಯಾಗಿದೆ. ಶರಣರ ಕಾಯಕ ನಿಷ್ಠೆ ಅಳವಡಿಸಿಕೊಳ್ಳಬೇಕು. ನಡೆದಾಡುವ ದೇವರ ಹೆಸರಿನ ಬಳಗವು ಸೇವಾ ಮನೋಭಾವವುಳ್ಳ ಸಮಾಜಮುಖಿಯಾಗಿ ಬೆಳೆಯಲಿ ಎಂದರು.

ಬಳಗದ ಉಪಾಧ್ಯಕ್ಷ ಡಿ.ಜಿ.ಪಾಪಣ್ಣ ಮಾತನಾಡಿದರು. ಈ ವೇಳೆ ಬಳಗದ ಅಧ್ಯಕ್ಷ ಟಿ.ಎಂ.ಸಿದ್ದಪ್ಪ, ಕಾರ್ಯದರ್ಶಿ ಚನ್ನಬಸಪ್ಪ ಖಜಾಂಚಿ ರವಿ.ಎಂ, ಆಡಳಿತ ಮಂಡಳಿ ಸದಸ್ಯರಾದ ಮಹದೇವಪ್ಪ. ಕೆ.ಪಿ, ಮಹಾವೀರ.ಕೆ.ಎಂ, ಬಿ.ಎಂ.ಮಹದೇವಪ್ಪ, ರಾಜಪ್ಪ ಬಿ.ಪಿ, ಚಿಕ್ಕದೇವಪ್ಪ, ರಘುಸ್ವಾಮಿ, ಪ್ರಕಾಶ, ನಂಜುಂಡಸ್ವಾಮಿ, ವಿರೂಪಾಕ್ಷ, ಬಿ.ಎಲ್.ಶಿವನಂಜಪ್ಪ, ಸುರೇಶ್.ಎಂ, ಬಸವಣ್ಣ, ಮಹದೇವಪ್ಪ, ನಾಗಪ್ಪ, ಗುರುಸ್ವಾಮಿ, ಮಹದೇವಸ್ವಾಮಿ ಎಂ.ಸಿ, ಜಯಕುಮಾರ್ ಎಂ.ಎನ್, ಮಹದೇವಪ್ಪ ಎಂ.ಎನ್, ಸತೀಶ್ ಎಂ.ಎನ್, ಮಹೇಶ್.ಎಂ.ಜಿ, ಸತೀಶ್, ಮಹೇಶ್. ಎಂ.ಪಿ, ಕೂಸಪ್ಪ ಬಿ, ಮುತ್ತುರಾಜು, ಸುರೇಶ್.ಟಿ.ಎಂ, ಪ್ರಭುಸ್ವಾಮಿ, ಶಿವಾನಂದ, ಮಹದೇವ.ಕೆ.ಹೆಚ್, ಶಾಂತಮಲ್ಲು ಹಾಗೂ ಇನ್ನಿತರರಿದ್ದರು.

ಸಾರ್ವಜನಿಕರ ಮನವಿ ಕಡೆಗಣಿಸಿ

## ಖಾಸಗಿ ವ್ಯಕ್ತಿಗೆ ಭೂಮಿ ಮಂಜೂರು: ಆರೋಪ



ಸುದ್ದಿಗೋಷ್ಠಿಯಲ್ಲಿ ಐಚನಹಳ್ಳಿ ಗ್ರಾಮಸ್ಥರು ಮಾತನಾಡಿದರು.

ಪಿರಿಯಾಪಟ್ಟಣ, ಡಿ.21– ತಾಲೂಕಿನ ಐಚನಹಳ್ಳಿ ಗ್ರಾಮ ವ್ಯಾಪ್ತಿಯಲ್ಲಿ ಖಾಸಗಿ ವ್ಯಕ್ತಿಗೆ ಭೂಮಿ ಮಂಜೂರು ಮಾಡದೇ ಸಾರ್ವಜನಿಕ ಉದ್ದೇಶಕ್ಕೆ ಭೂಮಿ ಮೀಸಲಿಡುವಂತೆ ತಹಸೀಲ್ದಾರ್‌ಗೆ ಮನವಿ ಮಾಡಿದರೂ ಗ್ರಾಮಸ್ಥರ ಮನವಿ ಕಡೆಗಣಿಸಿ 2.26 ಎಕರೆ ಭೂಮಿ ಮಂಜೂರು ಮಾಡಿ ಸಾಗುವಳಿ ಚೀಟಿ ನೀಡಲಾಗಿದೆ ಎಂದು ಐಚನಹಳ್ಳಿ ಗ್ರಾಮಸ್ಥರು ಆರೋಪಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮುಖಂಡರು, 1999ರಲ್ಲಿ ಐಚನಹಳ್ಳಿ ಗ್ರಾಮದ ಮುಖಂಡರು ಸರ್ವೆ ನಂ.14 ಹಾಗೂ 16ರಲ್ಲಿ ಸಾಗುವಳಿ ಮಂಜೂರಾತಿ ಕೋರಿ ತಹಸೀಲ್ದಾರ್‌ಗೆ ಅರ್ಜಿ ಸಲ್ಲಿಸಿದ್ದರು. ಆದರೆ ಗ್ರಾಮಸ್ಥರ ಮನವಿ ಮೇರೆಗೆ 2011ರಲ್ಲಿ ಈ ಅರ್ಜಿ ವಜಾ ಮಾಡಲಾಗಿತ್ತು. ಮತ್ತೆ ಮೇಲ್ಮನವಿ ಸಲ್ಲಿಸಿದ ಮಂಜುನಾಥ್ ತಮ್ಮ ಚಿಕ್ಕಮ್ಮ ತುಳಸಮ್ಮ ಅವರ ಹೆಸರಿನಲ್ಲಿ ಭೂಮಿ ಮಂಜೂರಾತಿ ಕೋರಿ 2022ರಲ್ಲಿ ಅರ್ಜಿ ಸಲ್ಲಿಸಿದ್ದರು. ಈ ಸಂಬಂಧ ಮತ್ತೆ ತಹಸೀಲ್ದಾರ್‌ಗೆ 72ಕ್ಕೂ ಹೆಚ್ಚು ಗ್ರಾಮಸ್ಥರು ಲಿಖಿತ ಮನವಿ ಸಲ್ಲಿಸಿ ಸಾರ್ವಜನಿಕ ಉದ್ದೇಶಕ್ಕೆ ಈ ಭೂಮಿ ಮೀಸಲಿಡಬೇಕು ಎಂದು ಮನವಿ ಮಾಡಿದ್ದರೂ ಗ್ರಾಮಸ್ಥರ ಮನವಿ ಕಡೆಗಣಿಸಿ ಮಂಜುನಾಥ್ ಅವರಿಗೆ 2.26 ಎಕರೆ ಭೂಮಿಯನ್ನು ಮಂಜೂರು ಮಾಡಿದ್ದಾರೆ ಎಂದು ಆರೋಪಿಸಿದರು.

ಈ ರೀತಿ ಅಕ್ರಮವಾಗಿ ಮಂಜೂರು ಮಾಡಿರುವುದನ್ನು ಪ್ರಶ್ನಿಸಿ ಎಸಿ ಅವರಿಗೆ ಗ್ರಾಮಸ್ಥರು ಮೇಲ್ಮನವಿ ಸಲ್ಲಿಸಿದ್ದರೂ, ಪ್ರಕರಣ ಇತ್ಯರ್ಥವಾಗುವ ಮೊದಲೇ ಮಂಜುನಾಥ್ ಹೆಸರಿಗೆ ಭೂಮಿ ಆರ್‌ಟಿಸಿ ಮಾಡಿಕೊಡಬೇಕು ಎಂದು ತಹಶೀಲ್ದಾರ್‌ಗೆ ಆದೇಶಿಸುವ ಮೂಲಕ ಎಸಿ ಅವರು ಸಹ ಉಳ್ಳವರ ಪರವಾಗಿ ವರ್ತಿಸುತ್ತಿದ್ದಾರೆ ಎಂದು ದೂರಿದರು.

ಸುಮಾರು 28 ಎಕರೆ ಭೂಮಿ ಹೊಂದಿರುವ ಕುಟುಂಬಕ್ಕೆ ಮತ್ತೆ ಭೂಮಿ ಮಂಜೂರಾತಿ ಮಾಡಿರುವ ಈ ಹಿಂದಿನ ತಹಸೀಲ್ದಾರ್ ಕುಂಇ ಮಹಮದ್ ಅವರು ಗ್ರಾಮಸ್ಥರಿಗೆ ಅನ್ಯಾಯ ಮಾಡಿದ್ದು, ಕೂಡಲೇ ಮಂಜೂರಾತಿ ಮಾಡಿರುವ ಭೂಮಿಯನ್ನು ಸರ್ಕಾರದ ವಶಕ್ಕೆ ಪಡೆದು ಸಾರ್ವಜನಿಕರ ಅನುಕೂಲಕ್ಕೆ ಮೀಸಲಿಡಬೇಕು ಎಂದು ಒತ್ತಾಯಿಸಿದರು.

ಅಕ್ರಮ ಭೂಮಿ ಮಂಜೂರು ಮಾಡಲು ಸಹಕರಿಸಿರುವ ಉಪ ತಹಸೀಲ್ದಾರ್, ಕಂದಾಯ ನಿರೀಕ್ಷಕ, ವಿಎ, ಸರ್ವೆಯರ್ ಹಾಗೂ ಮಂಜುನಾಥ್ ವಿರುದ್ಧ ಪಟ್ಟಣದ ನ್ಯಾಯಾಲಯದಲ್ಲಿ ಖಾಸಗಿ ದೂರು ಸಲ್ಲಿಸಿ ಕ್ರಿಮಿನಲ್ ಪ್ರಕರಣದಾಖಲಿಸಲಾಗಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಐಚನಹಳ್ಳಿ ಗ್ರಾಮದ ಮುಖಂಡರಾದ ಮಹೇಶ್, ವೈರಮುಡಿಶೆಟ್ಟಿ, ನಾಗರಾಜ ನಾಯಕ, ದಶರಥ, ರಾಮಚಂದ್ರ ಹಾಜರಿದ್ದರು.

### ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ನಂಜನಗೂಡು, ಡಿ.21– ತಾಲೂಕು ಭಗೀರಥ ಉಪ್ಪಾರ ನೌಕರರ ಸಂಘದಿಂದ 2023–24ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಶೇ.80ಕ್ಕಿಂತ ಹೆಚ್ಚು ಅಂಕ ಗಳಿಸಿದ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಹರು ದೃಢೀಕೃತ ಅಂಕಪಟ್ಟಿ ಮತ್ತು ಜಾತಿ ಪ್ರಮಾಣ ಪತ್ರ, ಆಧಾರ್ ಕಾರ್ಡ್ ಜೆರಾಕ್ಸ್, 2 ಭಾವಚಿತ್ರದೊಂದಿಗೆ ಈ ಕೆಳಕಂಡ ವಿಳಾಸಕ್ಕೆ ಅರ್ಜಿ ಸಲ್ಲಿಸಲು ಪ್ರಕಟಣೆ ತಿಳಿಸಿದೆ. ಹೆಚ್ಚಿನ ಮಾಹಿತಿಗೆ 9880956009 ಸಂಪರ್ಕಿಸಿ.

## ಸಿ.ಟಿ.ರವಿ ಸದಸ್ಯತ್ವ ರದ್ದತಿಗೆ ಆಗ್ರಹಿಸಿ ಪ್ರತಿಭಟನೆ



ಎಂಎಲ್‌ಸಿ ಸಿ.ಟಿ.ರವಿ ಸದಸ್ಯತ್ವ ರದ್ದತಿಗೆ ಆಗ್ರಹಿಸಿ ಪ್ರತಿಭಟನೆ ನಡೆಸಲಾಯಿತು.

ಹೆಚ್.ಡಿ.ಕೋಟೆ, ಡಿ.21– ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಅವರ ಬಗ್ಗೆ ಆಕ್ಷೇಪಾರ್ಹ ಪದ ಬಳಸಿದ ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಅವರ ಸದಸ್ಯತ್ವ ರದ್ದುಪಡಿಸುವಂತೆ ಆಗ್ರಹಿಸಿ ಪಟ್ಟಣದಲ್ಲಿ ಶ್ರೀಚಾಮುಂಡೇಶ್ವರಿ ಮಹಿಳಾ ಸಂಸ್ಥೆ ಸಾಂತ್ವನ ಕೇಂದ್ರದಿಂದ ಪ್ರತಿಭಟನೆ ನಡೆಸಲಾಯಿತು.

ಪಟ್ಟಣ ತಾಲೂಕು ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು ಸಿ.ಟಿ.ರವಿ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಸಾಂತ್ವನ ಕೇಂದ್ರದ ಆಪ್ತ ಸಮಾಲೋಚಕಿ ಜಶೀಲ ಮಾತನಾಡಿ, ಬಿಜೆಪಿಯವರು ಸಂವಿಧಾನ ಗೌರವಿಸುವುದಿಲ್ಲ. ಮಹಿಳೆಯರನ್ನು ಗೌರವಿಸುವುದಿಲ್ಲ. ಹೀಗಾಗಿ ಮುಂದಿನ ದಿನಗಳಲ್ಲಿ ಬಿಜೆಪಿಗೆ ಮಹಿಳೆಯರು ತಕ್ಕಪಾಠ ಕಲಿಸಬೇಕು. ಮಹಿಳಾ ಸಚಿವೆಯನ್ನು ನಿಂದಿಸಿದ ವ್ಯಕ್ತಿಗೆ ತಕ್ಕ ಶಿಕ್ಷೆಯಾಗಬೇಕು. ಸಿ.ಟಿ.ರವಿ ಅವರ ಸದಸ್ಯತ್ವ ರದ್ದುಗೊಳಿಸಬೇಕು ಎಂದು ಒತ್ತಾಯಿಸಿದ ಅವರು ಒಂದು ವೇಳೆ ಸದಸ್ಯತ್ವ ರದ್ದುಗೊಳಿಸದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಪ್ರತಿಭಟನೆ ಕೈಗೊಳ್ಳಲಾಗುವುದು ಎಂದು ಎಚ್ಚರಿಕೆ ನೀಡಿದರು.

ಸಾಂತ್ವನ ಕೇಂದ್ರದ ಕಾರ್ಯದರ್ಶಿ ರತ್ನಮ್ಮ ಮಾತನಾಡಿದರು. ಇದೇ ವೇಳೆ ತಹಸೀಲ್ದಾರ್ ಶ್ರೀನಿವಾಸ್ ಮೂಲಕ ರಾಜ್ಯಪಾಲರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ನರಸೇಗೌಡ, ಶೈಲಾ, ಅನುಷಾ, ಕವಿತಾ, ಪ್ರೇಮದೇವಮ್ಮ, ಮಂಜುಳಾ, ಸ್ಫೂರ್ತಿ, ರತ್ನಮ್ಮ, ಚಿಕ್ಕದೇವಮ್ಮ, ಕುಮಾರಿ, ಭುವನೇಶ್ವರಿ ಸೇರಿದಂತೆ ಇತರರಿದ್ದರು.

## ಹೈನುಗಾರರು ತಾಂತ್ರಿಕ ವಿಚಾರಗೋಷ್ಠಿ ಸದುಪಯೋಗಪಡಿಸಿಕೊಳ್ಳಿ

ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಕರೆ


ತಾಂತ್ರಿಕ ವಿಚಾರಗೋಷ್ಠಿಯಲ್ಲಿ ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಉದ್ಘಾಟಿಸಿದರು.

ತಿ.ನರಸೀಪುರ, ಡಿ.21– ರೈತರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ತಾಂತ್ರಿಕ ವಿಚಾರಗೋಷ್ಠಿ ಹಮ್ಮಿಕೊಳ್ಳಲಾಗಿದ್ದು, ಹೈನುಗಾರರು ಇದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಕರೆ ನೀಡಿದರು.

ಪಟ್ಟಣದ ಮೈಮುಲ್ ಉಪ ಕಚೇರಿಯಲ್ಲಿ ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದಿಂದ ಸೋಸಲೆ ಮತ್ತು ಬನ್ನೂರು ಹೋಬಳಿಯ ಪ್ರಗತಿಪರ ರೈತರಿಗಾಗಿ ಹಮ್ಮಿಕೊಳ್ಳಲಾಗಿದ್ದ ತಾಂತ್ರಿಕ ವಿಚಾರಗೋಷ್ಠಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವಿಚಾರಗೋಷ್ಠಿಯಿಂದ ರೈತರಿಗೆ ಹೈನುಗಾರಿಕೆ ಮಾಡುವುದರಿಂದ ಆಗುವ ಲಾಭ–ನಷ್ಟದ ಸಂಪೂರ್ಣ ಮಾಹಿತಿ ದೊರಕಲಿದೆ. ಹೈನುಗಾರಿಕೆಯಿಂದ ಆಗಲಿರುವ ನಷ್ಟದಿಂದ ಪಾರಾಗುವ ಬಗ್ಗೆ ಪಶು ವೈದ್ಯರು ಸಂಕ್ಷಿಪ್ತವಾಗಿ ತಿಳಿಸಿಕೊಡಲಿದ್ದಾರೆ ಎಂದರು.

ಹೈನುಗಾರಿಕೆ ಇಂದು ಕೇವಲ ಕಸುಬಾಗಿ ಉಳಿಯದೇ ಉದ್ಯಮವಾಗಿ ಬೆಳೆಯುತ್ತಿದೆ. ನಮ್ಮ ರೈತರೂ ಉದ್ಯೋಗಿಗಳಾಗಬೇಕು. ಕೆಲಸಕ್ಕಾಗಿ ಪಟ್ಟಣಕ್ಕೆ ಗುಳೆ ಹೋಗುತ್ತಿರುವ ಯುವಕರು ಹೈನುಗಾರಿಕೆಯಲ್ಲಿ ತೊಡಗಿ ಆರ್ಥಿಕವಾಗಿ ಸಬಲರಾಗಬೇಕು ಎಂದರು.


ಒಕ್ಕೂಟ ರೈತರಿಗೆ ಪಶು ವೈದ್ಯಕೀಯ ಸೌಲಭ್ಯದ ಜೊತೆಗೆ ಶೇ.75 ರಷ್ಟು ಹಣ ಪಾವತಿಸಿ ರೈತರಿಂದ ಶೇ.25ರಷ್ಟು ಹಣ ಪಡೆದು ರಾಸುಗಳಿಗೆ ವಿಮೆ ಸೌಲಭ್ಯ ಕಲ್ಪಿಸಿ ಕೊಡುತ್ತಿದೆ. ಮುಂದಿನ ದಿನಗಳಲ್ಲಿ ಮ್ಯಾಟ್ ವಿತರಣೆ ಮಾಡಲಾಗುತ್ತದೆ ಎಂದರು.

ಮೈಮುಲ್ ಮಾಜಿ ಅಧ್ಯಕ್ಷ ಓಂಪ್ರಕಾಶ್ ಮಾತನಾಡಿ, ತಾಲೂಕಿನಲ್ಲಿ 85 ಸಾವಿರ ಲೀಟರ್ ಹಾಲು ಉತ್ಪಾದನೆಯಾಗುತ್ತಿದ್ದು, ಪ್ರತಿ ದಿನ 27 ಲಕ್ಷ ರೂ.ಗಳನ್ನು ರೈತರಿಗೆ ಬಟವಾಡೆ ಮಾಡಲಾಗುತ್ತಿದ್ದು ವರ್ಷಕ್ಕೆ 100 ಕೋಟಿ ವ್ಯವಹಾರ ನಡೆಯುತ್ತಿದೆ ಎಂದರು.

ಮೈಮುಲ್ ನಿವೃತ್ತ ಪಶು ವೈದ್ಯಾಧಿಕಾರಿ ಡಾ.ಎನ್.ಕುಮಾರ್ ಮಾತನಾಡಿ, ರಾಜ್ಯದಲ್ಲಿ ಹಾಲಿನ ಉತ್ಪಾದನೆ ಹೆಚ್ಚುತ್ತಿದೆ. ಆದರೆ ಜಾನುವಾರುಗಳಲ್ಲಿ ಹೆಚ್ಚಿನ ಕಾಯಿಲೆಗಳು ಕಾಣಿಸಿಕೊಳ್ಳುತ್ತಿವೆ. ಜಾನುವಾರುಗಳ ಮೇವಿನ ಬೆಳೆಗೆ ಹೆಚ್ಚಾಗಿ ಕೀಟನಾಶಕ ಸಿಂಪಡಿಸುವುದರಿಂದ ರೋಗದ ಪ್ರಮಾಣ ಹೆಚ್ಚುತ್ತಿದೆ. ರಾಸುಗಳಿಗೆ ಕಾಯಿಲೆ ಬಂದಾಗ ಬಳಸುವ ಔಷಧಿಗಳ ಅಂಶ ಹಾಲಿನಲ್ಲಿ ಶೇಖರಣೆಯಾಗಿ ಹಾಲು ವಿಷಕಾರಕವಾಗುತ್ತಿದೆ. ಹಾಗಾಗಿ ಕೀಟನಾಶಯುಕ್ತ ಆಹಾರವನ್ನು ಕಡಿಮೆ ಮಾಡಬೇಕಿದೆ. ಪಾರಂಪರಿಕ ಔಷಧಗಳನ್ನು ಬಳಸಿ ಜಾನುವಾರುಗಳಿಗೆ ಬರುವ ಕಾಯಿಲೆ ತಡೆಗಟ್ಟಬಹುದಾಗಿದೆ. ಬಹಳಷ್ಟು ಕಾಯಿಲೆಗಳನ್ನು ಔಷಧ ಇಲ್ಲದೆಯೇ ಗುಣ ಪಡಿಸಬಹುದಾಗಿದೆ. ನಮ್ಮ ಮನೆಯಲ್ಲೇ ದೊರಕುವಂತ ಪಾರಂಪರಿಕ ಔಷಧ ಬಳಸಿ ರೋಗ ಗುಣ ಪಡಿಸುವುದರಿಂದ ವೈದ್ಯಕೀಯ ವೆಚ್ಚ ಉಳಿಸಬಹುದಾಗಿದೆ ಎಂದರು.

ಈ ವೇಳೆ ಮೈಮುಲ್ ವ್ಯವಸ್ಥಾಪಕ ಎಲ್.ಆರ್. ಕರಿಬಸವರಾಜು, ನಿವೃತ್ತ ವ್ಯವಸ್ಥಾಪಕ ತಾರಾನಾಥ್, ಮಾರ್ಗ ವಿಸ್ತರಣಾಧಿಕಾರಿಗಳಾದ ಆರ್.ಪ್ರಮೋದ್, ದಿವ್ಯಶ್ರೀ, ಅನಿತಾ, ಶಿವಕುಮಾರ್, ರಂಜಿತಾ, ಕಾರ್ಯದರ್ಶಿಗಳಾದ ಮಾದಪ್ಪ, ಅಂದಾನಿಗೌಡ, ಮೇಗಳಕೊಪ್ಪಲು ರಂಗಸ್ವಾಮಿ, ಕುಚೇಲ ಸೇರಿದಂತೆ ಮಹಿಳಾ ಕಾರ್ಯದರ್ಶಿಗಳು ಹಾಜರಿದ್ದರು.

## ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆ


ಬನ್ನೂರು ಸಮೀಪದ ಯಾಚೇನಹಳ್ಳಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಆವರಣದಲ್ಲಿ 2025ರ ನೂತನ ಕ್ಯಾಲೆಂಡರ್ ಅನ್ನು ಅಧ್ಯಕ್ಷ ವೈ.ಎನ್. ಶಂಕರೇಗೌಡ ಬಿಡುಗಡೆಗೊಳಿಸಿದರು. ಮುಖಂಡರಾದ ವೈ.ಎಸ್.ರಾಮಸ್ವಾಮಿ, ವೈ.ಎಂ.ಚಂದ್ರು ವೈ.ಹೆಚ್.ಹನುಮಂತೇಗೌಡ, ಸಿದ್ದರಾಮು, ವೈ.ಕೆ.ಕ್ಯಾತೇಗೌಡ ಸೇರಿದಂತೆ ಇತರರಿದ್ದರು.

### ಸೋಮಶೇಖರ್ ನಿಧನ



ಹೆಚ್.ಡಿ.ಕೋಟೆ, ಡಿ.21– ಪಟ್ಟಣದ ಸಿದ್ದಪ್ಪಾಜಿ ರಸ್ತೆ ನಿವಾಸಿ ವಿಶ್ವನಾಥಯ್ಯ ಅವರ ಪುತ್ರ, ವಾಹನ ಚಾಲಕ ಸೋಮಶೇಖರ್ (44) ಶನಿವಾರ ನಿಧನರಾದರು. ಮೃತರು ಮೂವರು ಪುತ್ರಿಯರು, ತಾಯಿ, ತಂಗಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಪಟ್ಟಣದ ಸಾರ್ವಜನಿಕ ಸ್ಮಶಾನದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

## ಅಂಬೇಡ್ಕರ್ ಬಗ್ಗೆ ಅವಹೇಳನಕಾರಿ ಹೇಳಿಕೆ: ಅಮಿತ್ ಶಾ ವಿರುದ್ಧ ವಿವಿಧೆಡೆ ಪ್ರತಿಭಟನೆ








ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸಿ, ಗಡಿಪಾರು ಮಾಡುವಂತೆ ನಂಜನಗೂಡು, ಸರಗೂರು ಹಾಗೂ ಹುಣಸೂರಿನಲ್ಲಿ ಪ್ರತಿಭಟನೆ ನಡೆಸಲಾಯಿತು.

ಮೈಸೂರು, ಡಿ.21– ಅಂಬೇಡ್ಕರ್ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿರುವ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರನ್ನು ಸಚಿವ ಸಂಪುಟದಿಂದ ವಜಾಗೊಳಿಸಿ, ಗಡಿಪಾರು ಮಾಡುವಂತೆ ಒತ್ತಾಯಿಸಿ ನಂಜನಗೂಡು, ಸರಗೂರು ಹಾಗೂ ಹುಣಸೂರಿನಲ್ಲಿ ಪ್ರತಿಭಟನೆ ನಡೆಸಲಾಯಿತು.

**ನಂಜನಗೂಡು:** ನಗರದ ಹುಲ್ಲಹಳ್ಳಿ ವೃತ್ತದ ಬಳಿ ಜಮಾಯಿಸಿದ ದಲಿತಪರ ಸಂಘಟನೆಗಳ ಒಕ್ಕೂಟದ ಪದಾಧಿಕಾರಿಗಳು ಮೈಸೂರು–ಊಟಿ ರಾಷ್ಟ್ರೀಯ ಹೆದ್ದಾರಿ ತಡೆದು ಮಾನವ ಸರಪಳಿ ನಿರ್ಮಿಸಿ ಅಮಿತ್ ಶಾ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ದಸಂಸ ಜಿಲ್ಲಾ ಸಂಚಾಲಕ ನಾರಾಯಣ ಮಾತನಾಡಿದರು. ಗಂಟೆಗೂ ಹೆಚ್ಚು ಕಾಲ ರಾಷ್ಟ್ರೀಯ ಹೆದ್ದಾರಿ ತಡೆದ ಪರಿಣಾಮ ರಸ್ತೆ ಸಂಚಾರ ಅಸ್ತವ್ಯಸ್ತಗೊಂಡು ಸಾರ್ವಜನಿಕರು ಪರದಾಡುವಂತಾಗಿತ್ತು. ಪ್ರತಿಭಟನೆಯಲ್ಲಿ ಒಕ್ಕೂಟದ ಅಧ್ಯಕ್ಷ ಎಂ.ವಿಜಯಕುಮಾರ್, ರೈತ ಸಂಘದ ಜಿಲ್ಲಾಧ್ಯಕ್ಷ ವಿದ್ಯಾಸಾಗರ್, ಹಿರಿಯ ರೈತ ಮುಖಂಡ ನಂಜುಂಡಸ್ವಾಮಿ, ದಲಿತ ಸಂಘಟನೆಗಳ ಒಕ್ಕೂಟದ ಅಭಿನಾಗಭೂಷಣ್, ಮಲ್ಲೇಶ್, ಬಸವಣ್ಣ, ಜಯಶಂಕರ್, ಕುಮಾರ್, ಪುಟ್ಟಸ್ವಾಮಿ ಸೇರಿದಂತೆ ಇತರರಿದ್ದರು.

**ದಲಿತ ಸಂಘಟನೆಗಳ ಸಮನ್ವಯ ಸಮಿತಿ:** ನಗರದ ಡಾ.ಬಿ.ಆರ್.ಅಂಬೇಡ್ಕರ್ ಪ್ರತಿಮೆ ಎದುರು ಜಮಾಯಿಸಿದ ದಲಿತ ಸಂಘಟನೆಗಳ ಸಮನ್ವಯ ಸಮಿತಿ ಪದಾಧಿಕಾರಿಗಳು ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಸಮಿತಿ ಅಧ್ಯಕ್ಷ ಮಂಜು ಮಾತನಾಡಿ, ಅಂಬೇಡ್ಕರ್ ಬಗ್ಗೆ ಮಾತನಾಡಿರುವ ಅಮಿತ್ ಶಾ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. ಇಲ್ಲದಿದ್ದರೇ ನಂಜನಗೂಡು ಬಂದ್ ಮಾಡಲಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಇದೇ ವೇಳೆ ತಹಸೀಲ್ದಾರ್ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನೆಯಲ್ಲಿ ಸಮಿತಿಯ ಗೌರವಾಧ್ಯಕ್ಷ ಮಹದೇವಸ್ವಾಮಿ, ಕಾರ್ಯಾಧ್ಯಕ್ಷ ನಾಗೇಂದ್ರ, ಉಪಾಧ್ಯಕ್ಷ ರಾಜಶೇಖರ್, ಸಹಕಾರ ಕಾರ್ಯದರ್ಶಿ ಸಿದ್ದರಾಜು, ಕಾನೂನು ಸಲಹೆಗಾರ ಮಹದೇವಸ್ವಾಮಿ, ಮಹದೇವಸ್ವಾಮಿ, ಲಿಂಗಯ್ಯ, ಮಹದೇವು, ಸ್ವಾಮಿ ಸೇರಿದಂತೆ ಇತರರಿದ್ದರು.

**ಸರಗೂರು:** ಪಟ್ಟಣದ ಪ್ರವಾಸಿ ಮಂದಿರದ ಎದುರು ಜಮಾಯಿಸಿದ ಸಂವಿಧಾನ ಸಂರಕ್ಷಣಾ ಸಮಿತಿ ಹಾಗೂ ಪ್ರಗತಿಪರ ಸಂಘಟನೆಗಳ ಸದಸ್ಯರು ಅಮಿತ್ ಶಾ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಎಪಿಎಂಸಿ ಮಾಜಿ ಅಧ್ಯಕ್ಷ ಸಿದ್ದರಾಜು, ಆದಿ ಕರ್ನಾಟಕ ಮಹಾಸಭಾ ಅಧ್ಯಕ್ಷ ಶಿವಣ್ಣ, ವಾಹನ ಚಾಲಕರ ಸಂಘದ ಅಧ್ಯಕ್ಷ ಚಿಕ್ಕಣ್ಣ ಮಾತನಾಡಿದರು. ಅಂಬೇಡ್ಕರ್ ಟ್ರಸ್ಟ್ ಅಧ್ಯಕ್ಷ ನಾಗರಾಜು, ಮಾಜಿ ಅಧ್ಯಕ್ಷ ಇದಿಯಪ್ಪ, ಕಸಾಪ ಅಧ್ಯಕ್ಷ ಎಂ.ಕೆಂಡಗಣ್ಣಸ್ವಾಮಿ, ಪಪಂ ಸದಸ್ಯ ಶ್ರೀನಿವಾಸ್, ಆದಿ ಕರ್ನಾಟಕ ಮಹಾಸಭಾ ಪ್ರಧಾನ ಕಾರ್ಯದರ್ಶಿ ಮಲ್ಲೇಶ್, ಆರ್ಯ ಈಡಿಗ ಸಮಾಜದ ತಾಲೂಕು ಅಧ್ಯಕ್ಷ ಎಸ್.ಎನ್.ನಾಗರಾಜು, ಅಕ್ರಮ ಸಕ್ರಮ ಸಮಿತಿ ಸದಸ್ಯ ಶಿವಶಂಕರ್, ಮುಖಂಡರಾದ ಮಹೇಶ್, ನಾಗರಾಜು, ಲಕ್ಷ್ಮಣ್, ಚಿನ್ನಯ್ಯ, ದೊಡ್ಡಯ್ಯ, ಸಿದ್ದರಾಜು, ಬಿಲ್ಲಯ್ಯ, ಮಲ್ಲಿಕಾರ್ಜುನ, ಮಹಿಳಾ ಸದಸ್ಯರು ಭಾಗಿಯಾಗಿದ್ದರು.

**ಹುಣಸೂರು:** ಅಮಿತ್ ಶಾ ವಿರುದ್ಧ ನಗರದ ಸಂವಿಧಾನ ವೃತ್ತದಲ್ಲಿ ಎಸ್‌ಎಫ್‌ಐ ನೇತೃತ್ವದಲ್ಲಿ ಪ್ರತಿಭಟನೆ ನಡೆಸಲಾಯಿತು.

ಎಸ್‌ಎಫ್‌ಐ ತಾಲೂಕು ಅಧ್ಯಕ್ಷ ಜೀವನ್ ಕುಮಾರ್, ತಾಲೂಕು ಕಾರ್ಯದರ್ಶಿ ಪ್ರಿಯಾ ಮಾತನಾಡಿದರು. ಪ್ರತಿಭಟನೆಯಲ್ಲಿ ಮುಖಂಡರಾದ ಆಕಾಶ್, ರಜಿಯಾ, ಭವಾನಿ, ನಿಜಾಮ್, ಪ್ರೀತಮ್, ಮುರುಳಿ, ಸಿಂಚನ, ಸಿಐಟಿಯುನ ವಿ.ಬಸವರಾಜು, ಡಿಹೆಚ್‌ಎಸ್‌ನ ವೆಂಕಟೇಶ್, ನಗರ ಕಾರ್ಮಿಕ ಸಂಘದ ಚಂದ್ರೇಗೌಡ, ಮಹದೇವ, ಕಟ್ಟಡ ಕಾರ್ಮಿಕ ಸಂಘದ ಶಿವರಾಮು, ವಿಮಾ ಪ್ರತಿನಿಧಿಗಳ ಸಂಘದ ರಾಧಕೃಷ್ಣ, ಚಿತ್ತರಂಜನ್ ಇತರರಿದ್ದರು.

# ಅಂಬೇಡ್ಕರ್ ಬದುಕಿದ್ದಾಗ ಅವರನ್ನು ಅವಮಾನಿಸಿದ್ದ ಕಾಂಗ್ರೆಸ್ಸಿಗರಿಗೆ ಈಗ ಮಾತನಾಡುವ ನೈತಿಕತೆ ಇಲ್ಲ

## ಕಾಂಗ್ರೆಸ್ಸಿಗರ ವಿರುದ್ಧ ಮಾಜಿ ಸಂಸದ ಪ್ರತಾಪ್ ಸಿಂಹ ವಾಗ್ದಾಳಿ



ಮೈಸೂರಿನ ಶಂಕರ ಮಠದ ಶಾರದಾಂಬೆ ದೇವಸ್ಥಾನದ ಬಳಿ ಮೈಸೂರು ಹನುಮ ಜಯಂತ್ಯುತ್ಸವ ಸಮಿತಿ ಆಯೋಜಿಸಿರುವ ಹನುಮ ಜಯಂತಿ ಕಾರ್ಯಕ್ರಮದ ಪ್ರಚಾರ ವಾಹನಕ್ಕೆ ಶನಿವಾರ ಮಾಜಿ ಸಂಸದ ಪ್ರತಾಪ್ ಸಿಂಹ ಚಾಲನೆ ನೀಡಿದರು. ಹಿರಿಯ ವಕೀಲರಾದ 'ಲಾ ಗೈಡ್' ವೆಂಕಟೇಶ್, ಜಿಲ್ಲಾ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಇತರರನ್ನು ಕಾಣಬಹುದು.



ಪ್ರತಾಪ್ ಸಿಂಹ ಸ್ವತಃ ಆಟೋ ಚಾಲನೆ ಮಾಡಿದ್ದನ್ನು ಕಾಣಬಹುದು.

ಮೈಸೂರು, ಡಿ.21(ಬಿಎಲ್ ಯು)– ಅಂಬೇಡ್ಕರ್ ಬದುಕಿದ್ದಾಗ ಅವರನ್ನು ಅವಮಾನಿಸಿ, ನೋವುಂಟು ಮಾಡಿದ್ದ ಕಾಂಗ್ರೆಸ್‌ನವರಿಗೆ ಈಗ ಅವರ ಬಗ್ಗೆ ಮಾತನಾಡಲು ಯಾವ ನೈತಿಕತೆ ಇದೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಪ್ರಶ್ನಿಸಿದ್ದಾರೆ.

ನಗರದ ಗನ್‌ಹೌಸ್ ಬಳಿಯ ಶಂಕರ ಮಠದಲ್ಲಿ ಇಂದು ಮೈಸೂರು ಹನುಮ ಜಯಂತ್ಯುತ್ಸವ ಸಮಿತಿ ಆಯೋಜಿಸಿದ್ದ ಪೋಸ್ಟರ್ ಬಿಡುಗಡೆ ಹಾಗೂ ಪ್ರಚಾರ ವಾಹನಕ್ಕೆ ಚಾಲನೆ ನೀಡಿದ ನಂತರ ಪತ್ರಕರ್ತರ ಜೊತೆ ಮಾತನಾಡಿದ ಅವರು, ಸಂಸತ್ತಿನಲ್ಲಿ ಅಂಬೇಡ್ಕರ್ ಬಗ್ಗೆ ಗೃಹ ಸಚಿವ ಅಮಿತ್ ಶಾ ನೀಡಿದ ಹೇಳಿಕೆಗೆ ವಿವಾದದ ರೂಪ ನೀಡುತ್ತಿರುವ ಕಾಂಗ್ರೆಸ್ ಧೋರಣೆಗೆ ಕಿಡಿಕಾರಿದರು.

ಅಂಬೇಡ್ಕರ್ ಅವರ ಜೀವಿತಾವಧಿಯಲ್ಲಿ ಅವಮಾನಿಸಿದರು, ನೋವುಂಟು ಮಾಡಿದ್ದರು. ಆದರೆ ಈಗ ಯಾವ ಮುಖ ಇಟ್ಟುಕೊಂಡು ಅಂಬೇಡ್ಕರ್ ಪರವಾಗಿ ಮಾತನಾಡುತ್ತಿದ್ದಾರೆ ಎಂದು ಪ್ರತಾಪ್ ಸಿಂಹ ಚಾಟಿ ಬೀಸಿದರು.

ಅಂಬೇಡ್ಕರ್ ಅವರಿಗೆ ಭಾರತ ರತ್ನ ನೀಡಿದ್ದು ಬಿಜೆಪಿ ಬೆಂಬಲಿತ ಸರ್ಕಾರ, ಸಂಸತ್ತಿನಲ್ಲಿ ಅಂಬೇಡ್ಕರ್ ಭಾವಚಿತ್ರ ಅನಾವರಣ ಮಾಡಿದ್ದು ಬಿಜೆಪಿ ಸರ್ಕಾರ. ಅಂಬೇಡ್ಕರ್ ನೆಲೆಸಿದ್ದ ಸಂದರ್ಶನದ ಸ್ಥಳಗಳಲ್ಲಿ ಪಂಚ ಪೀಠ ಸ್ಥಾಪನೆ ಮಾಡಿದ್ದು, ಬಿಜೆಪಿ ಸರ್ಕಾರ. ಅಂಬೇಡ್ಕರ್ ಬಗ್ಗೆ ಇಷ್ಟೆಲ್ಲಾ ಮಾತನಾಡುವ ಕಾಂಗ್ರೆಸ್‌ನವರು ಈ ಕೆಲಸಗಳನ್ನು ಅವರೇ ಮಾಡಬಹುದಿತ್ತಲ್ಲವೇ ಎಂದು ಮರು ಪ್ರಶ್ನಿಸಿದರು.

ದಿವಂಗತ ಪ್ರಧಾನಿ ಇಂದಿರಾ ಗಾಂಧಿ ಅವರು ದೇಶದಲ್ಲಿ ತುರ್ತು ಪರಿಸ್ಥಿತಿ ಹೇರುವ ಮೂಲಕ ಅಂಬೇಡ್ಕರ್ ಬರೆದ ಸಂವಿಧಾನವನ್ನು ಅಮಾನತ್ತಿನಲ್ಲಿಟ್ಟಿದ್ದರು. ಹೀಗಿರುವಾಗ ಅಂಬೇಡ್ಕರ್ ಬಗ್ಗೆ ಮಾತನಾಡಲು ಕಾಂಗ್ರೆಸ್‌ನವರಿಗೆ ಯಾವ ನೈತಿಕತೆ ಇದೆ.

ಅಭಿವೃದ್ಧಿ ವಿಚಾರದಲ್ಲಿ ನರೇಂದ್ರ ಮೋದಿ ಅವರನ್ನು ಸೋಲಿಸಲು ಸಾಧ್ಯವಿಲ್ಲ ಎಂದು ಖಚಿತವಾದ ನಂತರ ಈಗ ದಲಿತರ ಕಾರ್ಡ್ ಪ್ಲೇ ಮಾಡುತ್ತಿದ್ದಾರೆ. ಆದರೆ ಯಾವುದೇ ಕಾರಣಕ್ಕೂ ದಲಿತರನ್ನು ಬಿಜೆಪಿಯಿಂದ ದೂರ ಮಾಡಲು ಸಾಧ್ಯವಿಲ್ಲ ಎಂದು ಪ್ರತಾಪ್ ಸಿಂಹ ತಿರುಗೇಟು ನೀಡಿದರು.

ಮನೆಯಲ್ಲಿ ಭಗವದ್ಗೀತೆ, ಕುರಾನ್, ಬೈಬಲ್ ಇರುವಂತೆ ಸಮಾಜದ ರಕ್ಷಣೆಗೆ ಸಂವಿಧಾನವಿದೆ. ಸಂವಿಧಾನ ನಮಗೆ ರಕ್ಷಣೆ ನೀಡುತ್ತಿದೆ ಎಂದರು.

ಮಹಾತ್ಮ ಗಾಂಧಿಗಿಂತ ದೊಡ್ಡ ಚಿಂತನೆ ಮೈಗೂಡಿಸಿಕೊಂಡಿದ್ದ ಅಂಬೇಡ್ಕರ್ ಅವರು ದೂರದೃಷ್ಟಿ ನಾಯಕರಾಗಿದ್ದರು. ಆದರೆ ಕಾಂಗ್ರೆಸ್‌ನವರು ಅಂಬೇಡ್ಕರ್‌ಗೆ ಯಾವ ರೀತಿ ಗೌರವ ನೀಡಿದ್ದಾರೆ, ಯಾವ ರೀತಿ ನಡೆಸಿಕೊಂಡಿದ್ದಾರೆ ಎಂಬುದು ಇಡೀ ದೇಶಕ್ಕೆ ಗೊತ್ತಿದೆ ಎಂದು ಟಾಂಗ್ ನೀಡಿದರು.

ಅಂಬೇಡ್ಕರ್ ಬಗ್ಗೆ ಮಾತನಾಡಲು ಕಾಂಗ್ರೆಸ್ ನವರಿಗೆ ಮುಖವಿಲ್ಲ. ಆದ ಕಾರಣ ಬುರ್ಖಾ ಹಾಕಿಕೊಂಡು ಮಾತನಾಡಲಿ ಎಂದು ಪ್ರತಾಪ್ ಸಿಂಹ ಸಲಹೆ ನೀಡಿದರು.

### ಭಾರತದ ಕರೆನ್ಸಿಯಲ್ಲಿ ಅಂಬೇಡ್ಕರ್ ಭಾವಚಿತ್ರ ಹಾಕಬಹುದಿತ್ತಲ್ಲವೇ...

ಅಂಬೇಡ್ಕರ್ ಬಗ್ಗೆ ಇಷ್ಟೊಂದು ಪ್ರೀತಿ ತೋರುವ ಕಾಂಗ್ರೆಸ್‌ನವರು ಭಾರತದ ಕರೆನ್ಸಿ (ನೋಟು) ಯಲ್ಲಿ ಅಂಬೇಡ್ಕರ್ ಭಾವಚಿತ್ರವನ್ನೂ ಹಾಕಬಹುದಿತ್ತಲ್ಲವೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ಪ್ರಶ್ನಿಸಿದ್ದಾರೆ.

ಸ್ವಾತಂತ್ರ್ಯ ನಂತರ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಸರ್ಕಾರ ಕರೆನ್ಸಿಯಲ್ಲಿ ಮಹಾತ್ಮ ಗಾಂಧಿ ಭಾವಚಿತ್ರ ಹಾಕಿತು. ಅಂಬೇಡ್ಕರ್ ಬಗ್ಗೆ ಇಷ್ಟೊಂದು ಪ್ರೀತಿ ತೋರುವ ಅಂದಿನ ಕಾಂಗ್ರೆಸ್ ಸರ್ಕಾರ ಕರೆನ್ಸಿಯಲ್ಲಿ ಅಂಬೇಡ್ಕರ್ ಭಾವಚಿತ್ರವನ್ನೂ ಹಾಕಬಹುದಿತ್ತಲ್ಲವೆ ಎಂದು ಪ್ರಶ್ನಿಸಿದರು.

ಸಂಸತ್ತಿನಲ್ಲಿ ಅಂಬೇಡ್ಕರ್ ಅವರು ಭಾರತೀಯ ರಿಸರ್ವ್ ಬ್ಯಾಂಕ್ ಸ್ಥಾಪನೆಯ ನಿರ್ಣಯ ಮಂಡಿಸಿದ್ದರು. ದೂರದೃಷ್ಟಿ ಚಿಂತನೆ ಹೊಂದಿದ್ದ ಅಂಬೇಡ್ಕರ್ ಬಹಳಷ್ಟು ಸ್ಮರಣೀಯ ಕಾರ್ಯ ಮಾಡಿದ್ದಾರೆ. ಭಾರತ ಕರೆನ್ಸಿಯಲ್ಲಿ ಅಂಬೇಡ್ಕರ್ ಭಾವಚಿತ್ರ ಹಾಕಲು ಅವರು ಎಲ್ಲಾ ರೀತಿಯ ಗೌರವ ಹಾಗೂ ಅರ್ಹತೆ ಹೊಂದಿದ್ದರು ಎಂದರು.

ಜವಾಹರ ಲಾಲ್ ನೆಹರು, ಇಂದಿರಾ ಗಾಂಧಿ, ರಾಜೀವ್ ಗಾಂಧಿ, ಸಂಜಯ್ ಗಾಂಧಿ ಅಂತ್ಯಕ್ರಿಯೆಯನ್ನು ದೆಹಲಿಯಲ್ಲಿ ನೆರವೇರಿಸಲಾಯಿತು. ಆದರೆ ಅಂಬೇಡ್ಕರ್ ಅವರ ಅಂತ್ಯಕ್ರಿಯೆಗೆ ದೆಹಲಿಯಲ್ಲಿ ಅಂಗೈ ಅಗಲ ಜಾಗ ಕೂಡ ನೀಡಲಿಲ್ಲ. ಈಗ ಕಾಂಗ್ರೆಸ್‌ನವರು ಅಂಬೇಡ್ಕರ್ ಭಾವಚಿತ್ರ ಇಟ್ಟುಕೊಂಡು ಅವರ ಬಗ್ಗೆ ಬಹಳ ಪ್ರೀತಿಯಿಂದ ಮಾತನಾಡುತ್ತಾರೆ. ಇವರ ಈ ದ್ವಿಮುಖ ನೀತಿ ದೇಶದ ಜನರಿಗೆ ತಿಳಿದಿಲ್ಲವೇ ಎಂದು ಪ್ರತಾಪ್ ಸಿಂಹ ಪ್ರಶ್ನಿಸಿದರು

## ಕರ್ನಾಟಕ ಗೂಂಡಾ ರಾಜ್ಯವಾಗಿದೆ, ತಾಲಿಬಾನ್ ಸರ್ಕಾರ ಅಸ್ತಿತ್ವದಲ್ಲಿದೆ!!

ಸಿ.ಟಿ.ರವಿ ಬಂಧನ ಸೇರಿದಂತೆ ಹಲವು ಜನ ವಿರೋಧಿ ಕ್ರಮ ಕೈಗೊಳ್ಳುತ್ತಿರುವ ರಾಜ್ಯ ಕಾಂಗ್ರೆಸ್ ಸರ್ಕಾರದ ಧೋರಣೆಯಿಂದ ಕರ್ನಾಟಕ ಈಗ ಗೂಂಡಾ ರಾಜ್ಯವಾಗಿದೆ ಎಂದು ಮಾಜಿ ಸಂಸದ ಪ್ರತಾಪ್ ಸಿಂಹ ದೂರಿದ್ದಾರೆ.

ರಾಜ್ಯದಲ್ಲಿ ತಾಲಿಬಾನ್ ಮಾದರಿ ಸರ್ಕಾರ ಅಸ್ತಿತ್ವಕ್ಕೆ ಬಂದಿರುವ ಲಕ್ಷಣಗಳು ಗೋಚರಿಸುತ್ತಿದೆ. ಈಗ ಉತ್ತರ ಪ್ರದೇಶ ಮತ್ತು ಬಿಹಾರ ಬದಲಾಗಿವೆ ಆದರೆ ಕರ್ನಾಟಕ ಅವುಗಳ ಸ್ಥಾನ ಅಲಂಕರಿಸುತ್ತಿದೆ ಎಂದು ಆಪಾದಿಸಿದರು.

ತಮಿಳುನಾಡಿನಲ್ಲಿ ಜಯಲಲಿತಾ ಹಾಗೂ ಕರುಣಾನಿಧಿ ನಡುವೆ ನಡೆದ ರಾಜಕೀಯ ಬೆಳವಣಿಗಳು ಕರ್ನಾಟಕದಲ್ಲೂ ಆಗುತ್ತಿರುವುದು ಬೇಸರದ ಸಂಗತಿ. ಇದು ಒಳ್ಳೆಯ ಬೆಳವಣಿಗೆಯಲ್ಲ ಎಂದು ಪ್ರತಾಪ್ ಸಿಂಹ ಅಭಿಪ್ರಾಯಪಟ್ಟರು.

ಇವತ್ತು ಸಿ.ಟಿ.ರವಿಗೆ ಆದ ಕಹಿ ಅನುಭವ ಹನುಮ ಜಯಂತಿ ಆಚರಣೆ ವೇಳೆ ನನಗೂ ಆಗಿತ್ತು. ಸಿ.ಟಿ.ರವಿ ಅವರನ್ನು ರಾಜ್ಯ ಕಾಂಗ್ರೆಸ್ ಸರ್ಕಾರ ಹೀಗೆ ನಡೆಸಿಕೊಳ್ಳಬಾರದಿತ್ತು ಎಂದು ಅಭಿಪ್ರಾಯಪಟ್ಟರು.

ಮಾತಿನ ಭರಾಟೆಯಲ್ಲಿ ಜನಪ್ರತಿನಿಧಿಗಳು ಬಹಳಷ್ಟು ಬಾರಿ ಸಭ್ಯತೆಯ ಎಲ್ಲೆ ಮೀರುತ್ತಾರೆ. ವಿಧಾನಸೌಧದಲ್ಲಿ ಕಾಂಗ್ರೆಸ್‌ನವರು ಪಾಕಿಸ್ತಾನ್ ಜಿಂದಾಬಾದ್ ಎಂದಾಗ ಇದೇ ಲಕ್ಷ್ಮಿ ಹೆಬ್ಬಾಳ್ಕರ್ ಹಾಗೆ ಹೇಳಿಯೆ ಇಲ್ಲ ಎಂದು ಸಮರ್ಥನೆ ಮಾಡಿಕೊಂಡಿದ್ದರು. ತಾಂತ್ರಿಕ ವರದಿ ಬಂದ ನಂತರ ಲಕ್ಷ್ಮಿ ಹೆಬ್ಬಾಳ್ಕರ್ ಮೌನವಾದರು.

ವಿಧಾನಪರಿಷತ್‌ನಲ್ಲಿ ಸಿ.ಟಿ.ರವಿ ಏನು ಹೇಳಿದ್ದಾರೆ ಎಂದು ತಾಂತ್ರಿಕ ವರದಿಯಿಂದ ದೃಢಪಡಲಿ. ತರುವಾಯ ಸೂಕ್ತ ಕ್ರಮ ಕೈಗೊಳ್ಳಲಿ. ಆದರೆ ಸರ್ಕಾರ ಪೊಲೀಸರನ್ನು ಛೂ ಬಿಟ್ಟಿರುವುದು ಎಷ್ಟರ ಮಟ್ಟಿಗೆ ಸರಿ. ಸಭಾಧ್ಯಕ್ಷರ ಸುಪರ್ದಿಯಲ್ಲಿದ್ದ ವಿಧಾನಪರಿಷತ್ ಒಳಗೆ ಪೊಲೀಸರು ಅದು ಹೇಗೆ ಪ್ರವೇಶಿಸಿದರು ಎಂದು ಪ್ರಶ್ನಿಸಿದರು.

ಪೋಸ್ಟರ್ ಬಿಡುಗಡೆ ಕಾರ್ಯಕ್ರಮದಲ್ಲಿ ಜಿಲ್ಲಾ ಬ್ರಾಹ್ಮಣ ಮಹಾಸಭಾದ ಅಧ್ಯಕ್ಷ ಡಿ.ಟಿ.ಪ್ರಕಾಶ್, ಹಿರಿಯ ವಕೀಲ 'ಲಾ ಗೈಡ್' ವೆಂಕಟೇಶ್, ಕಾವೇರಿ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಡಾ.ಚಂದ್ರಶೇಖರ್, ಸಮಿತಿಯ ಶಂಭು, ಮನುಶ್ರೈವ, ಪರಮೇಶ್, ಸಂಜಯ್ ಸೇರಿದಂತೆ ಹಲವರು ಹಾಜರಿದ್ದರು.

## ಡಿ.29 ರಂದು ವಿಶೇಷ ಕಾರ್ಯಾಗಾರ

ಮೈಸೂರು, ಡಿ.21–ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವತಿಯಿಂದ ಡಿಸೆಂಬರ್ 29 ರಂದು ಯುವಜನತೆಯನ್ನು ಸಶಕ್ತಗೊಳಿಸುವ ನಿಟ್ಟಿನಲ್ಲಿ ಒತ್ತಡವನ್ನು ಹೇಗೆ ನಿರ್ವಹಿಸಬೇಕು ಮತ್ತು ಯುವಜನತೆಗೆ ಸಂಬಂಧಿಸಿದ ವಿಷಯ ಕುರಿತು ಪೋಷಕರಿಗೆ ವಿಶೇಷ ಕಾರ್ಯಗಾರವನ್ನು ಹಮ್ಮಿಕೊಳ್ಳಲಾಗಿದೆ.

ಮೈಸೂರು ಜಿಲ್ಲೆಯ ಪೋಷಕರು ಸದರಿ ಕಾರ್ಯಾಗಾರದಲ್ಲಿ ಭಾಗವಹಿಸಿ ಪ್ರಯೋಜನವನ್ನು ಪಡೆದುಕೊಳ್ಳಬಹುದಾಗಿದ್ದು, ಮೊದಲು ಬಂದ 50 ಪಾಲಕರು, ಪೋಷಕರಿಗೆ (ಕುಟುಂಬದಲ್ಲಿ ಒಬ್ಬರಿಗೆ ಮಾತ್ರ) ಆದ್ಯತೆಯನ್ನು ನೀಡಲಾಗುತ್ತದೆ.

ಹೆಚ್ಚಿನ ಮಾಹಿತಿಗಾಗಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರ ದೂ.ಸಂ:0821–2564179, ಯುವ ಸ್ಪಂದನ ಕೇಂದ್ರದ ದೂ.ಸಂ: 0821–2444922, ಯುವ ಸ್ಪಂದನ ಕೇಂದ್ರದ ಕ್ಷೇತ್ರ ಸಂಪರ್ಕಾಧಿಕಾರಿಗಳಾದ ಆನಂದ ಬಿ.ಸಿ. ಅವರ ಮೊ. ಸಂ: 9632104204 ನ್ನು ಸಂಪರ್ಕಿಸಬಹುದು ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರಾದ ಭಾಸ್ಕರ್ ನಾಯಕ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಗಾಂಧಿನಗರದಲ್ಲಿ ಪ್ರತಿಭಟನೆ




ಡಾ.ಬಿ.ಆರ್.ಅಂಬೇಡ್ಕರ್ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆಯನ್ನು ಖಂಡಿಸಿ ಕರ್ನಾಟಕ ದಲಿತ್ ಪ್ಯಾಂಥರ್ ಸಂಘಟನೆಯೂ ಸೇರಿದಂತೆ ವಿವಿಧ ಸಂಘಟನೆಗಳ ಸಹಯೋಗದಲ್ಲಿ ಮೈಸೂರಿನ ಗಾಂಧಿನಗರದಲ್ಲಿ ಪ್ರತಿಭಟನೆ ನಡೆಸಲಾಯಿತು. ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ನೇತೃತ್ವದಲ್ಲಿ ಗಾಂಧಿನಗರದ ಮೂಲನಿವಾಸಿಗಳು ಅಂಬೇಡ್ಕರ್ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ, ಆಕ್ರೋಶ ವ್ಯಕ್ತಪಡಿಸಿದರು. ಶ್ರೀ ಸವಿತಾನಂದ ಸ್ವಾಮೀಜಿ, ಮುಖಂಡರಾದ ಆರ್.ಸಿದ್ದಪ್ಪ, ಶಿವಕುಮಾರ್, ದಲಿತ್ ಫ್ಯಾಂಥರ್ಸ್ ಅಧ್ಯಕ್ಷ ಯೋಗ ನರಸಿಂಗ, ಪೈ.ನಾಗಣ್ಣ, ಕಿರಣ್‌ಕುಮಾರ್, ಪುಟ್ಟರಂಗಸ್ವಾಮಿ, ನವೀನ್, ಚೇತನ್ ಕಾಂತರಾಜ್, ಪ್ರತಾಪ್, ಸಿದ್ದರಾಜು, ಆರ್ಕೆಸ್ಟ್ರಾ ಸಂತೋಷ್, ದೇವೇಂದ್ರ, ರಾಜೇಶ್, ಜನಾರ್ಧನ್, ಜವರಪ್ಪ, ಎನ್.ಪಿ.ಮೋಹನ್, ದೇವಣ್ಣ, ಪ್ರಕಾಶ್, ಪ್ರಮೋದ್ ಮತ್ತಿತರರು ಪಾಲ್ಗೊಂಡಿದ್ದರು.





## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ ಚಿತ್ರಮಂದಿರ** | (ದೂ: 2521923) |
| ಪುಷ್ಪ–2 (ಕ) | 3 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್ ಚಿತ್ರಮಂದಿರ** | (ದೂ: 2422871) |
| ಯುಐ (ಕ) | 4 ಪ್ರದರ್ಶನಗಳು |
| **ಬಾಲಾಜಿ ಚಿತ್ರಮಂದಿರ** | (ದೂ: 2497199) |
| ಪುಷ್ಪ–2 (ಹಿಂ) | 4 ಪ್ರದರ್ಶನಗಳು |
| **ಮಹದೇಶ್ವರ ಚಿತ್ರಮಂದಿರ** | (ಮೊ:9900820093) |
| ಪುಷ್ಪ–2 (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಯುಐ (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| ವಿಡುದಲೈ (ತ) | 4 ಪ್ರದರ್ಶನಗಳು |
| **ಸಂಗಂ** | |
| ಪುಷ್ಪ–2 (ಕ) | 4 ಪ್ರದರ್ಶನಗಳು |
| **ಲಿಡೋ** | |
| ಲಕ್ಕಿ ಭಾಸ್ಕರ್ (ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| ಭೈರತಿ ರಣಗಲ್ (ಕ) | 4 ಪ್ರದರ್ಶನಗಳು |
| **ಪ್ರಭಾ** | |
| ಪುಷ್ಪ–2 (ತೆ) | 4 ಪ್ರದರ್ಶನಗಳು |

### ಡಿಆರ್‌ಸಿ ಸಿನಿಮಾಸ್
ದೂ : 4240422/4241800

| | |
|---|---|
| ಸ್ಕ್ರೀನ್ 1 | ಯುಐ (2024) (ಕ): ಬೆ.9.30ಕ್ಕೆ, ಮುಫಾಸ ದಿ ಲಯನ್ ಕಿಂಗ್ (3ಡಿ)(ಇಂ): ಮ.12.10ಕ್ಕೆ, ಮ.2.35ಕ್ಕೆ, ಸಂ.5ಕ್ಕೆ, ರಾ.7.25ಕ್ಕೆ, ಮಾರ್ಕೋ (ಮ): ರಾ.9.55ಕ್ಕೆ. |
| ಸ್ಕ್ರೀನ್ 2 | ಯುಐ (2024) (ಕ): ಬೆ.9ಕ್ಕೆ, ಪುಷ್ಪಾ 2 (ತೆ): ಮ.12.05ಕ್ಕೆ, ವಿಡುತಲೈ 2 (ತ): ಮ.3.55ಕ್ಕೆ, ರಾ.10.05ಕ್ಕೆ, ವನ್ವಾಸ್ (ಹಿಂ): ರಾ.7ಕ್ಕೆ |
| ಸ್ಕ್ರೀನ್ 3 | ಇಡಿ ಎಕ್ಸ್ಟ್ರಾ ಡಿಸೆಂಟ್ (ಮ): ಬೆ.9.50ಕ್ಕೆ, ಪುಷ್ಪಾ 2 (ಕ): ಮ.12.15ಕ್ಕೆ, ಸಂ.6.10ಕ್ಕೆ, ಹರಿದಾಸರ ದಿನಚರಿ (ಕ): ಸಂ.4.05ಕ್ಕೆ, ಬಚ್ಚಲ ಮಲ್ಲಿ (ತೆ): ರಾ.10.05ಕ್ಕೆ, |
| ಸ್ಕ್ರೀನ್ 4 | ಯುಐ (2024) (ಕ): ಬೆ.8.30ಕ್ಕೆ, ಬೆ.11.10ಕ್ಕೆ, ಮ.1.50ಕ್ಕೆ, ಸಂ.4.30.ಕ್ಕೆ, ರಾ.7.15ಕ್ಕೆ, ರಾ.10ಕ್ಕೆ. |

### ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

| | |
|---|---|
| ಸ್ಕ್ರೀನ್ 1 | ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ. |
| ಸ್ಕ್ರೀನ್ 2 | ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ. |
| ಸ್ಕ್ರೀನ್ 3 | ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ. |
| ಸ್ಕ್ರೀನ್ 4 | ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ. |

### ಮೈಸೂರು ವಿಷನ್ ಸಿನಿಮಾ
ದೂ : 0821–2973519

| | |
|---|---|
| ಸ್ಕ್ರೀನ್ 1 | ಅಮರನ್ (ಕ): ಬೆ.10.30ಕ್ಕೆ, ರಾ.7.30ಕ್ಕೆ, ಭೈರತಿ ರಣಗಲ್ (ಕ): ಮ.1.45ಕ್ಕೆ, ಧೀರ ಭಗತ್ ರಾಯ್ (ಕ): ಸಂ.4.30ಕ್ಕೆ. |
| ಸ್ಕ್ರೀನ್ 2 | ಭೈರತಿ ರಣಗಲ್ (ಕ): ಬೆ.10.40ಕ್ಕೆ, ಪುಷ್ಪಾ 2 (ಕ): ಮ.1.15ಕ್ಕೆ, ಸಂ.5.15ಕ್ಕೆ, ರಾ.9.15ಕ್ಕೆ. |
| ಸ್ಕ್ರೀನ್ 3 | ಪುಷ್ಪಾ 2 (ಕ): ಬೆ.11.30ಕ್ಕೆ, ರಾ.7.45ಕ್ಕೆ, ಪುಷ್ಪಾ 2 (ತೆ): ಸಂ.4ಕ್ಕೆ. |
| ಸ್ಕ್ರೀನ್ 4 | ಪುಷ್ಪಾ 2 (ತೆ): ಬೆ.10.30ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಪುಷ್ಪಾ 2 (ಕ): ಮ.2.15ಕ್ಕೆ. |

### ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಏಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.



**ಮೈಸೂರು ಮಿತ್ರ ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು



ಒಂದೇ ನಾಡು
ಒಂದೇ ಕುಲ
ಒಂದೇ ದೈವ
ಜಯ ಕರ್ನಾಟಕ
ಕಟ್ಟೋಣ ನಾವು ಹೊಸ ನಾಡೊಂದನು
JAYAKARNATAKA
ಶ್ರೀಯುತ ಎನ್. ಮುತ್ತಪ್ಪ ರೈ
ಸಂಸ್ಥಾಪಕರು
ಬಿ.ಎನ್. ಜಗದೀಶ್
ರಾಜ್ಯಾಧ್ಯಕ್ಷರು
ಜಯ ಕರ್ನಾಟಕ ಸಂಘಟನೆಯ
ಮೈಸೂರು ಜಿಲ್ಲಾ ಗೌರವಾಧ್ಯಕ್ಷರಾದ
ಶ್ರೀಯುತ
ಶ್ರೀ ಗುರುಪ್ರಸಾದ್
ರವರಿಗೆ
ಜನ್ಮದಿನದ
ಶುಭಾಶಯಗಳು
ನೀವು ಸವಾರಿ ಮಾಡುವ ಮೊದಲು ನಿಮ್ಮನ್ನು ಸುರಕ್ಷಿತವಾಗಿರಿಸಿಕೊಳ್ಳಿ.
ಶ್ರೀ ಹರ್ಷಗೌಡ್ರು
ಮೈಸೂರು ನಗರ ಅಧ್ಯಕ್ಷರು
Wear Helmet
ನಾನು ಸಾಯುವ ಸಾಧ್ಯತೆ 85% ಇದೆ
THERE IS AN 85% CHANCE I'LL DIE
ನಾನು ಬದುಕಲು 85% ಅವಕಾಶವಿದೆ
THERE IS AN 85% CHANCE I'LL LIVE
SECURE YOURSELF BEFORE YOU RIDE
ಲಾರಿ ಶ್ರೀನಿವಾಸ್
ಮೈಸೂರು ಜಿಲ್ಲಾ ಅಧ್ಯಕ್ಷರು
ಮದ್ಯಪಾನ ಮಾಡಿ ವಾಹನ ಚಾಲನೆ ಮಾಡಬೇಡಿ
DON'T MIX DRINKING & DRIVING
ಪ್ರಕಟಣೆ : ಲಾರಿ ಶ್ರೀನಿವಾಸ್ ಮೈಸೂರು ಜಿಲ್ಲಾ ಅಧ್ಯಕ್ಷರು